ಅಪರಂಜಿ


ತಿಳಿನಗೆಯ ಕಾರಂಜಿ



ಬೆಳ್ಳಿ ಹಬ್ಬದ ವರ್ಷ

ಫೆಬ್ರವರಿ - 2008





ಮೇ ನಲ್ಲೇ ಎಲೆಕ್ಷನ್ ಮಾಡ್ತೀನಿ
ಅಂತ ಹೇಳಿ ಸಾರ್, ಸುಮ್ಮನಾಗ್ತಾರೆ!

ಬಿಡಿ ಪ್ರತಿ: ರೂ.10.00

ಅಪರಂಜಿ

ತಿಳಿನಗೆಯ ಕಾರಂಜಿ




ಸಂಪುಟ 25
ಸಂಚಿಕೆ - 5
ಫೆಬ್ರವರಿ - 2008

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



○ ಪ್ರಕಾಶ್

ಗೆದ್ದ ಆಸ್ಟ್ರೇಲಿಯಾ; ಸೋತ ಕ್ರಿಕೆಟ್ - ಕ್ರೀಡಾ ಸುದ್ದಿ

● "Benson Hedged!' ಅನ್ನಬಹುದು ಈಗ!!

★★★

ಮೇಲುಕೋಟೆ ದೇಗುಲದಲ್ಲಿ ಆಭರಣಗಳ ಕಳವು - ಸುದ್ದಿ

● ಕಳ್ಳರು, ಪೂಜೆ ಮಾಡಿದ ನಂತರ ಕಾರ್ಯಗತರಾದರು ಎನ್ನುವುದು ಶುದ್ಧ ಕುಹಕ!!

★★★

ಗೆಳತಿ ಜೊತೆ ಭಾರತಕ್ಕೆ ಫ್ರಾನ್ಸ್ ಅಧ್ಯಕ್ಷ - ಪತ್ರಿಕೆ

● 'ಶಿವಸೇನೆ'ಯವರಿಗೆ ಹೇಳಬೇಡಿ!!

★★★

'ಪರಿಸರ ನಾಶಕ್ಕೆ ಕಡಿವಾಣ ಬೇಕು' - ಹೇಳಿಕೆ

● ಅದನ್ನ ಹಿಡಿಯುವವರಾರು??

★★★

ಹನುಮಂತ ನಗರದಲ್ಲಿ ಅಜ್ಜಿಯರ ಕ್ರಿಕೆಟ್ ಟೂರ್ನಿ!! - ಸುದ್ದಿ

● ಅದಕ್ಕೆ ಆಂಡ್ರೂ ಸೈಮಂಡ್ಸ್ ಬರುತ್ತಾರೋ?!

★★★

ದಕ್ಷಿಣ ಆಫ್ರಿಕಾದ ಪ್ರಾಕ್ಟರ್, ಹರ್‌ಭಜನ್ ವಿರುದ್ಧ 'ಜನಾಂಗೀಯ ನಿಂದನೆ' ಆರೋಪ ಮಾಡಿದ್ದನ್ನು ಕೇಳಿ ಗಾಂಧೀಜಿ ಬೆಚ್ಚಿ ಬಿದ್ದರಂತೆ!!

★★★

'ನಾನು ಕರ್ನಾಟಕಕ್ಕೆ ಬರುತ್ತೇನೆ' - ಶ್ರೀ ಎಸ್.ಎಂ. ಕೃಷ್ಣ


● "ಧರ್ಮ ಸಂಸ್ಥಾಪನಾರ್ಥಾಯ...?"

★★★

"ಸಿಡ್ನಿ ಫೇಲ್ಯೂರ್" - ಪ್ರಜಾವಾಣಿಯಲ್ಲಿ ಶೀರ್ಷಿಕೆ

● ಆಹಾ!! ಶೀರ್ಷಿಕೆ ಅಂದರೆ ಹೀರಬೇಕು
ಅಂತ ಅಪರಂಜಿ ಮೆಚ್ಚಿದಳಂತೆ!

★★★



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯ


- ಕು.ಗೋ.

'ಒಂದಾಣೆ ಮಾಲೆ' ಮುಖಾಂತರ ತಾವೂ ಬೆಳೆದು ಇತರ ಅನೇಕ ಸಾಹಿತಿಗಳನ್ನು ಬೆಳೆಸಿದ ಕೀರ್ತಿ ಕುಡ್ವಿ ವಾಸುದೇವ ಶೆಣೈ ಅವರದು. ಇಪ್ಪತ್ತು ಪುಟಗಳೊಳಗೆ, ಬಹಳ ಕಡಿಮೆ ಬೆಲೆಗೆ ಪ್ರಕಟವಾಗಿ ಓದುಗರು ಓದಲು ತುದಿಗಾಲಿನಲ್ಲಿ ನಿಂತು ಕಾಯುವಂತೆ ಮಾಡಿ, ಒಳ್ಳೆಯ ಅಭಿರುಚಿಯ ಸಾಹಿತ್ಯವನ್ನು ಒದಗಿಸಿ ಬಹಳ ಉಪಕಾರ ಮಾಡಿದವರು ಕುಡ್ವಿಯವರು.

ಕುಡ್ವಿಯವರ ಬರಹಗಳಲ್ಲಿ ವಿನೋದವಿದೆ, ವಿಡಂಬನೆ ಇದೆ, ಲವಲವಿಕೆ ಇದೆ, ಆದೇಶ ಇದೆ, ಸಂದೇಶ ಇದೆ, ಅವರು ಸಾಹಸದ ಕಥೆಗಳು, ಪಂಡಿತನ ಪಿಟೀಲು ಮತ್ತು ಇತರ ಕಥೆಗಳು, ಜಾತಕ ಪಠನ ಮತ್ತು ಇತರ ಕಥೆಗಳು, ಹೀಗೆ ನೂರಾರು ಲೇಖನಗಳನ್ನು, ಕಥೆಗಳನ್ನು ಬರೆದು ರಂಜಿಸಿದ್ದಾರೆ. ಜಗತ್ತಿನ ಹಲವು ಬಗೆಯ ವಂಚಕರ, ಕಳ್ಳರ, ಕೃಪಣರ ಕಥೆಗಳನ್ನೂ, ನೈಜ ಘಟನೆಗಳನ್ನೂ ಕುಡ್ವಿಯವರು ಬರೆದಿದ್ದಾರೆ. ಅವನ್ನೆಲ್ಲ ಒಟ್ಟುಗೂಡಿಸಿ ಅವರ ಸಮಗ್ರ ಲೇಖನಗಳನ್ನೂ ಪ್ರಕಟಿಸುವವರು ಈಗ ಇಲ್ಲವಾಗಿದ್ದಾರೆ.

ಜಾತಕ ಪಠನದ 'ಮರೆವು' ಎಂಬ ಲೇಖನ ಅಪರಂಜಿಗಾಗಿ ಆರಿಸಿದ್ದೇನೆ. ಕುಡ್ವಿಯವರ ಇತರ ಲೇಖನಗಳನ್ನೂ ಸಿಕ್ಕಿದಾಗ ಓದಿ ಆನಂದಿಸುವ ಪಾಲು ನಮ್ಮದಾಗಬೇಕು.

ಮಂಗಳೂರಿನ ಪ್ರಭಾತ ಪತ್ರಿಕೆ ಎಂದೊಡನೆ ಕುಡ್ವಿಯವರ ನೆನಪಾಗಲೇ ಬೇಕು.



ಛೇ, ಇನ್ನೂ ನಾನು ಚೆಕ್‌ನಲ್ಲಿ ಬಿ.ಸಿ. ಅಂತ್ಲೇ ಬರೀತಿದೀನಲ್ಲಾ
ಎ.ಡಿ. ಅಂತ ಬರಿಯೋದ್ಬಿಟ್ಟೂ

ಮರೆವು

- ಕುಡ್ವಿ ವಾಸುದೇವ ಶೆಣೈ

ಡಾಕ್ಟರರು ಚಿಂತಾಮಗ್ನರಾಗಿ ಕುಳಿತಿದ್ದರು. ಅನೇಕ ವರ್ಷಗಳಿಂದ ''ತಕ್ಕ ವೇಳೆಯಲ್ಲಿ ತಕ್ಕ ಕೆಲಸಮಾಡುವವರು'' ಎಂಬ ಹೆಸರು ಪಡೆದವರು. ವಿಶೇಷವಾಗಿ, ಬೆಳಿಗ್ಗೆ ಒಂಭತ್ತಕ್ಕೆ ಏಳುವುದು, ಹತ್ತರೊಳಗೆ ಚೊಕ್ಕವಾಗಿ ಕ್ಷೌರಮಾಡಿ, ಮಡಿಯುಡುಪುಗಳನ್ನು ಧರಿಸಿ, ತಲೆಯೂ ನಗುವಷ್ಟು ಸುಂದರವಾಗಿ ಬಾಚಿ, ಮುಖದ ಮೇಲೂ ಮಂದಸ್ಮಿತ ಧರಿಸಿ, ಹತ್ತು ಘಂಟೆಯ ಸೂರ್ಯನಷ್ಟೇ ಬೆಳ್ಳಗಾಗಿ ಹೊರಬಂದು, ಅಲ್ಲಿ ಕಾದಿರುವ ಐದಾರು ಮಂದಿಯ ಕೈಗಳನ್ನು ಹಿಡಿದು, ನಾಲಿಗೆ ಹೊರ ಚಾಚಿಸಿ, ಎದೆ ಎಲುಬುಗಳಿಗೆ ಚಿಟಿಕಿ ಹೊಡೆದು, ಆ ಮೇಲೆ ಎರಡು ಕ್ಷಣ ಯೋಚನಾಪರರಾಗಿ, ಮತ್ತೆ ಫಕ್ಕನೆ ಮುಗುಳ್ನಗೆ ನಕ್ಕು, ಚಿಕ್ಕ ಕಾಗದದ ತುಂಡಿನಲ್ಲಿ ಮದ್ದು ಬರೆದು, ಬಾಟಲಿ ತುಂಬಿಸಿಕೊಟ್ಟು ಕಳಿಸುವುದು- ಇದೆಲ್ಲವನ್ನೂ ನಿರ್ವಹಿಸುವ ರೀತಿಯು ಚೊಕ್ಕದಾಗಿ ಕಾಣಿಸುತ್ತಿತ್ತು.

ಅನೇಕ ವೇಳೆ, – ಸ್ಥಳೀಯ ಭಜನಾ ಮಂಡಲಿಯ ಏಕಾಹ ಭಜನಾವಂತಿಗೆಗಾಗಿ ಅಥವಾ ಅಖಿಲ ಭಾರತ ಖ್ಯಾತಿಯ ಪರಶುರಾಮ ಪರಡೀಕರರ ಸಂಗೀತದ ವಂತಿಗೆಗಾಗಿ ಬಂದು ಕಾಯುವವರ ದಣಿದ ಕಪ್ಪು ಮುಖಗಳನ್ನು ಕಂಡು ರೋಗಿಗಳೆಂದು ಖಚಿತಮಾಡಿಕೊಂಡು, ನಾಲಿಗೆ ಹೊರಹಾಕಿಸಿ, ನಾಡಿ ನೋಡಿ, ಕಣ್ಣು ರೆಪ್ಪೆ ಎತ್ತಿ, ಇಣಿಕಿ, ಎದೆಗೂ ಬೆನ್ನಿಗೂ ನಳಿಗೆ ಚುಚ್ಚಿ ದೀರ್ಘಶ್ವಾಸ ಎಳೆಸಿ, – ಆರು ತಿಂಗಳ ತನಕ ಅಲುಗಾಡದೆ ಹಾಸಿಗೆಯಲ್ಲಿರಲು ಅಪ್ಪಣೆಮಾಡಿದ ಉದಾಹರಣೆಗಳುಂಟು. ಮನೆಯಲ್ಲಿ ಯಾರೋ ಹಳೇ ಮೋಟಾರಿನ ಶಬ್ದ ತೆಗೆದು ಹಾಸಿಗೆಯಲ್ಲಿ ಚಡಪಡಿಸುತ್ತಿರುವರೆಂದು ವರದಿಮಾಡಲು ಬಂದರೆ, ವರದಿಮಾಡಿದವನಿಗೇ ಇಂಜೆಕ್ಷನ್ ಚುಚ್ಚಿ ''ಕೈ ಬಾತರೆ ಶಾಖ ಕೊಡಲು ಮರೆಯಬಾರದೆಂದು'' ಬೋಧಿಸಿದ್ದುಂಟು. ''ಜ್ವರ ಸ್ವಲ್ಪ ಹೆಚ್ಚಿದೆ, ಭೇದಿ ಎರಡು ಪಾಲಿದೆ'' ಎಂದು ತಿಳಿಸಿದ ಕೆಲವರಿಗೆ, ''ಇನ್ನು ಸ್ವಲ್ಪ ಗಂಜಿ ಮತ್ತು ಕಾಫಿ ಕೊಡಬಹುದು'' ಎಂದು ಹೇಳಿದ್ದುಂಟು. ಸ್ನೇಹಿತರೊಡನೆ ಮಾತಾಡಿ ಕುಳಿತಿದ್ದಾಗ, ಇನ್ನೊಂದು ಪಕ್ಕದಲ್ಲಿ ರೋಗಿಯನ್ನು ಕುಳ್ಳಿರಿಸಿ, ನಾಲಿಗೆ ಹೊರಗೆ ಹಾಕು ಎಂದು ಹೇಳಿ ಅವನ ಕೈಯ ನಾಡಿ ಹಿಡಿದು, ಅರ್ಧ ತಾಸಿನ ತನಕ ಕೈಬಿಡದೆ, – ಆ ಅರ್ಧತಾಸೂ ಆ ಜೀವಿಯು ಒಂದು ಮಾನವಶ್ವಾನವೆನಿಸುವಂತೆ ನಾಲಿಗೆ ಹೊರಗೆ ಬಿಟ್ಟು, ನಾಲಿಗೆ ಒಳಗೆ ಎಳೆದುಕೊಳ್ಳುವ ಧೈರ್ಯವಿಲ್ಲದೆ ಕಣ್ಣುಗಳಿಂದ ನೀರಿಳಿಸುತ್ತಿರಲು, ಫಕ್ಕನೆ ಕೈಬಿಟ್ಟು ಮದ್ದು ಬರೆದು ಕಳಿಸಿದ್ದುಂಟು; ಆ ಮನುಷ್ಯನಿಗೆ ಬೇಗ ಗುಣವಾದ ದೃಷ್ಟಾಂತವೂ ಉಂಟು.

ಇತ್ತೀಚೆಗೆ ಅವರ ಮರೆವು ಹೆಚ್ಚಲಾರಂಭಿಸಿತ್ತು. ಹೊರ ಜಗತ್ತಿನೊಡನೆ ವ್ಯವಹರಿಸುವಾಗ ಅವರ ಮರೆವಿನಿಂದ ಇತರರಿಗೆ ವಿಪರೀತ ಪರಿಣಾಮವುಂಟಾದರೂ ಚಿಂತೆಯಿರಲಿಲ್ಲ. ಆದರೆ, ಸ್ವತಃ ತನ್ನ ಗೃಹಿಣಿಯ ಆಜ್ಞೆಗಳನ್ನು ಅವರು ಪೂರ್ಣವಾಗಿ ಯಾವಾಗಿನಿಂದ ಮರೆಯಲಾರಂಭಿಸಿದರೋ ಅಂದಿನಿಂದ ಅವರ ಗೃಹಶಾಂತಿಯು ಕಡಿಮೆಯಾಗಿ, ಅವರ (ಡಾಕ್ಟರರ) ಮುಖದ ಮೇಲೆ ಕೆಲವು ನೂರು ನೆರಿಗೆಗಳೆದ್ದು ನಿಂತಿದ್ದುವು; ಇನ್ನೂ ಏಳುತ್ತಲೇ

ಇದ್ದುವು. ಅವರ ಶ್ರೀಮತಿಯು ತನ್ನ ಗಂಡನ ಮೇಲೆ ಪೂರ್ಣ ಅವಿಶ್ವಾಸದ ಠರಾವು ಮಾಡಿದ್ದಳು. ಯಾವ ಕಾಯಿಲೆ ತನಗೆ ಬಂದರೂ ಸಾಕ್ಷಾತ್ ಪತಿಯಾದ ಇವರಿಂದ ಮಾತ್ರ ತಾನು ಒಂದು ತೊಟಕಾದರೂ ಔಷಧ ತೆಗೆದುಕೊಳ್ಳುವುದಿಲ್ಲವೆಂದು ಮನೆ ಕೊಠಡಿಯೊಳಗಿನ ದೇವರ ಪಠದ ಮುಂದೆ ನಿಂತಿದ್ದಾಗ ಒಮ್ಮೆ ಆಣೆಯಿಟ್ಟುಕೊಂಡಿದ್ದಳು. ಈ ದಿನ ಮಧ್ಯಾಹ್ನ ಶ್ರೀಮತಿಯೊಡನೆ ಮರವೆಯ ವಿಷಯವಾಗಿ ಅರ್ಧ ತಾಸಿನ ವಾಗ್ಯುದ್ಧವಾಗಿ ಡಾಕ್ಟರರು ಊಟಮಾಡದೆ ಚಿಕಿತ್ಸಾಲಯಕ್ಕೆ ಬಂದಿದ್ದರು.

ಡಾಕ್ಟರರು ಚಿಂತಿಸುತಿದ್ದರು: ''ಮರವೆಗೇನು ಔಷಧ? ತನ್ನ ಶ್ರೀಮತಿಯು ತಾಳ್ಮೆಗೆಡದಂತೆ ಎಲ್ಲವನ್ನೂ ಹೇಗೆ ನೆನಪಿಟ್ಟುಕೊಳ್ಳುತ್ತಾಳೆ?''

ಆಕಸ್ಮಿಕವಾಗಿ ಅವರ ಮೇಜಿನ ಮುಂದೆ ಒಂದು ತೆರೆ ಬಂದಂತಾಯಿತು. ಕಣ್ಣೆತ್ತಿ ನೋಡಿದರು: –ನೆರೆಮನೆಯ ಮೀನಾಕ್ಷಿ

''ಏನು?'' – ಡಾಕ್ಟರರು ಕಣ್ಣುಗಳಿಂದಲೇ ಪ್ರಶ್ನಿಸಿದರು.

''ಡಾಕ್ಟರರೇ!'' – ಮೀನಾಕ್ಷಿಯು, ಬಲು ಕಳವಳದಿಂದ ವಿವರಿಸಿದಳು:

''ನಮ್ಮ ಯಜಮಾನರಿಗೆ ಕಾಯಿಲೆ.''

''ಎಷ್ಟಿದೆ ಜ್ವರ?''

''ಜ್ವರವಿಲ್ಲ.''

''ಹೊಟ್ಟೆನೋವು?''

''ಹೊಟ್ಟೆನೋವಿಲ್ಲ.''

''ಉಳುಕು? ನೆಗಡಿ? ಗಂಟಲು ನೋವು? ತಲೆ ತಿರುಗುವುದು? ಎದೆಯೊಳಗೆ ಒತ್ತಿದಂತಾಗುವುದು? ಹಸಿವು ಕಡಿಮೆ? ಒಣ ಕೆಮ್ಮು? ಕಣ್ಣು ಬಿಳುಪೇರಿದೆ?....''

''ಇಲ್ಲ''

''ಹಾಗಾದರೆ, ಅವರಿಗೆ ಕಾಯಿಲೆಯಿಲ್ಲ'' – ಡಾಕ್ಟರರು ಉತ್ತರ ಕೊಟ್ಟು ಒಂದು ನಿಟ್ಟುಸಿರುಬಿಟ್ಟರು.

''ಡಾಕ್ಟರರೇ, ನಾನು ಹೆಚ್ಚಿಗೆ ಮಾತಾಡುವುದಿಲ್ಲ......''

''ಕೂಡದು.''

''ಡಾಕ್ಟರರೇ, ಅವರ ಕಾಯಿಲೆಯೆಂದರೆ, ಬೇರೇನೂ ಇಲ್ಲ.....''

''ಇಲ್ಲವೆಂದು ನಾನು ಹೇಳಿಲ್ಲವೇ?''

''ಅವರು, ಈಗ ಹೇಳಿದ್ದನ್ನು ಇನ್ನೊಂದು ಗಳಿಗೆಯಲ್ಲಿ ಮರೆತು ಬಿಡುತ್ತಾರೆ– ಅದೇ ಕಾಯಿಲೆ:''

''ಹ್ಞೆ? ಮರೆತು ಬಿಡುತ್ತಾರೆ?''

''ಅಹುದು. ನನಗೂ ಅವರಿಗೂ ಪ್ರತೀದಿನ ಜಗಳ.''

''ಪ್ಲೆ? ಜಗಳ?'' – ಡಾಕ್ಟರರಿಗೆ ಮೈಝುಮ್ಮೆಂದಿತು.

''ನೋಡಿ ಡಾಕ್ಟರರೇ, ಕಳೆದವಾರ ನಾನು, ಒಂದು ಸೇರು ತೊಗರಿಬೇಳೆ ತರುವಂತೆ ಅವರೊಡನೆ ಹೇಳಿದೆ. ರಾತ್ರಿಯಾದರೂ ಅವರು ಮನೆಗೆ ಮರಳಲಿಲ್ಲ. ಮರುದಿನ ಬೆಳಿಗ್ಗೆ ಒಂಭತಕ್ಕೆ ಬಂದರು. ''ಏನಿದು?'' ಎಂದು ಪ್ರಶ್ನಿಸಿದಾಗ, ಮರೆತು ರೈಲಿನಲ್ಲಿ ಕುಳಿತು ಮಂಜೇಶ್ವರಕ್ಕೆ ಹೋಗಿದ್ದೆ – ಎಂದು ಹೇಳಿದರು!''

''ಉಫ್!–'' (ಡಾಕ್ಟರರ ಕಂಠ ಬಿಗಿದುಬಂತು.)

''ಮತ್ತೊಂದು ದಿನ, ಡಾಕ್ಟರರೇ, ಒಳ್ಳೇ ಅಕ್ಕಿಯ ಕ್ರಯ ಕೇಳಿಬನ್ನಿರಿ ಎಂದು ಹೇಳಿದ್ದೆ. ಅವರು ನೆಟ್ಟಗೆ ಒಬ್ಬ ಡಾಕ್ಟರರಲ್ಲಿಗೆ ಹೋಗಿ ತಮ್ಮ ಕಣ್ಣುಗಳನ್ನು ಪರೀಕ್ಷಿಸಿಕೊಂಡು ಬರಬೇಕೆ?''

''ಉಸ್!'' – (ಡಾಕ್ಟರರಿಗೆ ಉಬ್ಬಸ.)

''ಇನ್ನೊಂದು ದಿನ, ಮಗುವಿಗೆ ಕಾಯಿಲೆಯೆಂದು ಡಾಕ್ಟರರನ್ನು ಕರೆತರಲು ಹೇಳಿದಾಗ, ಓಡಿಹೋಗಿ, ತಮ್ಮ ವಕೀಲರೊಡನೆ, ಕೂಸಪ್ಪಯ್ಯನಿಗೆ ಈ ದಿನವೇ ರಿಜಿಸ್ಟ್ರ ನೋಟೀಸು ಕಳಿಸಬೇಕೆಂದು ಒತ್ತಾಯಪಡಿಸಿದರು!''

''ಹ್ಹಾ!'' ಡಾಕ್ಟರರ ಸ್ವರವು ಕ್ಷೀಣವಾಗಿತ್ತು. ತಾನೂ ಇನ್ನು ಮುಂದೆ, ಮರೆವು ಹೆಚ್ಚಿ ಇದೇ ರೀತಿ ವರ್ತಿಸಿದರೆ?

ಮೀನಾಕ್ಷಮ್ಮ ಮುಂದುವರಿಸಿದಳು! ''ಒಂದು ತಿಂಗಳ ಹಿಂದೆ, ಒಮ್ಮೆ, ಉಡುಪಿಗೆ ನೆಂಟರಲ್ಲಿಗೆ ಹೋಗಲು ಮೋಟಾರ್ ಟಿಕೇಟು ತನ್ನಿರೆಂದು ಕಳಿಸಿದಾಗ, ಸಾಯಂಕಾಲ ಆರಕ್ಕೆ ಮನೆಗೆ ಹಿಂದಿರುಗಿ, ಮೈದಾನಿನ ಕ್ರಿಕೆಟ್ ಪಂದ್ಯಾಟದ ವಿವರ ಕೊಟ್ಟರು.''

''ಹೊಽ!'' – (ಡಾಕ್ಟರರಿಂದ ಆರ್ತನಾದ)

''ನೋಡಿ!'' – ಮೀನಾಕ್ಷಮ್ಮ ಹೇಳಿದಳು – ''ಈ ದಿನ ಬೆಳಿಗ್ಗೆ ಸ್ನಾನಕ್ಕೆಂದು ಹೋದವರು, ಸ್ನಾನಮಾಡಿ ಬರುವಾಗ ಮೈ ಒರೆಸಲು ನೆನಪಿಲ್ಲದೆ, ಹಾಗೆಯೇ ಹೊರಬಂದಿದ್ದಾರೆ. ಇನ್ನು ನಾನು ತಡೆಯಲಾರೆ! ಹೇಳಿ–ಏನು ಮಾಡಲಿ?''

''ಅಹುದು, ಏನು ಮಾಡಲಿ?'' ಪ್ರತಿಧ್ವನಿಸಿದರು ಡಾಕ್ಟರರು. ಅವರ ಮನಸ್ಸು ಅವರ ಮನೆಗೆ ನಡೆದು, ತಮ್ಮ ಕೆಲವು ಮರೆವಿನ ಮೋಜುಗಳಲ್ಲಿ ಸ್ನಾನಮಾಡುತ್ತಿತ್ತು.

''ಇನ್ನು ನಾನು, ಡಾಕ್ಟರರೇ.....''

''ಕರೆದಿರಾ?''

''..... 'ಈ ರೀತಿ ಮಾಡಿರಿ' ಎಂದು ಬರೆದ ಬೋರ್ಡ್‌ನ್ನು ಅವರ ಮುಖದ ಮುಂದೆ ಹಿಡಿದರೆ, ಮರೆತುಹೋಗದೆ ಸರಿಯಾಗಿ ನಡೆವರೋ ಎಂದೊಂದು ಆಸೆ.''

''ನಿಜ!–ಸರಿ!–ನೂರಕ್ಕೆ ನೂರು ಒಪ್ಪು!'' ಎಂದು ಕೂಗಾಡಿದರು ಡಾಕ್ಟರರು.

''ಏನೆಂದಿರಿ ಡಾಕ್ಟರರೇ?''

''ನಿಮ್ಮ ಯಜಮಾನರು ಸ್ನಾನ ಮುಗಿದು ಹೊರಗೆ ಬರುವ ಸಮಯಕ್ಕೆ ಸರಿಯಾಗಿ, 'ನಿಮ್ಮ ಮೈಯೊರೆಸಿಕೊಳ್ಳಿರಿ!' ಎಂದು ಬರೆದ ಒಂದು ದೊಡ್ಡ ಕಾಗದವನ್ನು ಅವರ ಮುಖದ

ಮುಂದೆ ಹಿಡಿಯಿರಿ. ಆಗ ಏನು ಮಾಡುವರೆಂದು ನೋಡೋಣ!'' - ಎಂದು ಸಲಹೆ ಕೊಟ್ಟರು ಡಾಕ್ಟರರು. ಮೀನಾಕ್ಷಿ ಎದ್ದು ಹೋದಳು.

ಮರುದಿನ, ಮೀನಾಕ್ಷಿಯು, ಬೆಳಗ್ಗೆ ಎಂಟಕ್ಕೆ ಡಾಕ್ಟರರ ಮನೆಗೆ ಧಾವಿಸಿ ಬಂದಳು. ಡಾಕ್ಟರರ ಹೆಂಡತಿ, ಅವಳನ್ನು ಸ್ವಾಗತಿಸಿ, ಪ್ರಶ್ನಿಸಿದಳು. ಮೀನಾಕ್ಷಿ, ಕಣ್ಣಲ್ಲಿ ನೀರುತುಂಬಿ, ಅಂದಿನ ಪಂಚಾಂಗ ಓದಿದಳು: ''ನೋಡಮ್ಮ, ನನ್ನ ಗಂಡನಿಗೆ ಮರೆವು ಜಾಸ್ತಿ. ಅದಕ್ಕಾಗಿ ನಿಮ್ಮ ಯಜಮಾನರ ಬಳಿಗೆ, ನಿನ್ನೆ ಸಲಹೆ ಕೇಳಲು ಬಂದಿದ್ದೆ. ದೊಡ್ಡ ಕಾಗದದ ಮೇಲೆ ಸೂಚನೆ ಬರೆದು, ನಮ್ಮವರ ಮುಖದ ಮುಂದೆ ಹಿಡಿಯಲು ಹೇಳಿದರು. ಈ ದಿನ ನಮ್ಮವರು ಸ್ನಾನಕ್ಕೆ ಹೋದಾಗ ಹಾಗೇ ಮಾಡಿದೆ. ಆದರೇನು? ಅವರು, ನನ್ನ ಕೈಯಿಂದ ವಿನಯಪೂರ್ವಕವಾಗಿ ಆ ಸೂಚನಾ ಪತ್ರ ತೆಗೆದುಕೊಂಡು, ತನ್ನೊಂದಿಗೆ ಬೈರಾಸು ಇದೆಯೆಂಬ ನೆನಪಿಲ್ಲದೆ, ಕಾಗದದಿಂದಲೇ ಕರಕರನೆ ಮೈಯೊರಸಿಕೊಂಡರಮ್ಮ! ಇನ್ನಾರು ಗತಿ?''

-ಮೀನಾಕ್ಷಿ, ಹೇಳುತ್ತಿದ್ದಂತೆ ಅಳುತ್ತಿದ್ದಳು. ಡಾಕ್ಟರರ ಹೆಂಡತಿಯ ಕಣ್ಣುಗಳು ಆಶ್ಚರ್ಯದಿಂದ ತೆರೆದೇ ಇದ್ದುವು. ''ಸ್ನಾನ? ಕಾಗದ? ಏನಂದಿರಿ?'' ಎಂದು ಪ್ರಶ್ನಿಸಿದಳು. ಮೀನಾಕ್ಷಿಯು, ಪುನಃ ವಿವರಿಸಿದಳು.

ಕೇಳುತ್ತ, ಡಾಕ್ಟರರ ಹೆಂಡತಿಗೆ ಕಣ್ಣುಕತ್ತಲೆ ಬಂತು. ಮೀನಾಕ್ಷಿಯ ಕೈಹಿಡಿದು ತಾನು ಒಂದು ಕುರ್ಚಿಯ ಮೇಲೆ ಕುಳಿತಳು; ಇನ್ನೊಂದರಲ್ಲಿ ಮೀನಾಕ್ಷಿಗೆ ಕುಳ್ಳಿರಹೇಳಿದಳು. ಆ ಮೇಲೆ, ಗುರಿಯಿಲ್ಲದೆ ನೋಡಿ, ಒಂದೆರಡು ನಿಮಿಷಗಳ ಮೌನದ ನಂತರ, ಮೃದುವಾಗಿ ''ಮೀನಾಕ್ಷಮ್ಮ!'' ಎಂದಳು.

''ಏನು?'' - ಮೀನಾಕ್ಷಿ ಕೇಳಿದಳು.


''ನನ್ನ ಕಥೆ ಕೇಳಮ್ಮ'' - ಡಾಕ್ಟರರ ಹೆಂಡತಿ, ಮೃದುವಾಗಿಯೇ ಹೇಳಿದಳು: ''ನಿಮ್ಮಂಥವರಿಗೆ ಸಲಹೆಕೊಡುವ ನಮ್ಮವರಿಗೂ ಕಾಯಿಲೆ ನಿನ್ನೆ ನಿನ್ನ ಗಂಡನಿಗೆ ನಮ್ಮವರು ಚಿಕಿತ್ಸೆ ಹೇಳುವಾಗ, ಅವರಿಗೂ ಒಂದು ಚಿಕಿತ್ಸೆ ಹೊಳೆಯಿತೆಂದು ತೋರುವುದು. ಈ ದಿನ ಬೆಳಿಗ್ಗೆ ಸ್ನಾನಗೃಹಕ್ಕೆ ಹೋಗುವಾಗ, ಮೈಯೊರೆಸುವ ಬೈರಾಸಿನೊಂದಿಗೆ ಒಂದು ವೃತ್ತಪತ್ರಿಕೆಯನ್ನೂ ತೆಗೆದುಕೊಂಡು ಹೋದರು ನಮ್ಮವರು. ಸ್ನಾನಮುಗಿದ ಕೂಡಲೇ ವೃತ್ತಪತ್ರಿಕೆಯಿಂದ ಮೈಯೊರೆಸಿಕೊಂಡು, ಆ ಮೇಲೆ ಬೈರಾಸನ್ನು ಬಿಡಿಸಿ ಓದಲು ಆರಂಭಿಸಿದರು!.... ಏನು, ಮೀನಾಕ್ಷಮ್ಮ, ಕಣ್ಣು ಮುಚ್ಚಿದಿರೇನು? ನಿದ್ದೆ ಬಂತೇ? ಹೇಳಿರಮ್ಮ, ಇಂತಹ ಮರೆವಿಗೆ ಮದ್ದೇನು?''

ಮೀನಾಕ್ಷಿ ಕಣ್ತೆರೆದು ಮೆಲ್ಲಗೆ ಹೇಳಿದಳು: ''ಅವರಿಗೆ ಮರೆವು ಉಂಟೆಂಬುದನ್ನು ನಾವು ಮರೆತುಬಿಡುವುದು!''

ಡಾಕ್ಟರರ ಹೆಂಡತಿ ಒಪ್ಪಿದಳು.

ಜಾಪನೀಸ್ ಭಾಷಾಂತರಕಾರಿಣಿ

- ವತ್ಸನ



'ನಾವೆಲ್ಲಾ ಚಿಕ್ಕಂದಿನಲ್ಲಿ ಶಂಕ್ರಾಂತಿ ಅಂತ್ಲೇ ಹೇಳ್ತಿದ್ದಿದ್ದು. ಅದು ಯಾವಾಗ ಸಂಕ್ರಾಂತಿ ಆಯ್ತು ಅಂತೀನಿ' ಅಂತ ಕೇಳಿದ ಶರಲೇಖ. ಸಂ(ಶಂ)ಕ್ರಾಂತಿ ದಿನ ಮಧ್ಯಾಹ್ನದ ಸಿಯಾಸ್ಟ ಮುಗಿಸಿ ಟೀ ಕುಡಿಯುತ್ತಾ ನಾವಿಬ್ಬರೂ ಕೂತಿದ್ದೆವು. ಅಂದು ಮನೆಯಲ್ಲಿ ಎಳ್ಳು, ಕಬ್ಬುಗಳ ಸಮಾರಾಧನೆಯೋ ಸಮಾರಾಧನೆ. 'ಪಾಪ, ನೀವಿಬ್ರೇ ಇರೋದು ಅಂತ ಸ್ವಲ್ಪ ಎಳ್ಳು ಬೆಲ್ಲ ತಂದಿದೀನಿ' ಅಂತ ಪಕ್ಕದ ಫ್ಲಾಟಿನ ಶೀಲು ಆಂಟಿ, ಬೆಳಗ್ಗೇನೇ ತಟ್ಟೆತುಂಬಾ ಏನೇನೋ ತುಂಬಿಸಿಕೊಂಡು ಬಂದು ಮೇಜಿನ ಮೇಲೆ ಇಟ್ಟು ಹೋದಾಗಿನಿಂದ ಒಂದೇ ಸಮನೆ ಎಳ್ಳು ಬೀರುಕ್ಕೆ ಬರೋರ ಸಾಲು. ಚಿಕ್ಕಬಿದಿರುಕಲ್ಲಿನಿಂದ ಪ್ರತೀಕ್ಷಾ ಮತ್ತು ಶಶಾಂಕ, ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿಯವರ ಮಗಳು ಸೀಮಾ, ಮತ್ತಿತರ ಪರಿಚಿತರು ನಮ್ಮ ಎಳ್ಳಿನ ಡಬ್ಬಕ್ಕೆ ತಮ್ಮ ಕೊಡುಗೆಯನ್ನು ಕೊಟ್ಟು ಹೋಗಿದ್ದರು.

'ಇಂಥಾ ವಿಷಯಗಳಲ್ಲಿ ರಿಸರ್ಚ್ ಮಾಡೋ ಆಸಕ್ತಿ ಇರೋನು ನೀನು. ನನ್ನ ಕೇಳಿದ್ರೆ ಏನು ಪ್ರಯೋಜನ?' ಅಂತ ಹೇಳಿ ನಾನು ನುಣುಚಿಕೊಂಡೆ. ಅಷ್ಟು ಹೊತ್ತಿಗೆ ಶರಲೇಖನ ಮೊಬೈಲ್ ರಿಂಗಾಯಿತು. ಆತ ಮಾತು ಮುಗಿಸಿದ ಮೇಲೆ, 'ಯಾರದು' ಎಂಬ ರೀತಿಯಲ್ಲಿ ನಾನು ಹುಬ್ಬೇರಿಸಿದೆ.

'ನಮ್ಮಣ್ಣ ಮಕರಧ್ವಜ' ಅಂದ ಶರಲೇಖ.

ನನಗೆ ಆಶ್ಚರ್ಯವಾಯಿತು. ಇಷ್ಟು ವರ್ಷಗಳ ಕಾಲ ಅವನೊಂದಿಗೆ ಸಹಬಾಳ್ವೆ ನಡೆಸಿದ್ದರೂ ಸಹಾ, ಅವನಿಗೊಬ್ಬ ಅಣ್ಣ ಇರುವುದೇ ನನಗೆ ತಿಳಿದಿರಲಿಲ್ಲ.

'ನಿನಗೊಬ್ಬ ಅಣ್ಣ ಇದ್ದಾನೆಯೇ? ಎಲ್ಲಿದ್ದಾನೆ ಅವನು? ಏನು ಮಾಡ್ತಾ ಇದ್ದಾನೆ? ಯಾಕೆ ಇಷ್ಟು ವರ್ಷಗಳ ಕಾಲ ನನಗೆ ಅವನ ಪರಿಚಯವಾಗಿಲ್ಲ?'

'ಪರಿಚಯಿಸುವುದಕ್ಕೆ ಸೂಕ್ತ ಸಮಯ ಒದಗಿಬಂದಿರಲಿಲ್ಲ ಅಷ್ಟೇ. ಮಕರಧ್ವಜ ನನಗಿಂತ ಹೆಚ್ಚು ಪ್ರತಿಭೆ ಇರೋ ಪತ್ತೇದಾರ.' ಎಂದ ಶರಲೇಖ.

'ನಿನಗಿಂತ ಹೆಚ್ಚು ಖ್ಯಾತಿಯ ಪತ್ತೇದಾರನೇ? ನಾನಂತೂ ಈ ಮಾತನ್ನ ನಂಬುಲ್ಲ. ಅಷ್ಟು ಖ್ಯಾತನಾಗಿದ್ದರೆ ಪತ್ರಿಕೆಗಳಲ್ಲಿ ಅವನ ಹೆಸರು ಇಷ್ಟುಹೊತ್ತಿಗಾಗಲೇ ರಾರಾಜಿಸುತ್ತಿರ ಬೇಕಾಗಿತ್ತು.' ಎಂದೆ.

'ನನಗಿಂತ ಹೆಚ್ಚು ಪ್ರತಿಭೆ ಅಂದ್ನೇ ಹೊರ್ತು ನನಗಿಂತ ಹೆಚ್ಚು ಖ್ಯಾತಿಯವನು ಅನ್ನಲಿಲ್ಲ. ಅವನು ಮಹಾ ಸೋಮಾರಿ. ನನ್ನಂತೆ ಚರಹೆಗಳನ್ನು ಹುಡುಕಿಕೊಂಡು ಊರೂರು ಅಲೆಯೋದು ಅವನಿಂದ ಸುತರಾಂ ಸಾಧ್ಯವಿಲ್ಲ. ಅದಕ್ಕೆ ಅವನು ಅತಿ ಪ್ರಸಿದ್ಧ ಸೈಬರ್ ಕಂಪನಿಯೊಂದಕ್ಕೆ ಸೈಬರ್ ಕ್ರೈಮ್ ಸಲಹೆಗಾರನಾಗಿ ಕೆಲಸ ಮಾಡ್ತಾ ಇದ್ದಾನೆ. ಆರಾಮವಾಗಿ

ಕಂಪ್ಯೂಟರ್ ಮುಂದೆ ಕುಳಿತು ಮಾಡೋ ಕೆಲಸ ಅದು. ಈಗ ಅವನನ್ನೇ ನೋಡುಕ್ಕೆ ಹೋಗ್ತಾ ಇದ್ದೀನಿ. ಏನೋ ಸಹಾಯ ಬೇಕಂತೆ. ನೀನೂ ಬರ್ತೀಯೇನು?'

ಶರಲೇಖನ ಅಣ್ಣನನ್ನು ನೋಡುವ ಅವಕಾಶವನ್ನು ಯಾರಾದರೂ ಕಳೆದು ಕೊಳ್ಳುತ್ತಾರೆಯೇ? ಒಡನೆಯೇ ಅವನೊಂದಿಗೆ ಹೊರಟೆ.

ಸಿ.ವಿ.ರಾಮನ್ ನಗರದ ಭವ್ಯ ಗಾಜಿನ ಕಟ್ಟಡದ ಮೂರನೇ ಅಂತಸ್ತಿನಲ್ಲಿ ಮಕರಧ್ವಜನ ಕಛೇರಿ. ಕಟ್ಟಡದ ಹೊರಗೋಡೆಯ ಮೇಲೆ ಹಲ್ಲಿಯಂತೆ ಚಲಿಸುತ್ತಿದ್ದ ಗಾಜಿನ ಗುಳ್ಳೆ ಲಿಫ್ಟ್‌ನಲ್ಲಿ ನಿಂತು ಮೂರನೆಯ ಅಂತಸ್ತು ಸೇರಿದೆವು. ಲಿಫ್ಟಿನ ಬಾಗಿಲು ತೆರೆದೊಡನೆಯೇ, ಐಶ್ವರ್ಯಾ ರೈ ಕ್ಲೋನ್ ಒಬ್ಬಳು ನಮ್ಮನ್ನು ಬಹು ಮಮತೆಯಿಂದ ಇದಿರುಗೊಂಡು 'ಹೀಗೆ ಬನ್ನಿ' ಎನ್ನುತ್ತಾ ಮಕರಧ್ವಜನ ಛೇಂಬರ್ಸ್‌ಗೆ ನಮ್ಮನ್ನ ಕರೆದೊಯ್ದಳು.

ಬಹು ವಿಶಾಲವಾದ ಸುಸಜ್ಜಿತವಾದ ಕಛೇರಿ ಅದು. ಕಿಟಕಿಯಾಚೆ ಏನನ್ನೋ ನೋಡುತ್ತಾ ಮಕರಧ್ವಜ ನಿಂತಿದ್ದ. ಅಣ್ಣ ತಮ್ಮಂದಿರ ನಡುವೆ ಇಷ್ಟು ವ್ಯತ್ಯಾಸ ಇರೋದನ್ನ ನಾನು ಇದೇ ಮೊದಲು ನೋಡಿದ್ದು. ಶರಲೇಖ ತೆಳ್ಳಗೆ ಉದ್ದಕ್ಕೆ ಇದ್ದರೆ ಮಕರಧ್ವಜ ಕುಳ್ಳಕ್ಕೆ ದಪ್ಪಕ್ಕೆ ಇದ್ದ. ಮುಖದಲ್ಲಿ ಹೋಲಿಕೆ ಏನೋ ಇತ್ತು ಅನ್ನಿ. ನಾವು ಬಂದದ್ದು ನೋಡಿ, 'ಒಂದ್ನಿಮಿಷ ಇಲ್ಲಿ ಬಾ ಶರಲೇಖ, ನೀನೂ ಬಾ ವತ್ಸ' ಅಂತ ಮಕರಧ್ವಜ ನಮ್ಮಿಬ್ಬರನ್ನೂ ಕಿಟಕಿಯ ಬಳಿ ಬರಲು ಕೂಗಿದ. ಮೊದಲ ಭೇಟಿಯಲ್ಲೇ ನನ್ನನ್ನ ಏಕವಚನದಲ್ಲಿ ಕರೆಯುತ್ತಲ್ಲಾ ಪ್ರಾಣಿ ಅಂತ ನನಗೆ ಥಟ್ಟನೆ ಮುಜುಗರವಾದರೂ, ಮುಂದಿನ ಸ್ನೇಹಪರ ನಡವಳಿಕೆಯಿಂದ ಎಲ್ಲಾ ಸರಿಹೋಯಿತು.

ಕಿಟಕಿಯಾಚೆ, ಕೆಳಗೆ ರಸ್ತೆಯಲ್ಲಿ ಒಬ್ಬ ಬಾಳೇಹಣ್ಣು ಮಾರುವವನು ತನ್ನ ಗಾಡಿಯೊಂದಿಗೆ ನಿಂತಿದ್ದ. ಒಬ್ಬ ಹಿರಿಯಪ್ರಜೆ ಅವನಿಂದ ಬಾಳೇಹಣ್ಣು ಖರೀದಿಸುತ್ತಿದ್ದರು. ಮಕರಧ್ವಜ ಆ ಹಿರಿಯ ಪ್ರಜೆಯನ್ನು ತೋರಿಸಿ,

'ಆ ಮುದುಕರ ಬಗ್ಗೆ ಏನು ಹೇಳ್ತೀಯಾ ಶರಲೇಖ?' ಅಂತ ಪ್ರಶ್ನಿಸಿದ.

'ಆತ ತನ್ನ ಹೆಂಡತಿ ಕಳೆದುಕೊಂಡು ಹಲವು ತಿಂಗಳುಗಳಾಗಿರಬೇಕು' ಅಂದ ಶರಲೇಖ.

'ಸಬ್‌ರೆಜಿಸ್ಟ್ರಾರ್ ಆಫೀಸಿನಲ್ಲಿ ಕೆಲಸ ಮಾಡಿದ್ರು ಆತ ರಿಟೈರ್ ಆಗುಕ್ಕೆ ಮುಂಚೆ' ಅಂದ ಮಕರಧ್ವಜ.

'ಈಗ ಆತ ಮಗಳು ಅಳಿಯನ ಜೊತೆ ಇದ್ದಾರೆ' – ಶರಲೇಖ

'ಇಲ್ಲ, ಇಲ್ಲ, ಮಗ ಸೊಸೆ ಜೊತೆ ಇರೋದು' – ಮಕರಧ್ವಜ

'ಮನೇಲಿ ಮೊಮ್ಮಗು ಇರೋಹಾಗೆ ಕಾಣುತ್ತೆ' – ಶರಲೇಖ

'ಛೇ, ಛೇ, ಮೊಮ್ಮಕ್ಕಳು, ಮೊಮ್ಮಕ್ಕಳು, ಅಷ್ಟೂ ತಿಳಿಯುಲ್ವೇ' – ಮಕರಧ್ವಜ.

ನನಗೆ ತಲೆ ತಿರುಗುವ ಹಾಗಾಯಿತು. ಅಷ್ಟು ಹೊತ್ತಿಗಾಗಲೇ ಆ ಹಿರಿಯ ಪ್ರಜೆ, ಬಾಳೇಹಣ್ಣು ಪೊಟ್ಟಣವನ್ನು ತಮ್ಮ ಕೈಚೀಲಕ್ಕೆ ಹಾಕಿ ಕೋಟಿನ ಒಳಜೇಬಿನಿಂದ ತಮ್ಮ ಪರ್ಸ್ ತೆಗೆಯುವ ಸನ್ನಾಹದಲ್ಲಿದ್ದರು. ನಾನು ಇಬ್ಬರು ಸಹೋದರರನ್ನೂ ಉದ್ದೇಶಿಸಿ, 'ಅವರನ್ನ

ಇಷ್ಟು ದೂರದಿಂದ ನೋಡಿ, ಇಷ್ಟೆಲ್ಲಾ ಮಾಹಿತಿ ಹೇಗೆ ಊಹಿಸಿದಿರಿ ಹೇಳಿ' ಅಂತ ಆಗ್ರಹಪೂರ್ವಕವಾಗಿ ಕೇಳಿದೆ.

ಸರಳೇಖನೇ ಉತ್ತರಿಸಲು ಮುಂದಾದ.

'ನಮ್ಮ ಪತ್ತೇದಾರಿ ಕಸುಬಿನಲ್ಲಿ ಊಹೆಗೆ ಜಾಗವೇ ಇಲ್ಲ. ಎಲ್ಲ ತರ್ಕಬದ್ಧವಾಗಿ ವಿಚಾರಮಾಡಿ ತಲುಪುವ ನಿರ್ಧಾರಗಳು. ನಾನು ಆ ಮುದುಕರನ್ನು ನೋಡಿದ ತಕ್ಷಣ ಅವರು ವಿಧುರರೆಂದು ಗೊತ್ತಾಯಿತು. ಸಂಸಾರಸ್ಥ ಮುದುಕರಿಗೂ, ವಿಧುರರಿಗೂ ಬಾಡಿ ಲಾಂಗ್ವೇಜಿನಲ್ಲಿ ಒಂದು ಮುಖ್ಯ ವ್ಯತ್ಯಾಸ ಇರುತ್ತೆ. ಅವರು ಬಾಳೇಹಣ್ಣು ಗಾಡಿಯ ಒಂದು ಪಕ್ಕದಿಂದ ಇನ್ನೊಂದು ಪಕ್ಕಕ್ಕೆ ನಡೆದದ್ದನ್ನು ಗಮನಿಸಿದೆಯಾ. ಸಂಸಾರಸ್ಥ ಮುದುಕರಂತೆ ಕುಗ್ಗಿ ನಡೆಯುವ ಬದಲು, ಅವರ ವಯಸ್ಸಿಗೆ ಅನುಗುಣವಲ್ಲದ ಒಂದು ಲಾಲಿತ್ಯದಿಂದ ನಡೆದರು. ಬಹುಕಾಲದ ಬಂಧನದಿಂದ ಮುಕ್ತರಾದ ಖೈದಿಗಳ ನಡಿಗೆಯಲ್ಲಿ ನಾನು ಈ ಲಾಲಿತ್ಯವನ್ನು ಅನೇಕ ಬಾರಿ ಕಂಡಿದ್ದೇನೆ. ಹಾಗಾಗಿ ಅವರು ವಿಧುರರೆಂದು ಒಡನೆಯೇ ಗೊತ್ತಾಯಿತು'.

'ಒಂದ್ನಿಮಿಷ. ಅವರು ವಿಧುರರೇ ಆಗಿರಬೇಕು ಅಂತ ಹೇಗೆ ನಿರ್ಧರಿಸಿದಿರಿ? ಮದುವೆಯಾಗದ ಬ್ಯಾಚೆಲರ್ ಆಗಿರಬಹುದಲ್ಲಾ.' ನಾನು ಕೇಳಿದೆ.

'ಬ್ಯಾಚೆಲರ್ ಆಗಿದ್ದರೆ ಸಂಜೆ ಇಷ್ಟು ಹೊತ್ತಿಗೆ ಬಾಳೇಹಣ್ಣು ಕೊಳ್ಳುತ್ತಾನೆಯೇ, ಬಾರಿನಲ್ಲಿ ಕೂತು ಬೀರು ಕುಡೀತಿರ್ತಾನೆ'

'ಸರಿ, ಮುಂದೆ ಹೇಳಿ'

'ಇನ್ನು ಸಬ್‌ರೆಜಿಸ್ಟ್ರಾರ್ ಆಫೀಸಿನಲ್ಲಿ ಕೆಲಸಮಾಡಿದ ವಿಷಯ. ಆ ಬಾಳೇಹಣ್ಣು ಮಾರುವವ ಹಣ್ಣಿನ ಪೊಟ್ಟಣವನ್ನು ಇವರಿಗೆ ಕೊಡಲು ಹೋದಾಗ ಅವರ ಕೈ ಆಟೋಮ್ಯಾಟಿಕ್ ಆಗಿ ಗಾಡಿಯ ಹಲಗೆಯ ಕೆಳಗೆ ಹೋಗಿದ್ದನ್ನು ನಾನು ನೋಡಿದೆ. ಜೀವನ ಪರ್ಯಂತ ಮೇಜಿನ ಕೆಳಗೆ ಕೈ ಚಾಚುವವರಿಗೆ ಗಾಡಿಯ ಮೇಲೆ ಕೈ ಚಾಚುವುದು ಹೊಸದಾಗಿ ಕಲಿಯಬೇಕಾದ ಒಂದು ಅಭ್ಯಾಸ. ಅವರಿನ್ನೂ ಹಳೆಯ ಚಾಳಿ ಮರೆತಿಲ್ಲ'

'ಮುಂದೆ?'

'ಹಣ್ಣು ಕೊಳ್ಳುವುದಕ್ಕೆ ಮುಂಚೆ ಆತ ಪದೇ ಪದೇ ಒಂದು ಚೀಟಿ ನೋಡುತ್ತಿದ್ದರು. ಅಂದಮೇಲೆ ಮನೆಯಲ್ಲಿ ಯಾರೋ ಚೀಟಿ ಬರೆದುಕೊಟ್ಟಿರಬೇಕು. ಮಗಳು ಬರೆದುಕೊಟ್ಟಿರಬೇಕೆಂದು ತಿಳಿದು ಹಾಗೆ ಹೇಳಿದೆ. ಮಕರಧ್ವಜ ನನ್ನನ್ನು ತಿದ್ದಿದ. ಆತ ಮೂರು ಸಲ ಚೀಟಿ ನೋಡಿ ಭಯಭಕ್ತಿಗಳಿಂದ ಪೊಟ್ಟಣದ ಹಣ್ಣುಗಳನ್ನು ಎಣಿಸಿದ್ದನ್ನು ನೋಡಿದರೆ, ಅದು ಸೊಸೆ ಬರೆದಿರೋ ಚೀಟಿಯೇ ಆಗಿರಬೇಕು. ಆಕೆ ಮಾವನನ್ನು ಹದ್ದುಬಸ್ತಿನಲ್ಲಿಟ್ಟಿದ್ದಾಳೆ, ಎಂಬುದು ತಿಳಿಯಿತು. ಆತನ ಕೋಟಿನ ಜೇಬಿನಿಂದ ಇಣುಕುತ್ತಿದ್ದ ಆಟದ ರೈಲು ಮೊಮ್ಮಗುವಿಗಲ್ಲದೇ ಬೇರೆ ಯಾರಿಗೆ. ಹಾಗಾಗಿ ಮೊಮ್ಮಗು ಎಂದೆ. ಮಕರಧ್ವಜನ ಕಣ್ಣು ನನಗಿಂತ ಚುರುಕು. ಹಣ್ಣಿನ ಪೊಟ್ಟಣವನ್ನು ಚೀಲಕ್ಕೆ ಹಾಕುವಾಗ ಚೀಲದಲ್ಲಿದ್ದ ಕಾಮಿಕ್ ಅವನ ಹದ್ದಿನ ಕಣ್ಣನ್ನು ತಪ್ಪಿಸಲಿಲ್ಲ. ಕಾಮಿಕ್ ಓದೋ ಮಗು ಮರದ ರೈಲಿನೊಂದಿಗೆ ಆಡುವ

ಮಗುವಿಗಿಂತ ದೊಡ್ಡ ಮಗುವೇ ಆಗಿರಬೇಕು. ಹಾಗಾಗಿ ಆತ ಮೊಮ್ಮಕ್ಕಳ ತಾತ ಎಂಬ ನಿರ್ಧಾರಕ್ಕೆ ಬಂದೆವು.' ಎಂದ ಶರಲೇಖ.

ಅಷ್ಟು ಹೊತ್ತಿಗಾಗಲೇ ಮಕರಧ್ವಜ ತರಿಸಿದ್ದ ಕಾಫಿ ನಮಗಾಗಿ ಕಾದಿತ್ತು. ಕಾಫಿ ಸಿಪ್ ಮಾಡುತ್ತಾ ಮಕರಧ್ವಜ ನಮ್ಮನ್ನು ಕರೆಸಿದ ಕಾರಣ ತಿಳಿಸಿದ.

'ಇದೊಂದು ಬಹು ತುರ್ತಿನ ವಿಷಯ ಶರಲೇಖ. ಯಾವ ಕೇಸಿದ್ದರೂ ಅದನ್ನೆಲ್ಲಾ ಬದಿಗೊತ್ತಿ ಇದನ್ನ ಸಾಲ್ವ್ ಮಾಡಬೇಕು. ನಮ್ಮ ಆಫೀಸಿನಲ್ಲಿ ಜಾಪನೀಸ್ ಭಾಷಾಂತರಕಾರಿಣಿಯಾಗಿ ಪಾರ್ಟ್‌ಟೈಮ್ ಕೆಲಸ ಮಾಡ್ತಿರೋ ವೀಣಮ್ಮ ನಿನ್ನೆ ಮಧ್ಯಾಹ್ನದಿಂದ ಕಾಣೆಯಾಗಿದ್ದಾರೆ. ಅವರ ಮನೆಯೊರೆಲ್ಲಾ ಕಂಗಾಲು. ಪೋಲೀಸ್ನೋರು ತಿಪ್ಪರಲಾಗ ಹಾಕ್ತಿದಾರೆ. ಏನೂ ಕ್ಲೂ ಸಿಕ್ಕಿಲ್ಲ. ನಮ್ಮ ಎಂ.ಡಿ. ನಿನ್ನ ಕೇಳು ಅಂತ ದುಂಬಾಲು ಬಿದ್ರು. ಏನಾದ್ರೂ ಮಾಡ್ಬೇಕಲ್ಲಾ ಶರಲೇಖ' ಎಂದು ವಿನಂತಿಸಿಕೊಂಡ ಮಕರಧ್ವಜ.

'ನೀನು ಹೇಳಿದ್ಮೇಲೆ ಇಲ್ಲಾ ಅಂತೀನ್ಯೇ. ಯಾರಿದು ವೀಣಮ್ಮ? ಎಲ್ಲಿ ವಾಸ? ನಿನ್ನೆ ಅವರು ಎಲ್ಲೆಲ್ಲಿ ಹೋಗಿದ್ರು ಏನೇನು ಮಾಡಿದ್ರು ಎಲ್ಲಾ ವಿವರಗಳು ಬೇಕಲ್ಲಾ, ಕೆಲಸ ಶುರುಮಾಡುಕ್ಕೆ ಮುಂಚೆ' ಶರಲೇಖ.

ಶರಲೇಖನಿಗೆ ಅಗತ್ಯ ಮಾಹಿತಿ ಒದಗಿಸಲು ಮಕರಧ್ವಜ ನಮ್ಮನ್ನ ಅವರ ಆಫೀಸಿನ ಭಾಷಾಂತರ ವಿಭಾಗಕ್ಕೆ ಐ.ಕ್ಲೋ.ಜೊತೆ ಕಳಿಸಿದ. ಅಲ್ಲಿ ವಿಚಾರಿಸಿದ ನಂತರ ಹೊರಬಿದ್ದ ಮಾಹಿತಿ ಇಷ್ಟು. ವೀಣಮ್ಮ ಉರುಫ್ ವೀಣಾ ರಾಮಕೃಷ್ಣ ಸುಮಾರು ಐವತ್ತೈದು ವಯಸ್ಸಿನ ವಿಧವೆ. ಫ್ರೀಲಾನ್ಸ್ ರೂಪದಲ್ಲಿ ಭಾಷಾಂತರದ ಕೆಲಸ. ಈ ಆಫೀಸಿನಲ್ಲಿ ಅಗತ್ಯಬಿದ್ದಾಗ ಮಾತ್ರ ಬಂದು ಜಾಪನೀಸ್ ದಾಖಲೆಗಳನ್ನು ಭಾಷಾಂತರ ಮಾಡಿಕೊಡುತ್ತಿದ್ದರಂತೆ. ಚೆನ್ನಾಗಿ ಜಾಪನೀಸ್ ಬರುತ್ತಿದುದರಿಂದ ಕಾರ್ಪೊರೇಟ್ ಪ್ರಪಂಚದಲ್ಲಿ ಆಕೆಗೆ ಸದಾ ಡಿಮಾಂಡ್ ಇರುತ್ತಿತ್ತಂತೆ. ನಿನ್ನೆ ಮಧ್ಯಾಹ್ನ ಹನ್ನೆರಡು ಘಂಟೆ ಹೊತ್ತಿಗೆ ಆಕೆ ಕೆಲಸ ಮುಗಿಸಿ ಮನೆಗೆ ಹೊರಟರಂತೆ. ಸಂಜೆ ಮನೆಗೆ ಹಿಂತಿರುಗದಿದ್ದಾಗ ಮಗ ಸೊಸೆ ಗಾಬರಿಗೊಂಡು ಆಫೀಸನ್ನು ಸಂಪರ್ಕಿಸಿದರಂತೆ. ಮಕರಧ್ವಜ ಅಲ್ಲೇ ಇದ್ದುದರಿಂದ ಅವನು ಅವರ ನೆರವಿಗೆ ಬಂದು ಪೋಲೀಸ್ ಇತ್ಯಾದಿಗಳ ಬಾಬಿನಲ್ಲಿ ಮಾರ್ಗದರ್ಶನ ನೀಡಿದನಂತೆ. ಇಷ್ಟು ತಿಳಿದ ನಂತರ ದೊಮ್ಮಲೂರಿನಲ್ಲಿದ್ದ ವೀಣಮ್ಮನವರ ಮಗನ ಮನೆಗೆ ಹೋದೆವು.

ಅವರ ಮಗ ವಿವೇಕ್‌ನ ಪ್ರಕಾರ, ವೀಣಮ್ಮ ಬಹು ಪ್ರತಿಭಾವಂತೆ. ಅಷ್ಟೇ ದೈವ ಭಕ್ತೆ ಸಹಾ. ಬಿಡುವಿನ ವೇಳೆಯಲ್ಲೆಲ್ಲಾ ದೇವರು, ದಿಂಡಿರು, ಪೂಜೆ, ಪುನಸ್ಕಾರ. ಗಂಡನನ್ನು ಕಳೆದುಕೊಂಡ ಮೇಲೆ ಹವ್ಯಾಸಕ್ಕಾಗಿ ಕಲಿತ ಜಾಪನೀಸ್ ಭಾಷೆ, ದಿನಕ್ರಮೇಣ ಒಂದು ಬಿಡುವಿಲ್ಲದ ಕಸುಬಾಗಿ ಪರಿಣಮಿಸಿತ್ತಂತೆ. ಮಕರಧ್ವಜನ ಆಫೀಸಲ್ಲದೇ, ಜಪಾನೀ ಗ್ರಾಹಕರನ್ನು ಹೊಂದಿರುವ ಅನೇಕ ಕಂಪನಿಗಳು ವೀಣಮ್ಮನವರ ಸಹಾಯ ಪಡೆಯುತ್ತಿದ್ದವಂತೆ. ವಿವೇಕನ ಹೇಳಿಕೆಯ ನಂತರ ಶರಲೇಖ 'ಸ್ವಲ್ಪ ಮಾಹಿತಿ ಸಂಗ್ರಹಿಸಿ ಬರುತ್ತೇನೆ ನೀನು ಮನೆಯಲ್ಲಿರು' ಅಂತ ಹೇಳಿ ಎಲ್ಲಿಗೋ ಹೊರಟು ಹೋದ. ಒಂಭತ್ತೂವರೆಯ ಹೊತ್ತಿಗೆ ಶರಲೇಖ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿಯವರೊಡನೆ ಮನೆಗೆ

ಬಂದು 'ವತ್ಸನ, ನಾವು ಈಗಲೇ ಮಂಗಳೂರು ಟ್ರೈನ್ ಹಿಡಿಯಬೇಕು. ಉಳ್ಳಾಗಡ್ಡಿ, ಟ್ರೈನ್ ಇರೋದು ಎಷ್ಟು ಹೊತ್ತಿಗೆ' ಎಂದು ಕೇಳಿದ.

'ಒಂಭತ್ತು ಘಂಟೆಗಾಗಲೇ ಬೆಂಗಳೂರು ಸಿಟಿ ಸ್ಟೇಷನ್ ಬಿಟ್ಟಿರುತ್ತಲ್ಲಾ ಆ ಟ್ರೈನೂ' ಉಳ್ಳಾಗಡ್ಡಿ ಉತ್ತರಿಸಿದರು.

'ಪರವಾಗಿಲ್ಲ. ನಿಮ್ಮ ಪೋಲೀಸ್ ಜೀಪನ್ನ ಈಗಲೇ ಕರೆಸಿ. ಮೈಸೂರಿಗೆ ಹೋಗಿ ಅಲ್ಲಿ ಟ್ರೈನನ್ನು ಹಿಡಿಯೋಣ. ವತ್ಸನ, ಐದೇ ನಿಮಿಷದಲ್ಲಿ ರೆಡಿಯಾಗಬೇಕು' ಎಂದು ಹೇಳಿ, ಶರಲೇಖ ಒಳಕ್ಕೆ ಹೋದ.

ಐದು ನಿಮಿಷದಲ್ಲಿ ಎಂಥ ರೆಡಿಯಾಗೋದು. ಸ್ವೆಟರ್ ಹಾಕಿಕೊಂಡು, ಟಾರ್ಚ್ ಹುಡುಕೋ ಅಷ್ಟರಲ್ಲಿ ಜೀಪು ಬಂತು. ಎಲ್ಲರೂ ಹೊರಟೆವು.

ಮೈಸೂರು ರೇಲ್ವೇ ಸ್ಟೇಷನ್ ಸೇರಿದಾಗ ಹನ್ನೆರಡೂ ಮುಕ್ಕಾಲು. ಹನ್ನೆರಡು ಘಂಟೆಗೇ ಮೈಸೂರು ಬಿಡಬೇಕಾಗಿದ್ದ ಮಂಗಳೂರು ಟ್ರೈನು ಪ್ಲಾಟ್‌ಫಾರಂ ಮೇಲೆ ಸ್ಥಬ್ಧವಾಗಿ ನಿಂತಿತ್ತು. ಎಲ್ಲರೂ ಫಸ್ಟ್‌ಕ್ಲಾಸ್ ಹತ್ತಿದೆವು. ಒಂದು ಘಂಟೆಗೆ ಟ್ರೈನ್ ಮತ್ತೆ ಹೊರಟಿತು.

'ನಿಜವಾಗ್ಲೂ ನಾವು ಲಕ್ಕೀ. ಹನ್ನೆರಡಕ್ಕೇ ಹೊರಟು ಬಿಡಬೇಕಾಗಿದ್ದ ಟ್ರೈನು ನಾವು ಬರೋವರ್ಗೂ ಇಲ್ಲೇ ಕಾದಿತ್ತಲ್ಲಾ' ಎಂದೆ.

'ಲಕ್ಕೂ ಇಲ್ಲ, ಏನೂ ಇಲ್ಲ. ಟ್ರೈನು ಕಾದಿರುತ್ತೆ ಅಂತ ನನಗೆ ಮೊದಲೇ ತಿಳಿದಿತ್ತು. ಬೆಂಗಳೂರು, ಮಂಗಳೂರು ರೂಟಿನ ಬಸ್‌ಲಾಬಿಯೋರು, ಬಸ್ ಮಾಲಿಕರಿಗೆ ಅನುಕೂಲ ಮಾಡಿಕೊಡೋ ಉದ್ದೇಶದಿಂದ ರೇಲ್ವೇ ಸಿಬ್ಬಂದಿಗೆ ತಾಕೀತುಮಾಡಿ, ಇಲ್ಲೇ ಒಂದು ಘಂಟೆ ಈ ಟ್ರೈನ್‌ನ ಕೊಳೆ ಹಾಕುಕ್ಕೆ ವ್ಯವಸ್ಥೆ ಮಾಡಿದ್ದಾರೆ. ನನಗೆ ಈ ವಿಷಯ ಮೊದಲೇ ತಿಳಿದಿದ್ದರಿಂದ ಇಲ್ಲಿ ಟ್ರೈನ್ ಹತ್ತುಕ್ಕೆ ಅನುಕೂಲ ಆಯ್ತು. ಈಗ ಒಂದೆರಡು ಘಂಟೆ ವಿಶ್ರಮಿಸಿ. ಬೆಳಗ್ಗೆ ಐದೂವರೆಗೇ ಸುಬ್ರಮಣ್ಯ ರೋಡ್ ತಲುಪುತ್ತೀವಿ. ಅಲ್ಲೇ ನಾವು ಇಳಿಯೋದು.'

ಸುಬ್ರಮಣ್ಯ ರೋಡ್‌ನಲ್ಲಿ ಉಳ್ಳಾಗಡ್ಡಿಯ ಅಸಿಸ್ಟೆಂಟ್, ಶಾನಭಾಗ್ ನಮಗಾಗಿ ಜೀಪಿಟ್ಟುಕೊಂಡು ಕಾಯುತ್ತಿದ್ದ. ಜೀಪಿನಲ್ಲಿ ಕುಳಿತ ನಂತರ ಸುಬ್ರಮಣ್ಯ ದೇವಸ್ಥಾನದ ಹತ್ತಿರದಲ್ಲಿನ ಗೆಸ್ಟ್‌ಹೌಸ್ ಒಂದಕ್ಕೆ ಶಾನಭಾಗ್ ನಮ್ಮನ್ನ ಕರೆದುಕೊಂಡು ಹೋದ. ಶರಲೇಖ ಗೆಸ್ಟ್‌ಹೌಸ್ ಮ್ಯಾನೇಜರ್ ಹತ್ತಿರ ಏನೋ ಪಿಸುಗುಟ್ಟಿದ. ಉಳ್ಳಾಗಡ್ಡಿಯೂ ಅವನೊಂದಿಗೆ ಏನೋ ಮಾತನಾಡಿದ ನಂತರ ನಾವೆಲ್ಲಾ ಮೊದಲ ಮಹಡಿಯಲ್ಲಿದ್ದ 103 ನೇ ನಂಬರಿನ ರೂಮಿಗೆ ಹೋದೆವು. ರೂಮಿನ ಬೀಗ ಹಾಕಿತ್ತು. ನಮ್ಮ ಜೊತೆಯಲ್ಲಿ ಬಂದಿದ್ದ ಮಾಣಿ, ತನ್ನ ಕೈಲಿದ್ದ ಬೀಗದ ಕೈಯಿಂದ ರೂಮಿನ ಬಾಗಿಲು ತೆಗೆದ. ರೂಮು ಖಾಲಿ. ಕೆಳಗೆ ಬಂದು ವಿಚಾರಿಸಿದಾಗ ರೂಮಿನಲ್ಲಿದ್ದ ಮಹಿಳೆ, ಬೆಳಗಿನ ಪೂಜೆಗಾಗಿ ದೇವಸ್ಥಾನಕ್ಕೆ ತೆರಳಿದ್ದು ತಿಳಿಯಿತು.

ಸರಿ, ನಮ್ಮ ಮೆರವಣಿಗೆ ದೇವಸ್ಥಾನಕ್ಕೆ ಸಾಗಿತು. ನಮ್ಮಲ್ಲಿ ಯಾರಿಗೂ ವೀಣಮ್ಮನವರ ಮುಖಪರಿಚಯ ಇಲ್ಲದ್ದರಿಂದ ಗೆಸ್ಟ್‌ಹೌಸ್‌ನ ರೂಮ್‌ಬಾಯ್ ಅವರನ್ನ ಗುರುತಿಸಲು ನಮ್ಮೊಂದಿಗೆ ಬಂದಿದ್ದ. ಬೆಳಗ್ಗೆ ಆರೂವರೆ ಸಮಯ. ಸಂಕ್ರಮಣದ ಮಾರನೆಯ ದಿನ.

ದೇವಸ್ಥಾನ ಭಕ್ತಾದಿಗಳಿಂದ ತುಂಬಿ ತುಳುಕುತ್ತಿತ್ತು. ಪ್ರಾಂಗಣದ ಅಂಗಳದಲ್ಲಿ ಜನ ಗುಂಪು ಗುಂಪಾಗಿ ಸರ್ಪಸಂಸ್ಕಾರದ ವಿಧಿವಿಧಾನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಗರ್ಭಗುಡಿಯಲ್ಲಿ ಪೂಜೆ, ಮಂಗಳಾರತಿ ಅದ್ದೂರಿಯಿಂದ ನಡೆಯುತ್ತಿತ್ತು. ಎಲ್ಲೆಲ್ಲಿ ನೋಡಿದರೂ ಜನ. ಆದರೆ ವೀಣಮ್ಮನವರ ಸುಳಿವೇ ಇರಲಿಲ್ಲ. ಸ್ವಲ್ಪ ಕಾಲ ದೇವಸ್ಥಾನದ ಪ್ರದಕ್ಷಿಣೆಗಳನ್ನು ಮುಗಿಸಿದ ಮೇಲೆ ಶರಲೇಖ ಗುಡಿಯ ಹಿಂದೆ ಹರಿಯುತ್ತಿದ್ದ ಕುಮಾರಧಾರಾ ನದಿಯ ಬಳಿ ಹೋಗಿ ಅದರ ದಡದಲ್ಲಿ ಹುಡುಕುವ ಸಲಹೆ ಮಾಡಿದ. ದೇವಸ್ಥಾನದ ಹಿಂಬಾಗಿಲನ್ನು ದಾಟಿ, ನದಿಯ ದಡವನ್ನು ಸೇರಿದೆವು. ನಮ್ಮ ಜೊತೆಯಲ್ಲಿದ್ದ ಮಾಣಿ, 'ಅಲ್ಲೇ, ಅಲ್ಲೇ ಇದಾರೆ ನೋಡಿ ಅಮ್ಮ ಅವರು ' ಅಂತ ಕೂಗಿದ . ಮಹಿಳೆಯೊಬ್ಬರು ನದಿಯ ದಡದಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದ ದೃಶ್ಯ ಕಣ್ಣಿಗೆ ಬಿತ್ತು. ಶರಲೇಖ ತಕ್ಷಣ ತನ್ನ ಮೊಬೈಲ್ ತೆಗೆದು ಮಕರಧ್ವಜನನ್ನು ಸಂಪರ್ಕಿಸಲು ಪ್ರಯತ್ನಿಸಿದ. ನೆಟ್‌ವರ್ಕ್ ಸಿಗಲಿಲ್ಲ. ಕೊನೆಗೆ ಪೋಲೀಸ್ ಫೋನ್ ಮೂಲಕ ಮಕರಧ್ವಜನನ್ನು ಸಂಪರ್ಕಿಸಿ, ವಿಷಯ ತಿಳಿಸುವಂತೆ ಶಾನಭಾಗ್‌ಗೆ ಹೇಳಿ. ನಾವು ಆ ಮಹಿಳೆಯ ಬಳಿ ಹೋದೆವು.

'ವೀಣಮ್ಮ?' ಶರಲೇಖನ ಪ್ರಶ್ನೆ ಅತ್ಯಂತ-ಕಿರಿದಾದರೂ ಅರ್ಥವತ್ತಾಗಿತ್ತು.

'ಹೌದು, ತಾವು ಯಾರು? ಪೋಲೀಸಿನೋರಾಗಿದ್ರೆ ನನ್ನ ಭಾಗಕ್ಕೆ ದೇವರಂತೆ ಬಂದ್ರಿ. ಬನ್ನಿ ಇಲ್ಲೇ ಪಾವಟಣಿಗೆ ಮೇಲೆ ಕೂಡಿ' ಎಂದರು ವೀಣಮ್ಮ.

'ಏನಮ್ಮ ಇದರ ಅರ್ಥ? ಯಾರಿಗೂ ಹೇಳದೇ ಇಲ್ಲಿಗೆ ಬಂದಿದೀರ'

'ಹಯ್ಯೋ, ಅದೊಂದು ದೊಡ್ಡ ಕಥೆ. ಆದ್ರೆ ಮೊದಲು ನೀವ್ಯಾರು. ಅಂತ......'

'ನಾನು ಶರಲೇಖ, ಇವರು ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ, ಇವರು ವತ್ಸನ.'

ವೀಣಮ್ಮ ತಮ್ಮ ವೃತ್ತಾಂತ ಹೇಳಲು ಶುರುಮಾಡಿದರು.

'ಎಲ್ಲಾ ಶುರುವಾದದ್ದು ಮೊನ್ನೆ . ನಾನು ಜಪಾನೀ ಭಾಷೇನ ಹವ್ಯಾಸಕ್ಕೇ ಅಂತ ಕಲಿತೆ. ಈಗ ಅದೇ ದೊಡ್ಡ ಕಸುಬು ಆಗಿಬಿಟ್ಟಿದೆ ನನಗೆ. ಮದುವೆ ಆದಾಗ್ಲಿಂದಾನೂ ನನ್ನದೂ ಅಂತ ಮೂರು ಕಾಸು ಸಂಪಾದಿಸದ ನನಗೆ ಈಗ ಬೇಡ ಬೇಡ ಅಂದ್ರೂ ಸಾವಿರಗಟ್ಟಲೆ ಹಣ ಸಂಪಾದನೆ. ಜಪಾನ್ ದೇಶದೊಡನೆ ವ್ಯವಹಾರ ಮಾಡೋ ಕಂಪನಿಗಳಿಗೆಲ್ಲಾ ನನ್ನಂತೋರ ಸಹಾಯ ಬೇಕೇ ಆಗುತ್ತೆ. ಮೊನ್ನೆ ಮಧ್ಯಾಹ್ನ ನನ್ನ ಮೊಬೈಲ್‌ಗೆ ಒಂದು ಕಾಲ್ ಬಂತು. ಕೋರಮಂಗಲದಲ್ಲಿನ ಒಂದು ಆಫೀಸಿನಲ್ಲಿ ಭಾಷಾಂತರ ಮಾಡೋ ಕೆಲಸದ ಅಗತ್ಯ ಇದೆ. ವಿಷಯ ಅರ್ಜೆಂಟ್. ಫೀಸು ಎಷ್ಟಾದರೂ ಸರಿ ಅಂತ ಮೆಸೇಜು. ಸರಿ, ಕೆಲಸ ಮುಗಿಸಿಕೊಂಡು ಮನೆಗೆ ಹೋದರಾಯಿತು ಇನ್ನೂ ಮಧ್ಯಾಹ್ನ ತಾನೆ ಎಂದುಕೊಂಡು ಆಟೋ ಹಿಡಿದೆ. ಆ ಆಫೀಸಿನಲ್ಲಿ ಒಬ್ಬ ಸೂಟು ಬೂಟು ಧರಿಸಿದ ಆಸಾಮಿ ನನ್ನ ಬಳಿ ಬಂದು ತನ್ನ ಆಫೀಸಿಗೆ ಕರೆದೊಯ್ದ. ಅಲ್ಲಿ ಇಬ್ಬರು ಜಪಾನಿಗಳು ಇದ್ದರು. ನಾನು ಅವರೊಂದಿಗೆ ಕುಶಲ ವಿಚಾರಿಸಿದ ಮೇಲೆ ಅವರು ತಾವು ಬಂದ ಕಾರಣ ತಿಳಿಸಿದರು. ದಕ್ಷಿಣ ಕನ್ನಡದ ಕುಮಾರಧಾರಾ ನದಿಯ ಪಾತ್ರದಲ್ಲಿ ಪಚ್ಚೆ ಕಲ್ಲುಗಳ ನಿವೇಶನ ಒಂದು ಈ ಕಂಪನಿಯವರ ಸ್ವಾಧೀನದಲ್ಲಿದೆಯಂತೆ. ಆ ಕಲ್ಲುಗಳನ್ನು ಜಪಾನಿಗೆ ಆಮದು ಮಾಡಿಕೊಳ್ಳುವ

ಉದ್ದೇಶದಿಂದ ವಾಣಿಜ್ಯ ವ್ಯವಹಾರ ಕುದುರಿಸಲು ಅವರು ಇಲ್ಲಿಗೆ ಬಂದಿದ್ದರಂತೆ. ನಿವೇಶನ ನೋಡಿದ ಹೊರತು ಮಾತುಕತೆ ಇಲ್ಲ ಅಂತ ಅವರು ಸ್ಪಷ್ಟವಾಗಿ ಹೇಳಿದರು. ನಮ್ಮ ಉದ್ಯಮಿಗೆ ಅದನ್ನ ಭಾಷಾಂತರಿಸಿ ಹೇಳಿದೆ. ಸರಿ ಅದಕ್ಕೇನು ಇವತ್ತು ರಾತ್ರೀನೇ ಟ್ರೈನ್ ಬರ್ತ್ ಬುಕ್ ಮಾಡ್ತೀನಿ ಕುಕ್ಕೆ ಸುಬ್ರಮಣ್ಯದ ಹತ್ತಿರಾನೇ ನಮ್ಮ ನಿವೇಶನ ಇರೋದು. ನೀವೂ ಬಂದ್ಬಿಡಿ ಮೇಡಂ ನಾಳೆ ಅಲ್ಲಿ ವ್ಯವಹಾರ ಮುಗಿಸಿ ನಾಡಿದ್ದು ಬೆಳಗ್ಗೆ ಬೆಂಗಳೂರಿಗೆ ಹಿಂತಿರುಗಿ ಬಂದು ಬಿಡೋಣ ಅಂದ. ನಾನು ಅದೆಲ್ಲಾ ಆಗುಲ್ಲಪ್ಪಾ , ನಾಳೆ ಗಣೇಶನ ಗುಡಿಯಲ್ಲಿ ವಡೆಹಾರ ಪೂಜೆಗೆ ಕೊಟ್ಟಿದ್ದೀನಿ ಅಂದೆ. ಆತ ಡ್ರಾಯರ್ ತೆಗೆದು ಪಿಸ್ತೂಲು ತೋರಿಸಿದ. ಆದ ಗಾಬರಿಯಲ್ಲಿ ನನಗೆ ಮಾತೇ ಹೊರಡಲಿಲ್ಲ. ಅಷ್ಟರಲ್ಲಿ ಅವನು ನನ್ನ ಮೊಬೈಲು ಪರ್ಸು ಕ್ರೆಡಿಟ್ ಕಾರ್ಡು ಎಲ್ಲವನ್ನು ಕಿತ್ತುಕೊಂಡು, ಇವು ನನ್ನ ಬಳಿ ಭದ್ರವಾಗಿರುತ್ವೆ ಮೇಡಂ, ಬೆಂಗಳೂರಿಗೆ ಹಿಂತಿರುಗಿದ ನಂತರ ಮತ್ತೆ ನಿಮಗೇ ವಾಪಸ್ ಅಂದ. ಅವರೆಲ್ಲರೊಂದಿಗೆ ಟ್ರೈನಿನಲ್ಲಿ ನಿನ್ನೆ ಬೆಳಗ್ಗೆ ಇಲ್ಲಿಗೆ ಬಂದೆವು. ಟಾಟಾ ಸುಮೋದಲ್ಲಿ ಕಾಡೆಲ್ಲಾ ಸುತ್ತಿ ನಿವೇಶನ ತಲುಪಿದೆವು. ಅವರ ವಾಣಿಜ್ಯ ವ್ಯವಹಾರವೆಲ್ಲಾ ನನ್ನ ಮೂಲಕವೇ ನಡೆಯಿತು ಅನ್ನಿ. ಕೊನೆಗೆ ಆ ಜಪಾನಿಗಳು 'ವಾಯರೋ?' ಅಂತ ನನ್ನ ಕೇಳಿದರು. ಅವರ ಭಾಷೆಯಲ್ಲಿ ವಾಯರೋ ಅಂದ್ರೆ ಲಂಚ.

ಅವರು ಆರ್ಡರ್ ಕೊಡುಕ್ಕೆ ಕಮಿಷನ್ ಕೇಳ್ತಿದಾರೆ ಅಂತ ನಮ್ಮ ಉದ್ಯಮಿಗೆ ತಿಳಿಸಿದೆ. ನಮ್ಮ ಉದ್ಯಮಿ ಅದಕ್ಕೆ ಏನೂ ಉತ್ತರ ನೀಡಲಿಲ್ಲ. ಅವರಿಗೆ ಸುಮ್ಮನೆ ಪಿಸ್ತೂಲು ತಟ್ಟಿ ತೋರಿಸಿದ. ಅವರಿಗೆ ಅರ್ಥವಾಯಿತು ಅಂತ ಕಾಣುತ್ತೆ ಮುಂದೆ ಮಾತನಾಡಲಿಲ್ಲ. ಕೊನೆಗೆ ಸಂಜೆಯ ವೇಳೆಗೆ ನನ್ನನ್ನ ಗೆಸ್ಟ್ ಹೌಸಿನಲ್ಲಿ ಬಿಟ್ಟು ಇಲ್ಲಿ ಒಂದು ರಾತ್ರಿಗೆ ನಿಮಗೆ ಇರುಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇಲ್ಲಿ ಆಗಿದ್ದನ್ನ ಯಾರಿಗೂ ಹೇಳಬೇಡಿ. ತಪ್ಪಿದರೆ ಇಗೋ ಅನ್ನುತ್ತಾ ಪಿಸ್ತೂಲು ತಟ್ಟಿದ. ನಾನು ನನ್ನ ಪರ್ಸು ಮೊಬೈಲು ಕ್ರೆಡಿಟ್ ಕಾರ್ಡು ಎಲ್ಲ ಹಿಂದಕ್ಕೆ ಕೊಡಿ ಅಂತ ಕೇಳಿದೆ. ಆತ ನಸುನಕ್ಕು ಸಯೋನರಾ ಅಂತ ಹೇಳಿ ಏನೂ ಕೊಡದೇ ತನ್ನ ಜಪಾನೀ ಗ್ರಾಹಕರೊಂದಿಗೆ ಹೊರಟು ಹೋದ.

ಒಂದು ನಿಮಿಷ ನನಗೆ ಗಾಬರಿ ಆಯಿತು. ಆಮೇಲೆ ಸುಬ್ರಮಣ್ಯ ದೇವರು ನನ್ನನ್ನ ಇಲ್ಲಿಗೆ ಕರೆಸಿಕೊಂಡಿರುವಾಗ ನನಗೆ ಯಾತರ ಭಯ ಅಂತ ಅಂದುಕೊಂಡು ರೂಮಿನಲ್ಲಿ ಮಲಗಿದೆ. ಬೆಳಗ್ಗೆ ಎದ್ದು ದೇವರ ದರ್ಶನ ಮಾಡಿ 'ದೇವರೇ ಮಗ ಸೊಸೆ ಆತಂಕ ಪಟ್ಕೊಂಡಿರ್ತಾರೆ. ಅವರಿಗೆ ಹೇಗಾದ್ರೂ ನನ್ನ ಪರಿಸ್ಥಿತಿ ತಿಳಿಸಪ್ಪಾ' ಅಂತ ಪ್ರಾರ್ಥನೆ ಮಾಡಿ ಇಲ್ಲಿ ಈ ಪ್ರಶಾಂತವಾದ ಕುಮಾರಧಾರೆಯ ದಡದಲ್ಲಿ ಬಂದು ಕುಳಿತೆ ಈಗ ನೀವೆಲ್ಲಾ ಬಂದಿರಿ. ನಿಜಕ್ಕೂ ಇದು ಸುಬ್ರಮಣ್ಯ ದೇವರ ಪವಾಡವೇ' ಅಂದರು ವೀಣಮ್ಮ.

ವೀಣಮ್ಮನವರ ಮುಂದಿನ ಭವಿಷ್ಯವನ್ನು ಉಳ್ಳಾಗಡ್ಡಿಯವರ ವಶಕ್ಕೆ ಬಿಟ್ಟು ಶರಲೇಖ ಮತ್ತು ನಾನು ಗೆಸ್ಟ್‌ಹೌಸಿಗೆ ಹಿಂತಿರುಗಿದೆವು.

'ವೀಣಮ್ಮ ಇಲ್ಲಿಗೇ ಬಂದಿದಾರೆ ಅಂತ ಹೇಗೆ ಪತ್ತೆ ಹಚ್ಚಿದೆ ಶರಲೇಖ?' ಅಂತ ಸಹಜ ಕುತೂಹಲದಿಂದ ಕೇಳಿದೆ.

'ವೀಣಮ್ಮನವರು ಆಫೀಸು ಬಿಟ್ಟಮೇಲೆ ಎಲ್ಲಿ ಹೋದರು ಅನ್ನೋದನ್ನ ಮೊದಲು

ತಿಳೀಬೇಕಾಯಿತು. ಅವರ ಆಫೀಸಿನ ಹತ್ರ ಇದ್ದ ಆಟೋ ಸ್ಟ್ಯಾಂಡಿನಲ್ಲಿ ವಿಚಾರಿಸಿದಾಗ ಅವರನ್ನ ಆಫೀಸಿನಿಂದ ಕರೆದೊಯ್ದ ಚಾಲಕ ಸಿಕ್ಕಿದ. ಅವನು ನನ್ನನ್ನ ಕರೆದುಕೊಂಡು ಕೋರಮಂಗಲದಲ್ಲಿನ ಒಂದು ಆಫೀಸ್ ಕಾಂಪ್ಲೆಕ್ಸ್ ತೋರಿಸಿ ಅಮ್ಮಾವ್ರು ಇಲ್ಲೇ ಇಳಕೊಂಡ್ರು ಅಂದ. ನಾನು ಒಳಗೆ ಹೋಗಿ ಸೆಕ್ಯೂರಿಟಿಯವರಿಗೆ ಕೈ ಬೆಚ್ಚಗೆ ಮಾಡಿದ ನಂತರ ಅಲ್ಲಿ ಇದ್ದ ಯಾವ ಆಫೀಸಿಗೆ ಜಪಾನಿಗಳು ಬಂದು ಹೋಗಿದ್ದರು ಅಂತ ಪತ್ತೆ ಹಚ್ಚಿದೆ. ಆ ಸೆಕ್ಯೂರಿಟಿಯವರೇ ಯಜಮಾನರ ಕಾರಿನ ಡ್ರೈವರನ್ನು ವಿಚಾರಿಸಿ ಯಜಮಾನರು ಇಬ್ಬರು ಜಪಾನಿಗಳು ಮತ್ತು ಒಬ್ಬ ಮಹಿಳೆಯ ಜೊತೆ ಮಂಗಳೂರು ಟ್ರೈನ್ ಹತ್ತಿದ್ದನ್ನು ತಿಳಿಸಿದರು. ತಕ್ಷಣ ನಾನು ಉಳ್ಳಾಗಡ್ಡಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ಮಂಗಳೂರು ಟ್ರೈನ್ ನಿಲ್ಲುವ ಎಲ್ಲ ಸ್ಟೇಷನ್‌ಗಳಲ್ಲೂ ಪೋಲೀಸರು ತಪಾಸಣೆ ನಡೆಸಿದರು. ಸುಬ್ರಮಣ್ಯ ರೋಡ್ ಸ್ಟೇಶನ್ನಿನಲ್ಲಿ ನಮ್ಮ ಗಿರಾಕಿಗಳು ಹಿಂದಿನ ದಿನ ಇಳಿದಿದ್ದನ್ನು ಅಲ್ಲಿನ ಸ್ಟೇಷನ್ ಮಾಸ್ಟರ್ ನೋಡಿದ್ದು ತಿಳಿದು ಬಂತು. ತಕ್ಷಣ ನಾನು ಮನೆಗೆ ಬಂದು ಕಾರ್ಯೋನ್ಮುಖನಾದೆ. ಮುಂದಿನದೆಲ್ಲಾ ನಿನಗೆ ತಿಳಿದೇ ಇದೆ.' ಅಂದ ಶರಲೇಖ.

'ಈಗೇನಾಗತ್ತೆ ? ಆ ಉದ್ಯಮಿನ ಜೈಲಿಗೆ ಹಾಕ್ತಾರಾ?'

'ನಿನಗೊಂದು ಹುಚ್ಚು. ಅವನಿಗೆ ವ್ಯವಸ್ಥೆಯ ಪ್ರೋತ್ಸಾಹ ಇರೋದ್ರಿಂದ ಏನೂ ಆಗಲ್ಲ. ಉತ್ತಮ ರಫ್ತುಗಾರ ಅಂತ ಕೇಂದ್ರ ಪ್ರಶಸ್ತಿ ಸಿಗಬಹುದು ಅಷ್ಟೆ. ಸಧ್ಯ ವೀಣಮ್ಮನೋರಿಗೆ ಏನೂ ಅಪಾಯ ಆಗಲಿಲ್ಲವಲ್ಲಾ ಅದಕ್ಕೆ ಸಂತೋಷಪಡೋಣ' ಅಂದ.

ಸಂತೋಷಪಡುತ್ತಾ ನಾವು ಬೆಂಗಳೂರಿನ ರೈಲು ಹತ್ತಿದೆವು.

ಪ್ರತಿಮೆ ಯಾರಿಗೆ?

ಅವನು ಚುನಾವಣೆಯಲ್ಲಿ ಗೆದ್ದ. ಗೆದ್ದ ನಂತರ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡುತ್ತಾ ಸೋತ ಅಭ್ಯರ್ಥಿಯ ಪ್ರತಿಮೆ ಮಾಡಿ ಊರಿನ ಮಧ್ಯ ಭಾಗದಲ್ಲಿ ನಿಲ್ಲಿಸಲು ಸಲಹೆ ಮಾಡಿದಾಗ ಜನರಿಗೆ ಸಖತ್ ಆಶ್ಚರ್ಯ. ಸೋತ ಅಭ್ಯರ್ಥಿಗಾಗಿ ಪ್ರತಿಮೆಯೆ?!!!

ಅದಕ್ಕೆ ಅವನು ನೀಡಿದ ಸಮಜಾಯಿಷಿ: ಪ್ರತಿಮೆ ಸೋತ ವ್ಯಕ್ತಿಗಲ್ಲ, ಪಾರಿವಾಳಗಳಿಗೆ.

- **ಆನಂದ**

ತುಂತುರು

- 'ತಾರೆ ಜಮೀನ್ ಪರ್' ಚಿತ್ರವನ್ನು ಸಂಜಯ್ ದತ್ ಮತ್ತು ಸಲ್ಮಾನ್ ಖಾನ್ ನಿರ್ಮಿಸಿದ್ದರೆ ಅದು ''ತಾರೆ ಜಾಮೀನ್ ಪರ್'' ಎಂದಾಗುತ್ತಿತ್ತೆ?
- ಹಾಗೆಯೇ, ವಿಜಯ ಮಲ್ಯ ಮತ್ತು ಕ್ಯಾಪ್ಟನ್ ಗೋಪಿನಾಥ್ ಸೇರಿ ಚಿತ್ರ ತೆಗೆದರೆ ಅದು 'ಪ್ರೀತಿ ಏಕೆ ಆಕಾಶದ ಮೇಲಿದೆ?' ಎಂದಾಗುತ್ತದೆಯೆ?
- ನಿಮಗೆ ಬೇಕಾಗಿರುವುದು ಜಾತಿ ಸರ್ಟಿಫಿಕೇಟ್? ಅಥವಾ ಮೆರಿಟ್ ಸರ್ಟಿಫಿಕೇಟ್?
- ನಾಣ್ಯ ನುಂಗಿದವನು ಎಕ್ಸ್‌ರೆ ತೆಗೆಸಿಕೊಂಡ ಮೇಲೆ ವೈದ್ಯರನ್ನು ಕೇಳಿದ್ದು - Do you find any change in me?
- EMI means easily manageable installments?
- ಗೋಳು ಕರೆಯುವ ಟೀವಿ ಸೀರಿಯಲ್‌ಗಳಿಗೆ ಯಾರಾದರೂ ಪ್ರಶಸ್ತಿ ಕೊಡುವುದಾದರೆ ಅದನ್ನು 'ಗಳಗಳನಾಥ ಪ್ರಶಸ್ತಿ' ಎಂದು ಕರೆಯಬಹುದು?
- Does a milch cow have strong teeth and bones?
- ಭಾರತದಲ್ಲಿ ನಿಜವಾಗಲೂ ಜಾತ್ಯತೀತ ಎಂದೆನಿಸಿಕೊಳ್ಳುವುದು ಭ್ರಷ್ಟಾಚಾರ ಮಾತ್ರ.
- ಕೆಲವು ಮಂದಿಯ ಮನಸ್ಸು ಅದೆಷ್ಟು ಮುಕ್ತ ಎಂದರೆ ಅವರ ಮೆದುಳೇ ಹೊರಬಂದಿರುತ್ತದೆ.
- ಟೀವಿಯಲ್ಲಿ ಏನು ಬರುತ್ತಿದೆ ಎಂಬುದರ ಬಗ್ಗೆ ಪ್ರೇಕ್ಷಕರು ಗಮನ ಹರಿಸುತ್ತಿರುವುದಿಲ್ಲ, ಮುಂದೇನು ಬರುತ್ತದೆ ಎಂಬುದರ ಬಗ್ಗೆ ಗಮನ ಇಟ್ಟಿರುತ್ತಾರೆ.
- We are always in a hurry, but never on time.
- ನಟನಿಗೆ ಅತ್ಯವಶ್ಯವಾಗಿ ಬೇಕಾಗಿರುವುದು? ನಟನೆ!
- ಮನೆಯ ಮುಂದೆ ಮರ ನೆಟ್ಟರೆ ಕಾರ್ ಪಾರ್ಕ್ ಮಾಡಲು ಜಾಗ ಇರದು ಎನ್ನುವವರೇ ತಮ್ಮ ಕಾರನ್ನು ನೆರಳಿನಲ್ಲಿ ನಿಲ್ಲಿಸಲು ಮರವೊಂದನ್ನು ಹುಡುಕುತ್ತಿರುತ್ತಾರೆ.
- A financial daily is for bears, bulls and all other party animals!
- ಬೀಳದೆ ಇರುವುದೇ ದೊಡ್ಡ ವಿಷಯವಲ್ಲ, ಆದರೆ ಪ್ರತಿ ಸಲ ಬಿದ್ದಾಗಲೂ ಮೇಲೆದ್ದು 'ವೈಟರ್, ಇನ್ನೊಂದು ಪೆಗ್ ಪ್ಲೀಸ್'' ಎನ್ನುವುದು.
- ಜಯಲಲಿತಾ ಅವರಿಗೆ ಭಾರತ ರತ್ನ ಪ್ರಶಸ್ತಿ ಬಂದರೆ ಅದು ಭಾರದ ರತ್ನ; ನೀಡದಿದ್ದರೆ ಬಾರದ ರತ್ನ?
- ಬಡ ದೇಶದ ರಾಜಕಾರಣಿಗಳು ಶ್ರೀಮಂತರು!
- Matrimonial advt for Devdas: Wanted wife, age no bar, height / looks no bar, caste no bar but girl's dad should have his own bar.

- ದಂನಟ

ಜಿಜ್ಞಾಸೆ.........!

- ಎಚ್. ಗೋಪಾಲಕೃಷ್ಣ

ಸಂಜೆ ಹೊತ್ತು ಬೇಗ ಕೆಲಸ ಮುಗಿಸಿಕೊಂಡು ಮನೆ ಸೇರಿದರೆ ನಿಮ್ಮ ಅಭ್ಯಾಸ ಏನು? ಸಂಜೆ ಹೆಂಡತಿ ಮಕ್ಕಳ ಸಂಗಡ ಪಿಕ್ಚರಿಗೆ ಹೋಗ್ತೀರೀ- ಜೇಬಿನ ತುಂಬಾ ಝಣ ಝಣ ಇದ್ದರೆ,,ಲಾಲ್‌ಬಾಗ್ ಸುತ್ತಲು ಹೋಗ್ತೀರೀ- ಹತ್ತಿರವೇ ಒಂದು ಲಾಲ್ ಬಾಗ್ ಇದ್ದರೆ ಅಥವಾ ಯಾವುದಾದರೂ ನೆಂಟರು ಇಷ್ಟರ ಮನೇಗೆ ಹೋಗ್ತೀರೀ- ಯಾರಾದರೂ ನೆಂಟರು ಇಷ್ಟರು ನಿಮಗೆ ಇದ್ದರೆ..... ಹೌದು ತಾನೇ?

ನನಗೂ ನಿಮಗೂ ಇಲ್ಲೇ ಕೊಂಚ ಡಿಫ್ಫರೆನ್ಸು ಇರೋದೂ ! ಸಂಜೆ ಬೇಗ ಮನೇಗೆ ಸೇರಿದರೆ ನನ್ನ ಅಭಾಸ ಏನು ಗೊತ್ತಾ? ನಮ್ಮ ಏರಿಯಾದಲ್ಲಿ ಹೊಸದಾಗಿ ಆರಂಭವಾಗಿರುವ ಅಂಗಡಿಗಳಿಗೆ ನುಗ್ತೀನಿ.ಹೊಸದಾಗಿ ಆರಂಭವಾಗಿರುವ ಬ್ಯಾಂಕುಗಳಿಗೆ ನುಗ್ತೀನಿ. ಬ್ಯಾಂಕುಗಳಿಗೆ ನುಗ್ಗೋದು ಅಲ್ಲಿ ಹಣ ಪಣ ಇಡೋದಿಕ್ಕೇಂತ ಅಲ್ಲ.ಬದಲಿಗೆ ಬೇರೆ ಬ್ಯಾಂಕಿನವರು ನೀಡದಿರುವ ಹೊಸರೀತಿಯ ಯಾವುದಾದರೂ ಸಾಲ ಪಾಲಗಳನ್ನ ಈ ಬ್ಯಾಂಕಿನವರು ಹುಡುಕಿ ಕೊಡ್ತಾ ಇದಾರೆಯೇ ಅಂತ ತಿಳಿದುಕೊಳ್ಳೋದಿಕ್ಕೆ! ನನ್ನ ಈ ವರೆಗಿನ ಅನುಭವದಲ್ಲಿ ಯಾವ ಬ್ಯಾಂಕೂ ಕೂಡ ಹೊಸಾ ರೀತಿಯ ಸಾಲಗಳನ್ನ ಈ ತನಕ ಆರಂಭಿಸಿಯೇ ಇಲ್ಲ. ಹೊಸಾ ರೀತಿ ಸಾಲಗಳು ಸಿಕ್ಕೋ ಹಾಗಿದ್ದರೆ ಸ್ವಲ್ಪ ಸಾಲ ಮಾಡಬಹುದು ಅಂತ ನನ್ನ ಯೋಜನೆ ಮನಸ್ಸಿನಲ್ಲಿ ಇರುತ್ತೆ. ಹೊಸಾ ಸಾಲಗಳು ಯಾವುದೂ ಇಲ್ಲವಾದ್ದರಿಂದ ನನ್ನ ಮನಸಿನಲ್ಲಿ ಇರುವ ಹಲವಾರು ಸಾವಿರ ಆಸೆ ಆಕಾಂಕ್ಷೆಗಳು ಇನ್ನೂ ಹಾಗೇ ಇವೆ.ಇನ್ನೂ ಅವಕ್ಕೆ ಮುಕ್ತಿಯ ಹಾದಿ ಸಿಕ್ಕಿಲ್ಲ.

ಹೊಸಾ ಅಂಗಡಿಗಳಿಗೂ ನುಗ್ತೀನಿ ಅಂತ ಹೇಳಿದೆ ಅಲ್ಲವೇ? ಇದು ಯಾಕೆ ಅಂತೀರೀ?

ನೂರು ಅಂಗಡಿ ಸುತ್ತಿದರೆ ನಿಮಗೆ ಯಾವ ಅಂಗಡೀಲಿ ಯಾವುದು ಕಡಿಮೆ ಬೆಲೆಗೆ ಸಿಗುತ್ತೆ ಅಂತ ಗೊತ್ತಾಗುತ್ತೆ:ಅಷ್ಟೇ ಅಲ್ಲ ಬರುವ ನಾಲ್ಕು ಪುಡಿಕಾಸು ಸಂಬಳದಲ್ಲಿ ಜೀವನ ಮಾಡುವ ನಿಮಗೆ ಐದು ಪೈಸೆ ಉಳಿದರೆ ಅದೇ ದೊಡ್ಡದು ತಾನೇ? ಯಾವ ಸಾಮಾನು ಕೊಂಡರೆ ಅದರ ಜತೆಗೆ ಪುಕ್ಕಟ್ಟು ಯಾವುದು ಸಿಗುತ್ತೆ ಅಂತಲೂನೂ ತಿಳೀತದೆ. ಪುಕ್ಕಟ್ಟು ಸಿಗುವ ಯಾವುದನ್ನೂ ನಾನು ಬಿಡೋದಿಲ್ಲ. ಕೆಲವು ಸಲ ಈ ಪುಕ್ಕಟ್ಟಿನ ಆಸೆಗೆ ಸಿಕ್ಕಿಕೊಂಡು ಬೇಡದೇ ಇರೋ ಸಾಮಾನನ್ನೂ ನಾನು ಮನೇಗೆ ತಂದು ಮನೆಯಲ್ಲಿರುವ ಎಲ್ಲರ ಕೈಲೂ ಛೀಮಾರಿ ಹಾಕಿಸಿಕೊಂಡಿರೋದೂ ಉಂಟು.ಆದರೂ ಹುಟ್ಟಿನಿಂದ ಬಂದ ಚಾಳಿ ಬಿಡೋದು ಉಂಟೇ?

ಹಾಗೆ ನೋಡಿದರೆ ಕಳೆದ ವಾರ ಏನಾಯಿತೂ ಅಂತೀರೀ? ಮೊನ್ನೆ ನಮ್ಮ ಏರಿಯಾದಲ್ಲಿ ಆರಂಭವಾದ ಯಾವುದೋ ಮಾಲಿಗೆ ನುಗ್ಗಿದೆ. ಸೆರೆಲ್ಯಾಕ್ ಕೊಂಡರೆ ಒಂದು ಬೋಲು (ಬೋಲು ಅಂದರೆ ಬೋಗುಣಿ ಅಂತ) ಬಿಟ್ಟಿ ಅಂತ ದೊಡ್ಡ ಬೋರ್ಡು, ಬೋಲಿನ ಚಿತ್ರ ನೋಡಿದೆ. ಸೆರೆಲಾಕ್ ಯಾತಕ್ಕೆ ಉಪಯೋಗಿಸುತ್ತಾರೆ ಅಂತ ಗೊತ್ತಿರಲಿಲ್ಲ.ಹಾಗೆ ನೋಡಿದರೆ ಸೆರೆಲಾಕ್ ಅಂಬುವ ಪದವನ್ನೂ ಅದೇ ಮೊದಲ ಬಾರಿಗೆ ನಾನು ಕೇಳಿದ್ದು. ಸೆರೆಲಾಕ್ ತಗೊಂಡರೆ ಬೋಲು ಬಿಟ್ಟಿ ಅಂತ ನೋಡಿದೆನಾ? ಸೀದಾ ಅಂಗಡೀಗೆ ನುಗ್ಗಿದೆ. ಸೆರೆಲಾಕ್

ಕೊಂಡೆ. ಆತ ಬರೀ ಸೆರೆಲಾಕ್ ಡಬ್ಬ ಕೊಟ್ಟ. ಬೋಲು ಎಲ್ಲಿ? ಅಂದೆ. ಮುಖ ಸಿಂಡರಿಸಿಕೊಂಡು ಸೇಲ್ಸ್ ಗರ್ಲ್- ಇವಕ್ಕೆ ಸೇಲ್ಸ್ ಗರ್ಲ್ ಅಂತ ಯಾತಕ್ಕೆ ಅಂತಾರೋ ತಿಳೀದು.ಮುಖ ಸಿಂಡರಿಸಿಕೊಂಡು ಎಪ್ಪತ್ತು ವರ್ಷದ ಮುದುಕಿ ಪೋಸು ಕೊಡುತ್ತವೆ- ಒಳಗಡೆ ಹೋದಳು. ಕ್ಯಾಷ್ ಕೌಂಟರಿನ ಮುಂದೆ ನಾನು ಡಬ್ಬ ಕೈಲಿ ಹಿಡಿದು ಬೋಲಿಗೆ ಕಾದು ನಿಂತೆ. ಬೋಲು ಅಲ್ಲಿ ಆಕೆ ಹುಡುಕುತ್ತಲೇ ಇದ್ದಳು.ನನ್ನ ಹಿಂದೆ ಕ್ಯೂ ಬೆಳೀತು. ಒಬ್ಬನೂ ಕೈಯಲ್ಲಿ ನನ್ನ ತರಹ ರೂಪಾಯಿ ನೋಟು ಹಿಡಿದಿಲ್ಲ.ಅದೇನೋ ಕೂಪನ್ನು ಜೋಡಿಸಿಕೊಂಡು ಕಾದಿದಾರೆ. ಕಾಸು ಈಸಿಕೊಳ್ಳೋನು ಸಾರ್ ಪ್ಲೀಸ್ ದಿಸ್ ಸೈಡ್ ಅಂದ. ಯಾಕೆ? ಮೊದಲು ನಾನು ಬಂದಿದ್ದು...ಅಂದೆ. ಅಡ್ಡ ನಿಂತೆ.

ಹಿಂದಿನಿಂದ ಅದ್ಯಾರೋ ಮುದುಕಮ್ಮ ವ್ಹಾಟ್ಸ ಹಿಸ್ ಪ್ರಾಬ್ಲಂ? ಅಂತ ಕಿರಲಿತು. ಹಿ ಈಸ್ ವೈಟಿಂಗ ಫಾರ ಗಿಫ್ಟ ಅಂತ ಮತ್ತೊಂದು ಕೀರಲು ಉತ್ತರಿಸಿತು. ಏನು ಜನಾ ಅಪ್ಪ ಬಿಟ್ಟಿ ಸಿಕ್ಕಿದ್ದು ಬಿಡೋಲ್ಲವೇ ಅಂತ ಮೊದಲನೇ ಕಿರಕಲು ನನಗೆ ಕೇಳೋ ತರಹ ಕಿರಲಬೇಕೇ? ನೀವಾಗಿದ್ದರೆ ಬಿಟ್ಟೀದು ಬೇಡಾ ಅಂತ ವಾಪಸ್ಸು ಬರ್ತಾ ಇದ್ದಿರೇನೋ . ನಾನು ಹಾಗಲ್ಲ.ಗ್ರಾಹಕ ಜಾಗೃತಿ ಇರೋನು ಮತ್ತು ಹುಟ್ಟಾ ಪ್ರೊಲೆಟೇರಿಯನ್ನು. ಅವಮಾನಗಳನ್ನು ಎದುರಿಸಿ ಜಗತ್ತಿಗೆ ಬುದ್ಧಿ ಕಲಿಸೋಕ್ಕೇಂತಲೇ ಹುಟ್ಟಿರೋನು !

ಲೇಡಿ ವಾಟ್ ನಾನ್ ಸೆನ್ಸ್ ಯು ಆರ್ ಟಾಕಿಂಗ್? ಅಂದೆ. ಬಿಟ್ಟಿ ಸಿಕ್ಕಿದ್ದು ಬಿಡಲ್ಲ ಅಂತೀಯಾ? ನೀನೇನು ಕಾಸು ತಂದಿದೀಯಾ ಕೈಯಲ್ಲಿ? ಬಿಟ್ಟಿ ಕೂಪನ್ನು ತಗೊಂಡು ನಿಂತಿದೀಯಾ ಇಲ್ಲವಾ? ಬಿಟ್ಟಿ ಕೂಪನ್ನು ಅದೂ ಸೊಸೆ ದುಡಿದು ತಂದಿರೋದು, ಅದನ್ನ ಇಟ್ಟುಕೊಂಡೇ ನೀನು ಇಷ್ಟು ತಲೆ ಹರಟೆ ಹೊಡೆದರೆ ರಕ್ತ, ಬೆವರು-ಎರಡೂ ನನ್ನದೇ- ಸುರಿಸಿ ಸಂಪಾದಿಸಿರೋನು ನಾನು ನನಗೆಷ್ಟು ತಲಹರಟೆಗೆ ಅವಕಾಶ ಇರಬೇಕು.......? ಹೀಗೆ ಶುರುವಾಯಿತ್ರೀ ನನ್ನ ಮಾತು. ಅಜ್ಜಮ್ಮನ ಬೆಂಬಲಕ್ಕೆ ಯಾವ ಪುಳ್ಳೇನೂ ಬರೋದು ಬೇಡವೇನ್ರೀ? ಪಾಪ ಅವರೂ ಕೈಲಿ ಬಿಟ್ಟಿ ಕೂಪನ್ನು ಹಿಡಿದು ನಿಂತವರೇನೇ. ಮಧ್ಯೆ ಮಾತು ನಿಲ್ಲಿಸಿದರೆ ಬಿಟ್ಟೀ ಕೂಪನ್ನು ಹಿಡಿದು ನಿಂತಿರೋ ಅಮೇರಿಕನ್ ರಿಟರ್ನಡ್ ಮಗ ಸೊಸೆಯರ ಅತ್ತೆ ಮಾವಂದಿರು ನನ್ನನ್ನ ಇಂಗ್ಲೀಷಿನಲ್ಲಿ ಚಿಂದಿ ಉಡಾಯಿಸಿಬಿಡ್ತಾರೆ ಅಂತ ನನಗೆ ಮನಸ್ಸಿನ ಮೂಲೆಯಿಂದ ಒಂದು ಧ್ವನಿ ಎಚ್ಚರಿಸಬೇಕೇ ಇದೇ ಸಮಯದಲ್ಲಿ? ನೀವಾಗಿದ್ದರೆ ಅದೇನು ಮಾಡುತ್ತಿದ್ದರೋ ನನಗೆ ತಿಳೀದು. ಮಾತು ನಿಲ್ಲಿಸದೇ ಇರೋದಿಕ್ಕೆ ನನ್ನ ಹತ್ತಿರ ನನ್ನದೇ ಆದ ಕೆಲವು ಉಪಾಯಗಳಿವೆ-ಇದನ್ನ ನಾನು ನಮ್ಮ ಮೆನೇಜುಮೆಂಟಿನ ತಜ್ಞರ ಬಳಿ ಕಲಿತಿರೋದೂ. ಅದೇ ಪ್ರಕಾರ ಶುರುಮಾಡಿದೆ.

ಗ್ಲೋಬಲೈಸೇಷನ್ನು ಅಂದರೆ ಜಾಗತೀಕರಣ ದ ಬಗ್ಗೆ ಅದರ ಎಫೆಕ್ಟಿನ ಬಗ್ಗೆ ಅದು ಬೆಂಗಳೂರಿನ ಮೇಲೆ ಮಾಡಿರೋ ಪರಿಣಾಮದ ಬಗ್ಗೆ ಈ ರೀತಿಮಾಲುಗಳು ಬಂದು ನಮ್ಮ ಲೋಕಲ್ ಪೆಟ್ಟಿಗೆ ಅಂಗಡಿ ತಳ ಕಚ್ಚಿದ್ದು ಕುರಿತು ಹೇಳುತ್ತಿದ್ದೆ. ಅಂಗಡೀಲಿ ನಿಧಾನಕ್ಕೆ ಕ್ಯೂ ಅಂಚು ಕಿರಿದಾಗಲು ಶುರುವಾಯಿತು.ಮೊದಲು ಕೀರಿದವಳು ಅವಳ ಜತೆ ದನಿ ಗೂಡಿಸಿದವರೂ ಖಾಲಿಯಾದರು! ಕಣ್ಣು ಬಾಯಿ ಬಿಟ್ಟುಕೊಂಡು ನನ್ನ ಮಾತು ಕೇಳುತ್ತಿದ್ದ ಅಂಗಡಿ ಮೇನೇಜರು,ಅವನ ಶಿಷ್ಯರು ವಾಸ್ತವಕ್ಕೆ ಇಳಿದರು,ಬಿಟ್ಟಿ ಕೂಪನ್ನು ಹಿಡಿದವರು ಕತ್ತಲೆಯಲ್ಲಿ ಪುಳಿಯೋಗರೆ ಅಂತ ಅಂದುಕೊಂಡು ಬರೀ ಚಿತ್ರಾನ್ನ ತಿಂದವರ ಹಾಗೆ ಮೂತಿ ಮಾಡಿಕೊಂಡು ಕೆ ಕೈ ಕಿವಿಚುತ್ತಾ ನಿಂತಿದ್ದರು.

ಪೂರ್ತಿ ಜನ ಖಾಲಿಯಾದರೆ ಬಿಟ್ಟಿ ಕೂಪನ್ನು ಶೇಖರಿಸಲು ಆಗುಲ್ಲ ಅಂಬುವ ಸತ್ಯ ಅಂಗಡಿಯವರಿಗೆ ಅವರಿಗೆ ಹೊಳೆದಿತ್ತು. ಮೆನೇಜರು ಒಳಕ್ಕೆ ಓಡಿದ, ಎರಡೇ ಸೆಕೆಂಡಿನಲ್ಲಿ ಆಚೆ ಓಡಿಬಂದ, ಅವನ ಕೈಯಲ್ಲಿ ಅದ್ಯಾವುದೋ ಪೊಟ್ಟಣ ದಪ್ಪದು,ಎರಡು ಕೈಲೂ ಹಿಡಿಯೋಂತಹುದು ಇತ್ತು. ಸಾರ್ ಫ್ರೀ ಬೋಲು ಎಲ್ಲೋ ಮಿಸ್ ಆಗಿಬಿಟ್ಟಿದೆ,ಇದನ್ನ ತಗೋಳ್ಳಿ ಸಾರ್,,ಅಮೇರಿಕನ್ ಕಂಪನಿ ಕಾಂಪ್ಲಿಮೆಂಟು.... ಅಂತ ಪೊಟ್ಟಣ ಕೈಗಿತ್ತ. ಸೆರೆಲಾಕಿಗೆ ಕಾಸು ತೆತ್ತು ಪೊಟ್ಟಣ ಕೈಲಿ ಹಿಡಿದು ಕ್ಯೂ ನಲ್ಲಿ ಹಿಂದೆ ನಿಂತಿದ್ದ ಬಕರಾಗಳನ್ನ ಒಂದು ಸಲ ಸಿಂಹಾವಲೋಕಿಸಿ ಅಂಗಡಿಯಿಂದ ಆಚೆ ಬಂದೆ. ಪುಟ್ಟ ಬೋಲು ಬರೋವರೆಗೂ ತೆಪ್ಪಗೆ ನಿಂತಿದ್ದರೆ ಈ ದೊಡ್ಡ ಕಾಂಪ್ಲಿಮೆಂಟು ಸಿಕ್ಕುತ್ತಿತ್ತೇ ಅಂತ ನನ್ನ ಬುದ್ಧಿವಂತಿಗೆ ಬಗ್ಗೆ ಹೆಮ್ಮೆ ಅನಿಸಿತ್ತು! ಹೆಮ್ಮೆ ಅನಿಸಿತ್ತು ಅಂತ ಹೇಳಿದಕೂಡಲೇ ಮುಂದೇನೋ.ಇದೆ ಅಂತ ನಿಮಗೆ ಅನಿಸಿರಲೇ ಬೇಕು ಅಲ್ಲವೇ? ಈಗ ಅದಕ್ಕೇ ಬರ್ತಿದೀನಿ.

ಸೆರೆಲಾಕ್ ಡಬ್ಬ ದೊಡ್ಡ ಪೊಟ್ಟಣ ಎರಡನ್ನೂ ಹಿಡಿದು ಮನೆ ಸೇರಿದೆ.ಮನಸ್ಸಿನಲ್ಲಿ ಹುಂಜದ ಮನೋಭಾವ ಸೇರಿಕೊಂಡಿದ್ದಕ್ಕೋ ಏನೋ ನಿಗುರಿಕೊಂಡು ನಡೀತಿದ್ದೆ (ಇದು ಆಮೇಲೆ ನನಗೆ ತಿಳೀತು,ನಮ್ಮ ಪಕ್ಕದ ಮನೆ ಹೆಂಗಸು ನನ್ನಾಕೆಯನ್ನ ಯಾಕೆ ನಿಮ್ಮೆಜಮಾನರು ಸೆಟೆದು ನಡೆದುಕೊಂಡು ಬಂದರು ಅಂತ ಕೇಳಿದರಂತೆ-ಅವತ್ತಿನ ಮಾರನೇ ಸಾಯಂಕಾಲ). ಮನೆ ಸೇರಿದೆ ಅಂದೆ ಅಲ್ಲವೇ? ಮುಂದಿನದ್ದು ನಿಮಗೆ ಹೇಳಲಿಲ್ಲ ಅಂದರೆ ಕರ್ತವ್ಯ ಲೋಪ ಮಾಡಿದ ಹಾಗೆ ಆಗಿಬಿಡುತ್ತೆ, ಅದರಿಂದ ಕರ್ತವ್ಯಲೋಪ ಎಸಗದೇ ಏನಾಯಿತೂಂತ ತಿಳಿಸಿಬಿಡ್ತೀನಿ....

ಮನೆಗೆ ಹೋದ ಕೂಡಲೇ ಮಗಳು ಕೆಯಲ್ಲಿಂದ ಎರಡೂ ಪೊಟ್ಟಣ ತೆಗೆದುಕೊಂಡಳು. ಮೊದಲನೇದನ್ನ ಬಿಚ್ಚಿದಳು. ಅಮ್ಮಾ ಅಣ್ಣಾ ಸೆರೆಲಾಕ್ ತಂದಿದಾನೇ ಅಂತ ಅರಚಿದಳು. ನನ್ನಾಕೆ ಎಂಟ್ರಿಯಾಯಿತು.

ಸೆರೆಲಾಕೇ ಯಾರಿಗಂತೇ? ಅಂದಳು ಅಂತ ತೋರುತ್ತೆ. ಯಾರಿಗಣ್ಣಾ ಇದೂ?

ಅದರ ಜತೆ ಅದೇನೋ ಫ್ರೀ ಕೊಡ್ತೀವೀಂತ ಬೋರ್ಡು ಹಾಕಿದ್ದ ಅಂತ ಕಥೆ ವಿವರಿಸಿದೆ.

ತಾಯಿಮಗಳು ಮೊದಲು ಕಿಸಕಿಸ ಅಂದರು.ಸೆರೆಲಾಕು ಅಂದರೇನು ಗೊತ್ತಾ ? ಇಲ್ಲ ಅಂತ ತಲೆಯಾಡಿಸಿದೆ.

ಇದು ಬೇಬಿ ಫುಡ್ಡೂ.... ನಮ್ಮನೇಲಿ ಯಾವ ಬೇಬಿ ಇದೆ?

ಬೇಬಿ ಇಲ್ಲಾಂದರೇನು ದೊಡ್ಡವರೇ ತಿನ್ನಿ ಅಂದೆ-ಇದೂ ನಾನು ನಮ್ಮ ಮೆನೇಜುಮೆಂಟಿನಿಂದ ಕಲಿತದ್ದು! ಯಾವುದೇ ವಸ್ತುವನ್ನ ಉಪಯೋಗಿಸಲೇಬೇಕು ಅಂತ ನಮ್ಮ ಮೆನೇಜರು ಪ್ರತಿ ಮೀಟಿಂಗಿನಲ್ಲೂ ಹೇಳುತ್ತಾರೆ. ಅದೇನೇ ಕಸ ಯಾಕಾದರೂ ತಂದಿರಲೀ ರೀ ಅದನ್ನ ಉಪಯೋಗಿಸಿ ಅಂಬೋದು ಅವರ ಪ್ರಿನ್ಸಿಪಲ್ಲು! ಅದನ್ನೇ ನಾನು ಇಲ್ಲಿ ಪ್ರಯೋಗಿಸಿದ್ದು. ಓ ಹಾಗೋ ಅಂದಳು ನನ್ನಾಕೆ. ತಾಯಿ ಮಗಳು ಮುಖ ಮುಖ ನೋಡಿಕೊಂಡರು ಕಣ್ಣಿನಲ್ಲಿಯೇ ಅದೇನೋ ಮಾತನಾಡಿಕೊಂಡರು. ಸೆರೆಲಾಕು ಮಕ್ಕಳ ಫುಡ್ಡು. ಅವಕ್ಕೆ ಅನ್ನ ತಿನ್ನೋಕ್ಕೆ ಆಗುಲ್ಲ ಅಂತ ಊಟದ ಬದಲಿಗೆ ತಿನ್ನಿಸೋದೂ. ನೀವೂ ಅನ್ನದ ಬದಲಿಗೆ ಇದನ್ನೇ ತಿನ್ನಿಬೆಳಿಗ್ಗೆ ಎರಡು ಚಮಚ ರಾತ್ರೀಗೆ ಎರಡು ಚಮಚ-ಊಟದ ಬದಲಿಗೆ ತಿಳೀತು ತಾನೇ?

ತಲೆಯಾಡಿಸಿದೆ.

ಎರಡನೇ ಪೊಟ್ಟಣ ಬಿಚ್ಚಿದರು.

ಅದರಲ್ಲಿ ಅದೇನೋ ಕೆಂಪಗಿರುವ ಗಟ್ಟಿ ಪದಾರ್ಥ ಇರಬೇಕೇ? ಏನಂತೆ ಇದೂ? ನನ್ನ ಹೆಂಡತಿ ಕೆಕ್ಕರಿಸಿ ಕೇಳಿದಳು. ಮಗಳು ಪೊಟ್ಟಣದ ಮೇಲಿನ ಕವರು ತೆಗೆದು ಓದಿತು. ಅಮ್ಮಾ ಇದು ಕೋಳಿಮಾಂಸ....ಅಂತ ಅರಚಬೇಕೇ?

ಫಸ್ಟ್ ಟೈಮು ಕೋಳೀ ಮಾಂಸ ಮನೇಗೆ ಬಂದಿತ್ತು,ಅದನ್ನೂ ಮಡಿಯಲ್ಲಿರೋ ಹೆಂಡತಿ ಮುಟ್ಟಿಬಿಟ್ಟಿದ್ದಳು.....

ಆಮೇಲೆ ಏನಾಯಿತೂ ಅಂತ ತುಂಬಾ ಚಿಕ್ಕದಾಗಿ, ಸಂಕ್ಷಿಪ್ತವಾಗಿ ಹೇಳಿಬಿಡ್ತೀನಿ.

ಕೋಳೀ ಮಾಂಸ ಮುಟ್ಟಿದ್ದಕ್ಕೆ ತಣ್ಣೀರಿನ ಅಭಿಷೇಕ ನನಗಾಯಿತು, ನನಗೆ ಹಿಡಿಶಾಪ ಹಾಕುತ್ತಲೇ ತಾಯಿ ಮಗಳೂ ತಣ್ಣೀರು ಸುರಿದುಕೊಂಡರು. ರಾತ್ರಿ ತಣ್ಣೀರು ಸುರಿದುಕೊಳ್ಳೋದಕ್ಕೆ ಮೊದಲು ಅದನ್ನ ಮೂರು ರಸ್ತೆಯ ಆಚೆಗಿರುವ ಕಸದ ತೊಟ್ಟೀಲಿ ನಾನೇ ಹೋಗಿ ಯಾರೂ ನನ್ನನ್ನು ನೋಡುತ್ತಿಲ್ಲ ಅಂಬುವುದನ್ನು ಖಚಿತ ಪಡಿಸಿಕೊಂಡು ಬಿಸಾಕಿ ಬಂದೆ.

ಸೆರೆಲಾಕ್ ಕಥೆ ಮತ್ತೂ ವಿಚಿತ್ರ ತಿರುವು ಪಡೆದುಕೊಂಡಿತು. ಸೆರೆಲಾಕ್ ತಿನ್ನಲು ಮಕ್ಕಳು ಯಾಕೆ ರಚ್ಚೆ ಹಿಡೀತವೆ ಅಂತ ಅರ್ಥವಾಯಿತು! ಎರಡು ದಿವಸ ಅದು ಹೇಗೋ ಕಣ್ಣು ಮುಚ್ಚಿ ನುಂಗಿದವನು, ಅಫಿಷಿಯಲ್ ಟೂರ್ ಅಂಬೋ ನೆಪ ಹೇಳಿ ಮನೆಯಿಂದ ಐನೂರು ಮೈಲಿ ದೂರದ ಊರಿಗೆ ಎರಡು ವಾರ ಹೋಗಿಬಿಟ್ಟೆ, ಬರೋ ಅಷ್ಟರಲ್ಲಿ ಸೆರೆಲಾಕ್ ಡಬ್ಬ ಮನೆಯಿಂದ ಕಣ್ಮರೆಯಾಗಿತ್ತು.

ಈಗಲೂ ಒಂದು ಜಿಜ್ಞಾಸೆ ನನ್ನನ್ನು ಕಾಡುತ್ತಲೇ ಇದೆ. ಅದೇನೂಂತ ನಿಮಗೆ ಹೇಳಲೇಬೇಕು-ಸ್ಮಶಾನಕ್ಕೆ ಹೋಗಿ ಬಂದಾಗಲೋ ಅಥವಾ ಸಾವಿನ ಮನೆಗೆ ಹೋಗಿಬಂದಾಗಲೋ ಸ್ನಾನ ಮಾಡಬೇಕು ಅಂದರೆ ಅದಕ್ಕೊಂದು ರೀಸನ್ನು ಅಂತ ಉಂಟು. ಆದರೆ ಕೋಳೀಮಾಂಸ ಮಾರುವ ಅಂಗಡೀಗೆ ಹೋಗಿ ಅಲ್ಲಿ ಯಾರಾರನ್ನೋ ಕೋಳೀಮಾಂಸ ಮುಟ್ಟಿರೋರನ್ನೋ ಅಥವಾ ಅದನ್ನ ಕೊಂಡಿರೋರನ್ನೋ ಮುಟ್ಟಿಸಿಕೊಂಡರೆ ಸ್ನಾನ ಮಾಡಬೇಕೇ ಅಂತ?

ಹಲವಾರು ಧರ್ಮಶಾಸ್ತ್ರಿಗಳನ್ನ ಈಮಾತು ಕೇಳೀದೀನಿ-ಅವರು ಯಾರೂ ನನಗೆ ಸಮರ್ಪಕವಾದ ಉತ್ತರ ಕೊಟ್ಟಿಲ್ಲ. ಮನು ಧರ್ಮಶಾಸ್ತ್ರದಲ್ಲಿ ಈ ಜಿಜ್ಞಾಸೆಗೆ ಪರಿಹಾರ ಇದೆಯೇ ತಿಳೀದು-ಯಾಕೆ ಅಂದರೆ ಅದು ನನ್ನ ಕೈಗೆ ಇನ್ನೂ ಸಿಕ್ಕಿಲ್ಲ.

ಇಷ್ಟಾದರೂ ಒಂದು ಸಂಗತಿ ನಿಮ್ಮಲ್ಲೇ ಇರಲಿ- ಫ್ರೀ ಸಿಗುವುದನ್ನ ಕೊಳ್ಳುವ ಚಟ ನನ್ನನ್ನ ಇನ್ನೂ ಬಿಟ್ಟಿಲ್ಲ. ಈಗ ಕೊಂಚ ಬುದ್ಧಿ ಕಲಿತಿದೀನಿ-ಅಂಗಡಿಯಿಂದ ಆಚೆ ಬಂದಕೂಡಲೇ ಮೂಲೆಯಲ್ಲಿ ನಿಂತು ಪದಾರ್ಥದ ಮೇಲಿರುವುದನ್ನು ಸಂಪೂರ್ಣ ಓದಿಬಿಡುತ್ತೇನೆ. ಮನೆಗೆ ಉಪಯೋಗವಾಗುವಂತಹ ವಸ್ತುವಾದರೆ ಮನೆ ಸೇರುತ್ತೆ,ಇಲ್ಲ,ಅಂದರೆ ಮೂರು ರಸ್ತೆಯಾಚೆ ಕಸದ ತೊಟ್ಟಿಯಿದ್ದೇ ಇದೆ ಮತ್ತು ಪ್ರತಿದಿವಸವೂ ರಾತ್ರಿ ಹನ್ನೊಂದಕ್ಕೋ ಹನ್ನೆರಡಕ್ಕೋ ಕತ್ತಲೂ ಆಗುತ್ತೆ......!

ವಿದ್ಯಮಾನಗಳು

- ಕು.ಕ.

ನಮ್ಮ ಟೀಂ ಇಂಡಿಯಾ, 37 ವರ್ಷದ 'ಯುವ' ನಾಯಕ, ನಮ್ಮವರೇ ಆದ ಅನಿಲ್ ಕುಂಬ್ಳೆ ನಾಯಕತ್ವದಲ್ಲಿ, ಅಜೇಯ ಎನ್ನಿಸಿಕೊಂಡಿದ್ದ ಕ್ರಿಕೆಟ್ ಆಸ್ಟ್ರೇಲಿಯಾ ತಂಡಕ್ಕೆ ಅವರದೇ ಭದ್ರಕೋಟೆಯೊಳಗೆ ಮಣ್ಣುಮುಕ್ಕಿಸಿದೆ. ಜಂಬದ ಕೋಳಿಗೆ ಗೋಳಾಯ್ತು ಎಂದು ಇಡಿ ದೇಶ ಹುಚ್ಚೆದ್ದು ಕುಣಿದಾಡುತ್ತಿದೆ. ಎರಡು ವಾರಗಳ ಹಿಂದೆ ಸಿಡ್ನಿಯಲ್ಲಿ ಅಂಪೈರುಗಳ incompetence, ಪಾಂಟಿಂಗ್ ಮತ್ತು ಕಂಪೆನಿಯವರಲ್ಲಿನ ಕ್ರೀಡಾ ಮನೋಭಾವದ ಅಭಾವ, ಹರಭಜನ್ -ಸೈಮಂಡ್ಸ್ 'ಮಂಗಾಟ' ಪ್ರಕರಣ -ಇವುಗಳೆಲ್ಲದರ ಮೊತ್ತವಾಗಿ ಭಾರತಕ್ಕೆ ಕೈಗೆ ಬಂದಿದ್ದ, ಏಕೆ ತುಟಿಯವರೆಗೂ ಬಂದಿದ್ದ ವಿಜಯದ ತುತ್ತು ಬಾಯಿಯ ಒಳಕ್ಕೆ ಹೋಗುವಷ್ಟರಲ್ಲಿ ಕೆಳಗೆ ಬಿದ್ದಿತ್ತು. ಗಾಯದ ಮೇಲೆ ಬರೆ ಎನ್ನುವಂತೆ ಆಗ ಆಸ್ಟ್ರೇಲಿಯಾದವರು ತಮ್ಮ ಅನ್ಯಾಯದ ವಿಜಯವನ್ನು ಭಾರತದ ಆಟಗಾರರನ್ನು ಹಂಗಿಸುತ್ತಾ ಗೇಲಿಮಾಡುತ್ತ ಅಟ್ಟಹಾಸದಿಂದ ಆಚರಿಸಿದ್ದರು. ಈಗ ತೆಂಡೂಲ್ಕರ್, ದ್ರಾವಿಡ್‌ಗಳಂತಹ ಹಳೆಬೇರುಗಳು ರುದ್ರಪ್ರತಾಪ, ಇಶಾಂತ್‌ಗಳಂತಹ ಹೊಸ ಚಿಗುರುಗಳ ಟೀಂ ಇಂಡಿಯಾ ಹಿರಿಯ ಅನುಭವಿ ನಾಯಕ ಅನಿಲ್ ಕುಂಬ್ಳೆ ಸಾರಥ್ಯದಲ್ಲಿ, ಭಾರತ ಗೆಲ್ಲಲು ಸಾಧ್ಯವೇ ಇಲ್ಲ ಎನ್ನುವಂತಹ ಪರ್ತ್ ನಗರದಲ್ಲಿ ಗೆದ್ದಿದೆ. ಅಂದು ಆದ ನೋವು ನಿರಾಶೆ ಈಗ ಚೂರಾದರು ಅಳಿಸಿದೆ. ನಮಗೆ, ಕರುನಾಡ ಮಂದಿಗೆ ಅಸಲಿ ಕನ್ನಡಿಗ ಕುಂಬ್ಳೆ ಇದೇ ಪಂದ್ಯದಲ್ಲಿ ಆರು ನೂರನೆಯ ವಿಕೆಟ್ ಗಳಿಸಿರುವುದು ಅಡಿಷನಲ್ ಸಂತೋಷದ ಸಂಗತಿ.

★★★

ನಾವುಗಳೆಲ್ಲಾ ಎಷ್ಟು ಬಾರಿ ನಮ್ಮ ಕಿರಿಯರನ್ನು ಆಪ್ತರನ್ನು – ಏ ಮಂಗ್ಯಾ, ಅಯ್ಯೋ ಕಪಿ ಮುಂಡೇದೆ, ಏ ಮಂಗಣ್ಣ, ಏ ಮಂಗಮ್ಮ, ನೀನೊಂದು ಬಾಲ ಇಲ್ಲದ ಕೋತಿ ಕಣೆ, ನೀನು ಬಿಡು ಸಾಕ್ಷಾತ್ ಹನುಮಂತರಾಯ ಎಂದು ಮುಂತಾಗಿ ಪ್ರೀತಿಯಿಂದ ಬೈದಿಲ್ಲ, ಬಯ್ಯಿಸಿಕೊಂಡಿಲ್ಲ? ಆದರೆ ಭಾರತದ ಸ್ಪಿನ್ ಬೌಲರ್ ಹರಭಜನ್ ಸಿಂಗ್ ಆಸ್ಟ್ರೇಲಿಯಾದ ಆಲ್‌ರೌಂಡರ್ ಆಂಡ್ರ್ಯೂ ಸೈಮಂಡ್ಸ್ ಮಹಾಶಯನನ್ನು ಮಂಕಿಯೆಂದು ಕರೆದದ್ದು ದೊಡ್ಡ ಅಂತರಾಷ್ಟ್ರೀಯ ವ್ಯಾಜ್ಯವಾಗಿದೆ. ಆ ಆಂಡ್ರ್ಯೂ ಇವನು ನನ್ನ ಬೈದ ಎಂದು ತನ್ನಮ್ಮನಿಗೆ ದೂರುಕೊಟ್ಟ, ಆ ಅಮ್ಮ ಅಪ್ಪನಿಗೆ ಹೇಳಿದಳು. ಆ ಅಪ್ಪ ಅವನಿಗೆ ಸರಿಯಾಗಿ ಶಾಸ್ತಿ ಮಾಡಿಸುತೀನಿ ಎಂದು ಪೊಲೀಸಿನವರಿಗೆ ದೂರು ಕೊಟ್ಟ, ಪೊಲೀಸಿನವರು ಕೋರ್ಟಿಗೆ ಹೋದರು. ಅಲ್ಲಿ ಆ ಅಮ್ಮನ ಇನ್ನೊಬ್ಬ ಮಗ ಹೌದು ಅವನು ಹಾಗಂದಿದ್ದನ್ನು ನಾನೇ ಕೇಳಿಸಿಕೊಂಡೆ ಎಂದು ಸಾಕ್ಷ್ಯ ಹೇಳಿದ. ಕೋರ್ಟಿನವರು ಮಂಕಿ ಎಂದು ಕರೆದದ್ದು ಅಕ್ಷಮ್ಯ ಅಪರಾಧ ಎಂದು ನಾಲ್ಕು ತಿಂಗಳು ಸಜಾ ಕೊಟ್ಟರು. ಈ ಶಿಕ್ಷೆ ತಪ್ಪು ನಮ್ಮವನು ನಿಮ್ಮವನನ್ನು ಮಂಗಣ್ಣ ಎಂದು ಹೇಳೇ ಇಲ್ಲ ಎಂದು 'ಅಪರಾಧಿಯ' ಸಂಬಂಧಿಕರು ಮೇಲಿನ ಕೋರ್ಟಿಗೆ ಹೋಗಿದ್ದಾರೆ. ನನ್ನಿಂದ ಈ ಕಥೆ ಕೇಳಿದ ನಮ್ಮ ಪಕ್ಕದ ಮನೆಯ ವೆಂಕೋಬರಾಯರು 'ಈ

ಮಂಗ್ಯಾ ಆ ಮಂಗ್ಯಾಸ ಮಂಗ್ಯಾ ಅಂಥ ಯಾಕೆ ಕರ್‍ಯಾಕಾ ಹೋದ' ಎಂದು ನನ್ನನ್ನೇ ಪ್ರಶ್ನಿಸಿದರು.

★★★

ದೇವೇಗೌಡರು "ನಾನೊಬ್ಬ ಕನ್ನಡಿಗ ಆಗಿರುವುದಕ್ಕೆ ನಾಚಿಕೆ ಆಗುತ್ತದೆ. ಯಾವುದೋ ಪಾಪಮಾಡಿ ಕರ್ನಾಟಕದಲ್ಲಿ ಹುಟ್ಟಿದ್ದೇನೆ. ಇಲ್ಲಿ ಹುಟ್ಟಬಾರದಾಗಿತ್ತು. ಆದರೆ ಹುಟ್ಟಿದ್ದು ನನ್ನ ಕರ್ಮ" ಎಂದು ಬೀದರ್‌ನಲ್ಲಿ ಹೇಳಿದರು ಎಂದು 'ಪ್ರಜಾವಾಣಿ' ವರದಿ ಮಾಡಿದೆ. ಈ ಹೇಳಿಕೆಯನ್ನು "ಹೌದು ಅವರು ಹೇಳುತ್ತಿರುವುದು ಅಗ್ದಿ ಕರೆಕ್ಟ್, ಅವರ ಈ ಒಂದು ಹೇಳಿಕೆಯನ್ನು ನಾವು ಸಂಪೂರ್ಣವಾಗಿ ಸಮರ್ಥಿಸುತ್ತೇವೆ. ಅವರು ಕರ್ನಾಟಕದಲ್ಲಿ ಹುಟ್ಟಬಾರದಿತ್ತು. ಅವರು ಕರ್ನಾಟಕದಲ್ಲಿ ಹುಟ್ಟಿದ್ದು ಅವರೊಬ್ಬರದಲ್ಲ, ಆರು ಕೋಟಿ ಕನ್ನಡಿಗರ ಕರ್ಮ" ಎಂದು ಯಡ್ಯೂರಪ್ಪ, ಸಿದ್ದರಾಮಯ್ಯ, ಡಿಕೆಶಿ, ಖರ್ಗೆ ಇತ್ಯಾದಿ ಇತ್ಯಾದಿ ಎಲ್ಲಾ ನಾಯಕರು ಅವರೊಂದಿಗೆ ತಮ್ಮ ಸಹಮತ ವ್ಯಕ್ತ ಪಡಿಸಬಹುದು!

★★★

ಭಾರತ ಒಂದು ಪ್ರಜಾಸತ್ತೆ, ಇಲ್ಲಿ ಜನರಿಂದ ಆಯ್ಕೆಯಾದವರದೇ ಅಧಿಕಾರ ಎಂದು ರಾಜಕಾರಣಿಗಳು, ಬ್ಯುರೋಕ್ರಾಟ್‌ಗಳು ಸೇರಿ ಎಲ್ಲರೂ ಹೊಗಳುತ್ತಲೇ ಇರುತ್ತಾರೆ. ಆದರೆ ಎಲ್ಲಾದರೂ ಚುನಾವಣೆ ನಡೆಸಬೇಕಾಗಿ ಬಂದಾಗ ಮಾತ್ರ ಅಯ್ಯೋ ಅದು ಆಗಬೇಕು ಇದು ಆಗಬೇಕು ಎಂದು ಚುನಾವಣೆ ನಡೆಸದಿರಲು ನೂರು ನೆಪಗಳು. ಬೆಂಗಳೂರು ನಗರಸಭೆಗೆ ಎರಡು ವರ್ಷಗಳ ಹಿಂದೆಯೇ ಚುನಾವಣೆ ನಡೆಯಬೇಕಾಗಿತ್ತು, ಕುಮಾರಸ್ವಾಮಿ ಸರ್ಕಾರಕ್ಕೆ ಜನರನ್ನು ಎದುರಿಸಲು ಪುಕ್ಕಲು. ಬೆಂಗಳೂರು ಹಿಂದೆ ಬೃಹನ್ ಸೇರಿಸಿ ಚುನಾವಣೆ ನಡೆಸುವುದನ್ನು ತಪ್ಪಿಸಿಕೊಂಡಿತು. ಬೇರೆ ನಗರಸಭೆಗಳಿಗೂ ಚುನಾವಣೆ ನಡೆಸಲು ಆ ಸರ್ಕಾರಕ್ಕೆ ಸುತರಾಮ್ ಇಷ್ಟವಿರಲಿಲ್ಲ. ಆದರೆ ಸುಪ್ರೀಂ ಕೋರ್ಟು ಮಧ್ಯಪ್ರವೇಶದಿಂದ ಚುನಾವಣೆ ನಡೆಸಲೇ ಬೇಕಾಗಿಬಂತು. ಚುನಾವಣೆ ನಡೆದು ಫಲಿತಾಂಶ ಪ್ರಕಟವಾದ ಮೇಲೆ ಜನಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರ ಮಾಡದಿರಲು ಇನ್ನಷ್ಟು ತಂತ್ರಗಳು. ಆರು ತಿಂಗಳುಗಳು ಹಿಂದೆಯೇ ಚುನಾವಣೆಯಲ್ಲಿ ಗೆದ್ದವರು ಇನ್ನೂ ನೊಣ ಹೊಡೆಯುತ್ತಿದ್ದಾರೆ. ಈಗ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಬೇಕು. ಚುನಾವಣೆ ಆದಷ್ಟೂ ಬೇಗ ನಡೆಸಬೇಕು ಎನ್ನುವುದು ನಿಯಮ. ಆರು ತಿಂಗಳುಗಳೊಳಗೆ ಮುಗಿಸಲೇ ಬೇಕು ಎನ್ನುವ ಕಡ್ಡಾಯ. ಆರು ತಿಂಗಳುಗಳೊಳಗೆ ನಿಯಮಕ್ಕೆ 179ನೆಯ ದಿನ ಎನ್ನುವ ಚುನಾವಣೆ ಕಮೀಷನ್‌ನ ಭಾಷ್ಯ. ಮೇ ತಿಂಗಳಲ್ಲಿ ಚುನಾವಣೆ ಎಂದು ಕಮೀಷನ್ ಈಗ ಹೇಳುತ್ತಿದೆ. ಅಷ್ಟರಲ್ಲಿ ಏನಾದರೂ ಮಾಡಿ ಇನ್ನು ಆರು ತಿಂಗಳುಗಳು ಮುಂದೆ ಹಾಕಿಸಲು ಈಗ ಕಾಂಗ್ರೆಸ್ ಹುನ್ನಾರ ನಡೆಸುತ್ತಿದೆಯಂತೆ. ಜೈ ಡೆಮಾಕ್ರಸಿ!

ಡಾಲರ್ ಪೀಠ ಮತ್ತು ನಗ್-ನೊಬೆಲ್

- ತುರುವೇಕೆರೆ ಪ್ರಸಾದ್

ನೊಬೆಲ್ ಪ್ರಶಸ್ತಿ ಎಂದರೆ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇರುತ್ತದೆ. ಭೌತಶಾಸ್ತ್ರ ರಸಾಯನ ಶಾಸ್ತ್ರ ವೈದ್ಯಶಾಸ್ತ್ರ, ಸಾಹಿತ್ಯಕ್ಷೇತ್ರ, ಶಾಂತಿ ಸ್ಥಾಪನೆ ಈ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡಿದವರಿಗೆ ಪ್ರತಿವರ್ಷ ನೊಬೆಲ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಅದೇ ರೀತಿ ಈ ಸಂಶೋಧನೆಗಳನ್ನೇ ಲೇವಡಿ ಮಾಡುವಂತೆ ಕುಚೋದ್ಯದ, ಕುಪ್ರತಿಷ್ಠೆಯ ಅಥವಾ ತಲೆಪ್ರತಿಷ್ಠೆಯ ಕೆಲಸ ಮಾಡಿದವರಿಗೂ ಪ್ರಶಸ್ತಿಯಿದೆ. ಇದಕ್ಕೆ 'ಇಗ್ನೊಬೆಲ್' ಎಂದು ನಾಮಕರಣ ಮಾಡಿದ್ದಾರೆ. ಪ್ರತಿವರ್ಷ ನೊಬೆಲ್ ಪ್ರಶಸ್ತಿ ಪ್ರಕಟಿಸಿದ ಬೆನ್ನಲ್ಲೇ ಈ ಇಗ್ನೊಬೆಲ್ ಪ್ರಶಸ್ತಿಗಳನ್ನು ಪ್ರಕಟಿಸಲಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಬ್ರಿಟನ್ನಿನ ಕೊಕೊ ಕೋಲ ಕಂಪೆನಿ ನಲ್ಲಿಯಲ್ಲೂ ಖನಿಜ ನೀರು ಬರುತ್ತದೆ ಎಂಬುದನ್ನು ತೋರಿಸಿ ಇಗ್ನೊಬೆಲ್ ಗಿಟ್ಟಿಸಿತ್ತು. ಫ್ಲಾರಿಡಾದ 'ಅಮೇರಿಕನ್ ನ್ಯೂಡಿಸ್ಟ್ ಲೈಬ್ರರಿ' ಇಗ್ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು ನುಣ್ಣಗೆ ತನ್ನ ತೆಕ್ಕೆಗೆ ಜಾರಿಸಿಕೊಂಡಿತ್ತು. ಅಲಾಗಂ ದೇಶದ ಅಪ್ಪ ಮಕ್ಕಳಿಬ್ಬರು ಬೊಕ್ಕ ತಲೆಯ ಭಾಗ ಎದ್ದು ಕಾಣದ ಹಾಗೆ ಕೂದಲು ಹೇಗೆ ಬಾಚಬೇಕು ಎಂಬುದರ ಬಗ್ಗೆ ಸಂಶೋಧನೆ ನಡೆಸಿ ಇಗ್ನೊಬೆಲ್ ಗಿಟ್ಟಿಸಿದ್ದರು. 7 ಜನ ಒಟ್ಟಾಗಿ ದೊಡ್ಡ ಗಾತ್ರದ ಒಂದೇ ಬಳೆಯನ್ನು ಸುತ್ತಿಸಲು ಸಾಧ್ಯ ಎಂದು ಸಾಬೀತು ಮಾಡಿ ಒಟ್ಟಾವಾ ವಿ.ವಿ.ಯ ಸಂಶೋಧಕರು ಇಗ್ನೊಬೆಲ್ ಪ್ರಶಸ್ತಿಯ ಕಿರೀಟವನ್ನು ತಲೆಗೆ ಏರಿಸಿಕೊಂಡಿದ್ದರು. ಹೀಗೇ ಮನುಷ್ಯರ ಹೊಕ್ಕುಳಲ್ಲಿ ಸಿಕ್ಕಿಕೊಂಡ ಗುಂಜು ದಾರದ ಎಳೆ ಬಿಡಿಸಿದವರಿಗೆ, ಅಲಾರಾಂ ಹೊಡೆದ ಕೂಡಲೇ ತಲೆಯ ಮೇಲೆ ತಟ್ಟಿಸಿಕೊಂಡು ತೆಪ್ಪಗಾಗದೆ ಹಾರುತ್ತಾ ಹೋಗಿ ಕಿರ್ರೆಂದು ಮುಸುಗಿಕ್ಕಿ ಮಲಗಿದವ ಮತ್ತೆ ಮೇಲೇಳುವಂತೆ ಮಾಡುವ ಹಾರುವ ಗಡಿಯಾರ ಕಂಡುಹಿಡಿದ ಮಹಾಶಯನಿಗೆ, ಬೀಜ ತೆಗೆದ ನಾಯಿಗಳಿಗೆ ಕೃತಕ ವೃಷಣ ಗೋಲಿಗಳನ್ನು ಕಸಿಮಾಡಿದ ಪುಣ್ಯಾತ್ಮರಿಗೆ ಈ ಇಗ್ನೊಬೆಲ್ ಪ್ರಶಸ್ತಿ ದಕ್ಕಿದೆ. ಇವರಿಗೆಲ್ಲಾ ನಮೋ ನಮಃ ಎನ್ನಲೇಬೇಕು!

ರಾಮನದ್ದೂ ಪ್ರತಿಭೆ, ರಾವಣನದ್ದೂ ಪ್ರತಿಭೆ, ಅಲ್ಲ ಎನ್ನಲು ಸಾಧ್ಯವಿಲ್ಲ. ಈಗಂತೂ ನ್ಯಾನೋ(ನ್ಯಾರೋ?) ಟೆಕ್ನಾಲಜಿಯ ಯುಗ. ದೊಡ್ಡದಕ್ಕಿಂತ ಹೆಚ್ಚಿನ ಮಹತ್ವ ಚಿಕ್ಕ ಪುಟ್ಟ ವಸ್ತುಗಳಿಗಿರುತ್ತವೆ. ಕೊಲಂಬಸ್ ಇಂಡಿಯಾ ಕಂಡುಹಿಡಿಯುತ್ತೇನೆಂದು ಹೋಗಿ ವೆಸ್ಟ್ ಇಂಡೀಸ್ ಕಂಡುಹಿಡಿಯಲಿಲ್ಲವೇ? ಆರ್ಕಿಮಿಡೀಸ್‌ಗೆ ತನ್ನ ಪ್ರಯೋಗ ಸಕ್ಸಸ್‌ಫುಲ್ ಎಂದು ಗೊತ್ತಾದ್ದು ಜೀವಮಾನದಲ್ಲಿ ಮೊದಲ ಬಾರಿಗೆ ಸ್ನಾನ ಮಾಡಲು ಹೋದಾಗ ತಾನೇ?

'ಯುರೇಕಾ' ಎಂದು ಕೂಗುತ್ತಾ ಸಂತಸದಿಂದ ಅರ್ಧಸ್ನಾನಕ್ಕೇ ಈಚೆ ಬರಲಿಲ್ಲವೇ? ಯಾರು ಏನು ಕಂಡು ಹಿಡಿಯುತ್ತಾರೋ ಯಾರಿಗೆ ಗೊತ್ತು? ಮುಂದೊಮ್ಮೆ ಈಗ ಇಗ್ನೊಬೆಲ್ ಪಡೆವವರೇ ಮುಂದೆ ನೊಬೆಲ್ ಗಿಟ್ಟಿಸಿಯಾರೋ ಏನೋ?

ಅದು ಹಾಗಿರಲಿ, ಒಬ್ಬ ಏನಾದರೂ ಸಾಧಿಸಿದ್ದೇನೆ ಎಂದರೆ ಮೂಗು ಮುರಿಯುವವರು, ಕಾಲೆಳೆಯುವವರು, ಕುಹಕವಾಡುವರು ಇದ್ದೇ ಇರುತ್ತಾರೆ. ಇದು ಆಲ್ ಓವರ್ ದಿ ವರ್ಲ್ಡ್ 'ಆನ್ ಲೈನ್ ಕಾನ್ಸೆಪ್ಟ್' ಆಗಿ ಕೂತಿದೆ. ಹೀಗಿರುವಾಗ ನೊಬೆಲ್ ಪ್ರಶಸ್ತಿಗಳನ್ನು ಅಣಕವಾಡಲೋ ಎಂಬಂತೆ ಈ ಇಗ್ನೊಬೆಲ್ ಪ್ರಶಸ್ತಿಗಳು ಸೃಷ್ಟಿಯಾಗಿರುವಂತಿವೆ. ನೊಬೆಲ್ ಪ್ರಶಸ್ತಿ ವಿಜೇತರ ಸಂಶೋಧನೆಗಳು ನಮ್ಮ ಪಾಲಿಗೆ ಕಬ್ಬಿಣದ ಕಡಲೆ. ನಮ್ಮಂತಹ ಪಾಮರರಿಗೆ ಅವುಗಳ ತಲೆ ಬುಡ ಅರ್ಥವಾಗುವುದಿಲ್ಲ. ಇಗ್ನೊಬೆಲ್ ಶೂರರ ಸಾಧನೆ ಹಾಗಲ್ಲ. ಸಂಶೋಧನೆಯ ಒಳಾರ್ಥ ಏನೇ ಇದ್ದರೂ ಮೇಲ್ನೋಟಕ್ಕೆ ಅವು ಸ್ವಾರಸ್ಯಕರವಂತೂ ಹೌದು!

ಅದಿರಲಿ ಬಿಡಿ, ನನ್ನ ಯೋಚನೆಯೇ ಬೇರೆ. ನಾವು ಭಾರತೀಯರು ಗಂಭೀರ ವಿಷಯಗಳ ಬಗ್ಗೆ ಬಹು ಬೇಗ ಲೇವಡಿ ಮಾಡುತ್ತೇವೆ; ವ್ಯಂಗ್ಯಮಾಡುತ್ತೇವೆ, ಮೇಲೆ ಹತ್ತುವವರ ಕಾಲು ಹಿಡಿದು ಕೆಳಗೆಳೆಯುತ್ತೇವೆ, ಹಾಡಿಗೊಂದು ಅಣಕವಾಡು ಕಟ್ಟುತ್ತೇವೆ. ಅದರಲ್ಲೂ ಕುಪ್ರತಿಷ್ಠೆಯ, ಕೆಲಸಕ್ಕೆ ಬಾರದ ಸಂಶೋಧನೆ ಮಾಡುವುದರಲ್ಲಿ ನಾವು ನಿಸ್ಸೀಮರು. ಎಡಬಿಡಂಗಿ ಕೆಲಸ ಮಾಡುವುದರಲ್ಲಿ ನಾವು ಅಗ್ರಗಣ್ಯರು; ಅಗ್ರಮಾನ್ಯರು. ಹಾಗಾಗಿ ಬಹುತೇಕ ಇಗ್ನೊಬೆಲ್ ಪ್ರಶಸ್ತಿಗಳು ನಮಗೇ ದಕ್ಕಬೇಕಿತ್ತು. ಈ ಇಗ್ನೊಬೆಲ್ ಎಂಬ ಎಡವಟ್ಟು ಪ್ರಶಸ್ತಿಗಳಲ್ಲಿ ಒಂದೋ, ಎರಡೋ ನಮಗೆ ಸಿಕ್ಕಿದೆ. ಕನಿಷ್ಠ ಅರ್ಧ ಡಜನ್ ಪ್ರಶಸ್ತಿಯಾದರೂ ಭಾರತೀಯರಾದ ನಮಗೆ ಸಿಕ್ಕದಿರುವುದು ಘೋರ ಅನ್ಯಾಯ.

ಉದಾಹರಣೆಗೆ ಹೇಳುವುದಾದರೆ ಕಳೆದ ಬಾರಿ ಬೊಕ್ಕ ತಲೆಯ ಭಾಗ ಎದ್ದು ಕಾಣದ ಹಾಗೆ ಕೂದಲು ಬಾಚುವುದರ ಬಗ್ಗೆ ಅರ್ಲಾಂಡೋದ ತಂದೆ ಮಗ ಇಗ್ನೊಬೆಲ್ ಪ್ರಶಸ್ತಿ ಪಡೆದಿದ್ದರು. ವಾಸ್ತವವಾಗಿ ಇದನ್ನೆಲ್ಲಾ ನಮ್ಮ ತಾತ ಮುತ್ತಾತಂದಿರೇ ಮಾಡಿ ಮುಗಿಸಿದ್ದರು. ಬರೀ ಬೊಕ್ಕ ತಲೆಯಿರಲಿ, ಅದರ ಮಧ್ಯೆ ಹೆಂಡತಿಯ ಲಟ್ಟಣಿಗೆ ಪ್ರಹಾರದ ಫಲವಾಗಿ ಎದ್ದಿರುವ ಭಾರೀ ಬುಗುಟನ್ನೂ ಕಾಣದಂತೆ ತಲೆ ಬಾಚುವ ಕಲಿಗಳು ನಮ್ಮಲಿದ್ದಾರೆ. ಇನ್ನೂ ಮುಂದುವರೆದು ಹೇಳುವುದಾದರೆ ನಾವೀಗ ತಲೆಯ ಮೇಲಿರುವ ಕೂದಲನ್ನೇ ಉದುರಿಸಿ ಅಂತಹ ಪೂರ್ಣ ಬೊಕ್ಕ ಚೊಂಬನ್ನು ನಿಮ್ನ ದರ್ಪಣವಾಗಿ, ರಿಫ್ಲೆಕ್ಟರ್‌ಗಳಾಗಿ, ಡಿಶ್ ಆಂಟೆನಾಗಳಾಗಿ ಹೇಗೆ ಬಳಸಬಹುದೆಂಬ ಬಗ್ಗೆ ಹೊಸ ಆವಿಷ್ಕಾರ ಮಾಡಿದ್ದೇವೆ. ಈ ಎಡವಟ್ಟು ಅಧಿಕ ಪ್ರಸಂಗಗಳು ಇಗ್ನೊಬೆಲ್ ಸಮಿತಿಯ ಗಮನಕ್ಕೆ ಬಂದಿಲ್ಲದಿರುವುದು ವಿಷಾದದ ಸಂಗತಿ. ಇನ್ನೂ ಬ್ರಿಟನ್ನಿನ ಕೊಕೊ ಕೋಲ ಕಂಪನಿ ನಲ್ಲಿಯಲ್ಲೂ ಖನಿಜ ನೀರು ಬರುತ್ತದೆ ಎಂದು ತೋರಿಸಿ ಪ್ರಶಸ್ತಿ ಗಿಟ್ಟಿಸಿದೆ. ನಾವು ತುಂಬಾ ಹಿಂದೆಯೇ ಇದರ ಉಲ್ಟಾ ಸಂಶೋಧನೆ ಮಾಡಿದ್ದೇವೆ. ಬೋರ್ ನೀರಿನಲ್ಲಿ ಸಾಕ್ಷಾತ್ ಖನಿಜ ಚೂರುಗಳು ಐ ಮೀನ್ ಕೇಸಿಂಗ್ ಪೈಪ್ ಪಳಯುಳಿಕೆಗಳು ಬರುತ್ತವೆ ಎನ್ನುವುದನ್ನು ಕಂಡು ಹಿಡಿದಿದ್ದೇವೆ. ಹೀಗೆ ನೀರಿನ ಜೊತೆ ಖನಿಜ ಚೂರುಗಳು ಬರುವುದೇ ನಿಜವೆಂದ ಮೇಲೆ ಆ ನೀರನ್ನು ಖನಿಜ

ನೀರಲ್ಲ ಎನ್ನುವ ಧೈರ್ಯ ಯಾವನಿಗೆ ಇದೆ? ಇಂತಹ ಒಂದು ಅತ್ಯುತ್ಕೃಷ್ಟ ಸಂಶೋಧನೆಗೆ ಒಂದು ಇಗ್ನೊಬೆಲ್ ಕೊಡುವುದು ಬೇಡವೇ?

ಇಷ್ಟೇ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಇಗ್ನೊಬೆಲ್ ಪಡೆಯುವ ಯೋಗ್ಯತೆ ನಮಗಿದೆ. ಹೇಗಂತೀರಾ? ಈ ಕೆಳಗಿನ ಸಂಗತಿಗಳನ್ನು ಪ್ರಾರಂಭಿಸಿ ನೋಡಿ.

ತಮಿಳುನಾಡಿನಲ್ಲಿ ಡಾಕ್ಟರ್ ದಂಪತಿಗಳ 12 ವರ್ಷದ ಸುಪುತ್ರ ಸಿಸೇರಿಯನ್ ಆಪರೇಶನ್ ಮಾಡಿದ್ದಾನೆ. ಅವನಿಗೊಂದು ಇಗ್ನೊಬೆಲ್ ಕೊಡುವುದು ಬೇಡವೇ?

ಅನಿಲ್ ಬಾಲ್ಲಂಕರ್ ಎನ್ನುವವರು ತಮ್ಮ ಇಚ್ಛಾಶಕ್ತಿಯಿಂದ ಎರಡು ನಿಮಿಷಗಳವರೆಗೆ ಬೇಕೆಂದಾಗ ತಮ್ಮ ತಲೆಗೂದಲನ್ನು ನೆಟ್ಟಗೆ ನಿಲ್ಲಿಸಬಲ್ಲರಂತೆ. ಒಣನಾರಿನಂತೆ ಮುದುರಿಬಿದ್ದ ಅಳಿದುಳಿದ ಒಂದೋ, ಎರಡೋ ಕೂದಲೆಳೆಯನ್ನು ಉದುರದಂತೆ ಹಿಡಿದಿಟ್ಟುಕೊಳ್ಳುವುದೇ ಹರಸಾಹಸವಾಗಿರುವಾಗ ಇದೇನು ಸಾಮಾನ್ಯ ಸಾಧನೆಯೇ? ವೈಮಾಂತರಿಕ್ಷ ಮಾದರಿಯಲ್ಲಿ ಇದಕ್ಕೊಂದು 'ರೋಮಾಂತರಿಕ್ಷ ಇಗ್ನೊಬೆಲ್' ನೀಡುವುದು ಬೇಡವೇ? ಇದು ಹಾಗಿರಲಿ, ನಮ್ಮ ಹುಡುಗರ ಟೋಪನ್ನಿನ ಕೂದಲೇ ಸೆಟೆದು ನಿಲ್ಲುವಂತೆ ತಮ್ಮ ಇಚ್ಛಾಶಕ್ತಿ, ದೃಷ್ಟಿಶಕ್ತಿ ಇನ್ನೂ ಏನೇನೋ ಪ್ರದರ್ಶಿಸುವ ಭವ್ಯ ಭಾರತದ ಲತಾಂಗಿಯರಿಗಾದರೂ ಒಂದು ಇಗ್ನೊಬೆಲ್ ಕೊಡದಿದ್ದರೆ ಹೇಗೆ?

ಇನ್ನೂ ಭೌತಶಾಸ್ತ್ರದಲ್ಲಿ ಯಾರು ಏನೆಲ್ಲಾ ಮಾಡಿರಬಹುದು. ಜಾರ್ಖಂಡ್‌ನ ನಮ್ಮ ರಾಹುಲ್‌ನಂತೆ ಯಾರಾದರೂ ಬೆಟ್ಟವನ್ನು ಮದುವೆಯಾಗಿದ್ದಾರಾ? ಶಾಪ ವಿಮೋಚನೆಗೆಂದು ಬೆಟ್ಟವನ್ನು ಮದುವೆಯಾದ ರಾಹುಲ್ 'ಶೇಪ್' ವಿಮೋಚನೆಗೆ ಮತ್ತೊಬ್ಬಳನ್ನೂ ಕಟ್ಟಿಕೊಂಡ. ಬೆಟ್ಟ ಹೆಂಡತಿ ಎರಡೂ ಸಾದೃಶ್ಯ ವಸ್ತುಗಳು ಎಂದು ಪ್ರೂವ್(ಅಪ್ರೂವ್?) ಮಾಡಿದ ಅವನಿಗೊಂದು ಇಗ್ನೊಬೆಲ್ ಕೊಡುವುದು ದಂಡ ಎಂದು ಮದುವೆಯಾದ ಯಾವ ಗಂಡಸೂ ಹೇಳಲಾರ.

ಇನ್ನೂ ಆರ್ಥಿಕ ಕ್ಷೇತ್ರಕ್ಕೆ ಬನ್ನಿ. ದುಡ್ಡನ್ನು ಸುರಕ್ಷಿತವಾಗಿಡಲು ಸೇಫ್ ಲಾಕರ್‌ಗಳಿವೆ. ಒಂದು ಕಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯಲು ಬ್ರೀಫ್‌ಗಳಿವೆ. ಇದು ಸಾಚಾ ನೋಟಿಗಾಯಿತು. ಕಳ್ಳ ಹಣಕ್ಕೆ? ಅದಕ್ಕೂ ಬೇಕಾದಷ್ಟು ವಾಮಮಾರ್ಗಗಳಿವೆ. ದುಡ್ಡನ್ನು ಯಾರ್ಯಾರೋ ಎಲ್ಲೆಲ್ಲೋ ಇಟ್ಟುಕೊಂಡು ಏಮಾರಿಸಲು ನೋಡಿದ್ದಾರೆ. ಮೊನ್ನೆ ಮೊನ್ನೆ ಚೆನ್ನೈ ಏರ್ ಪೋರ್ಟ್‌ನಲ್ಲಿ ಇಬ್ಬರು ಹಣಕಾಸು ಪಂಡಿತರು(?) ಲಕ್ಷಾಂತರ ಡಾಲರ್‌ಗಳನ್ನು ಗುದದಲ್ಲಿ ಇಟ್ಟುಕೊಂಡು ವಿಮಾನದಲ್ಲಿ ಪರಾರಿಯಾಗಲು ಸ್ಕೆಚ್ ಹಾಕಿದ್ದರು. (ಇದನ್ನು 'ಬ್ಲಾಕ್ ಮನಿ' ಎನ್ನುವುದಕ್ಕಿಂತ 'ಬ್ಯಾಕ್ ಮನಿ' ಎನ್ನಬಹುದಾ?) ಈ ಡಾಲರ್ ಪೀಠರಿಗೆ ಆರ್ಥಿಕ ಇಗ್ನೊಬೆಲ್ ಕೊಡದಿದ್ದರೆ ಏನು ಚೆನ್ನ ಹೇಳಿ?

ಕೇರಳದ ಸೀಮತ್ತಿ ಟೆಕ್ಸ್‌ಟೈಲ್ಸ್‌ನವರು 1585 ಅಡಿ ಉದ್ದದ ಸೀರೆ ನೇಯ್ದು ಲಿಮ್ಕಾ ದಾಖಲೆಗೋ, ಗಿನ್ನೀಸ್ ದಾಖಲೆಗೋ ಸೇರಿದ್ದಾರಂತೆ. ಸಂತೋಷ, ಸೇರಲಿ ಬಿಡಿ. ಇಂತಹದೊಂದು ಸೀರೆಯನ್ನು ಆಕಸ್ಮಾತ್ ಉಟ್ಟರೆ ನೆರಿಗೆಯನ್ನು ಎಲ್ಲಿಗೆ ತುರುಕಿಕೊಳ್ಳಬೇಕು

ಎಂಬ ಬಗ್ಗೆ ಅಪ್ಪಟ ಭಾರತೀಯ ನಾರಿಯರು ಸಂಶೋಧನೆ ನಡೆಸಿದ್ದಾರಂತೆ. ಇನ್ನೊಂದೆಡೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸೀರೆಯುಡುವ, ಅದನ್ನು ಪ್ರಾರಬ್ಧ ಕರ್ಮ ಎಂದೇ ಭಾವಿಸುವ 'ಅಪ್ ಟು ಡೇಟ್' ಅಮ್ಮಣ್ಣಿಯರು ಈ ಸೀರೆ ಉಟ್ಟೂ ಹೊಕ್ಕಳು ಕಾಣುವಂತೆ ಕುಬುಸ (ಅಕಸ್ಮಾತ್ ಹಾಕಿದರೆ!) ಮತ್ತು ನೆರಿಗೆಯನ್ನು ಸಮ ಭಾಜಕ ವೃತ್ತದಿಂದ ಎಷ್ಟು ಸಮಾನ ದೂರದಲ್ಲಿ ಕೂರಿಸಬೇಕು ಎಂಬ ಲೆಕ್ಕಾಚಾರದಲ್ಲಿ ಯಶಸ್ಸು ಗಳಿಸಿದ್ದಾರಂತೆ. ಹೊಕ್ಕುಳಲ್ಲಿ ಸಿಕ್ಕ ಗುಂಜು, ದಾರದ ವಿಶ್ಲೇಷಣೆಗೇ ಇಗ್ನೊಬೆಲ್ ಪ್ರಶಸ್ತಿ ಸಿಗುತ್ತದೆ ಎಂದಾದರೆ ರವಿಚಂದ್ರನ್‌ನಂತಹ ಹೀರೋಗಳು ಏನೆಲ್ಲಾ ತುಂಬಿರುವ ಆ ಹೊಕ್ಕಳು 'ಗುಂಜಿನ ಉತ್ಖನನಕ್ಕೆ' ಸಿಗುವಂತೆ ಸಹಕರಿಸಿದ ಪ್ರಮುದೆಯರಿಗೆ ಇಗ್ನೊಬೆಲ್ ಕೊಡುವುದು ಬೇಡ ಅಂತೀರಾ?

ಇನ್ನು 4700 ರೂ ಬಿಸಾಕಿ ಚಂದ್ರನ ಮೇಲೆ ಎರಡು ಎಕರೆ ಸೈಟು ಮಾಡಿದ್ದೇವೆ ಎಂದು ಕಲ್ಕತ್ತಾದ ದಂಪತಿಗಳು ಘೋಷಿಸಿದ್ದರು. ಯಾವುದೇ ರಾಕೆಟ್ ಇಲ್ಲದೆ 'ರೈಲು' ಬಿಟ್ಟು 'ಅಗೋ ನೋಡು ಚಂದ್ರ ಬಿಂಬ, ತಗೋ ಕೈಗೆ ತಾಮ್ರದ ಚೊಂಬ', ಎನ್ನುವ ಈ ದಂಪತಿಗಳಿಗೆ ವ್ಯೋಮಾಂತರಿಕ್ಷ ಇಗ್ನೊಬೆಲ್ ಕೊಡುವುದು ಬೇಡವೇ?

ಇನ್ನು ಸಾಹಿತ್ಯದ ವಿಷಯಕ್ಕೆ ಬಂದರೆ ನಮ್ಮಲ್ಲಿ ಜ್ಞಾನಪೀಠ ಗಳಿಸುವ ಸಾಹಿತ್ಯ ಕೃತಿಗಳಿಗಿಂತ ಜ್ಞಾನಪಿತ್ಥ ಕೆರಳಿಸುವ ಸಾಹಿತ್ಯದ ಕೆಟಗರಿಯೇ ಹೆಚ್ಚು. ಇಂತಹ ಎಷ್ಟೋ (ಕೆಟ್ಟ?) ಸಾಹಿತ್ಯಗಳು ಅಕಸ್ಮಾತ್ ಸಿನಿಮಾ ಆಗಿಬಿಡುತ್ತವೆ. ವರ್ಷದ ಅತ್ಯಂತ ಕೆಟ್ಟ ಚಿತ್ರಗಳ ತಂತ್ರಜ್ಞರು ಮತ್ತು ಕಲಾವಿದರಿಗಾಗಿ ನೀಡುವ 'ಗೋಲ್ಡನ್ ರಾಸ್ ಬೆರ್ರಿ' ಪ್ರಶಸ್ತಿಗೆ ನಮ್ಮ ಮೂಲದವರೇ ಆದ ಮನೋಜ್ ನೈಟ್ ಶಾಮಲನ್ ಎಂಬುವರನ್ನು ನಾಮಕರಣ ಮಾಡಲಾಗಿತ್ತು. ಆ ಚಿತ್ರದ ಹೆಸರು 'ಲೇಡಿ ಇನ್ ವಾಟರ್'. ಅಂದ ಮೇಲೆ ಈ ಚಿತ್ರದ ಸಾಹಿತ್ಯ ಬರೆದ ಪುಣ್ಯಾತ್ಮರಿಗೆ ಇಗ್ನೊಬೆಲ್ ಸಾಹಿತ್ಯ ಗೌರವ ನೀಡದಿದ್ದರೆ ಹೇಗೆ? ಲೇಡಿ ಇನ್ ವಾಟರ್ ಚಿತ್ರವನ್ನು ಮೀರಿಸುವಂತಹ 'ಬೇರ್ ಲೇಡಿ ಇನ್ ವಾಟರ್' ಮಾದರಿಯ ಹಲವಾರು ಕೆಟ್ಟ ಚಿತ್ರಗಳು ನಮ್ಮ ದೇಶದಲ್ಲಿವೆ. ಅವಕ್ಕಾದರೂ ಇಗ್ನೋಬೆಲ್ಲೋ, ಕನಿಷ್ಠ ನಗ್ನೋಬೆಲ್ಲೋ ಬರುವುದು ಬೇಡವೇ? ಹಾಗೆಯೇ ನಮ್ಮ ಭಾರತೀಯ ಮೂಲದ ಲೇಖಕಿ ಕಾವ್ಯ 'ಹೌ ಐ ಗಾಟ್ ಎ ಕಿಸ್ ಫ್ರಂಮ್ ಓಪೆಲ್?' ಎಂಬುದನ್ನು ಯಾರದ್ದೋ ಪುಸ್ತಕದಿಂದ ಕಾಪಿ ಹೊಡೆದು ಪ್ರಚಾರ ಗಿಟ್ಟಿಸಿರಲಿಲ್ಲವೇ? ಈ ಕಾಪಿ ಸಾಹಿತ್ಯ(ಎತ್ತು ಸಾಹಿತ್ಯ?)ಕ್ಕಾದರೂ ಒಂದು ಇಗ್ನೊಬೆಲ್ ಬೇಡವೇ?

ದೇವರ ವಿಷಯದಲ್ಲೂ ಹಲವಾರು ಸಂಶೋಧನೆಗಳನ್ನು ಮಾಡಿದವರು ನಾವು. ಕಲ್ಲಿನ ಗಣಪತಿ ಹಾಲು ಕುಡಿಯುತ್ತದೆ ಎಂದು ಕಂಡುಹಿಡಿದ ಕೀರ್ತಿ ನಮಗೇ ಸಲ್ಲುತ್ತದೆ. ಕಲ್ಲು, ಮಣ್ಣಿನ ಗಣಪತಿ ಎರ್ರಾಬಿರ್ರಿ ಹಾಲು ಕುಡಿದು ಬಿಡುತ್ತದೆಂದು ಹೆದರಿ 'ಸ್ಪೇರ್ ಗಣಪತಿ' ಮಾಡಿದ್ದೇವೆ. ಗಾಲಿಯ ಕಣ್ಣು, ಬೇರಿಂಗ್‌ಗಳಿಂದ ಮಾಡಿದ ಹಾರ, ಫ್ಯಾನ್‌ಬೆಲ್ಟ್‌ನಿಂದ ಮಾಡಿದ ಜನಿವಾರ, ಟ್ಯೂಬಿನಿಂದ ಮಾಡಿದ ಸೊಂಡಿಲು, ಹೀಗೆ ಬಸ್ಸು ಲಾರಿಯ ಸ್ಪೇರ್ ಪಾರ್ಟ್ಸ್ ಹಾಕಿ ನಿರ್ಮಿಸಿರುವ ಗಣಪತಿ ಹಾಲೆಲ್ಲಿ ಕುಡಿದೀತು? ಹೆಚ್ಚೆಂದರೆ ಗ್ರೀಸ್ ತಿಂದು ಕ್ಯಾಸ್ಟ್ರಾಲ್(ಹರಳೆಣ್ಣೆ)ಕುಡಿದೀತು! ಇಂತಹ ಗಣಪತಿ ಕೇವಲ ಕಲ್ಪನೆ ಎಂದುಕೊಳ್ಳಬೇಡಿ,

ನಾಗಪುರದ ಶಿವಾಜಿ ಪಾರ್ಕ್‌ನಲ್ಲಿದೆ. ಯಂತ್ರ ಮಾನವನನ್ನು ನಿರ್ಮಿಸುವುದಕ್ಕಿಂತ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಯಂತ್ರ ದೇವರನ್ನೇ ಸೃಷ್ಟಿಸಿರುವ ನಮ್ಮ ತಂತ್ರಗಾರಿಕೆಗೆ ಎಷ್ಟು ಇಗ್ನೊಬೆಲ್ ಕೊಟ್ಟರೂ ಸಾಲದು.

ಸಗಣಿಯಿಂದ ವೆನಿಲ್ಲಾ ಸುಗಂಧ ತಯಾರಿಸಿದ ಜಪಾನೀ ಸಂಶೋಧಕಿ ಮಾಯೂ ಯಮಾಮೊಟೆಗೆ ಇಗ್ನೊಬೆಲ್ ಪ್ರಶಸ್ತಿ ಸಿಕ್ಕಿದೆಯಂತೆ. ಇದೇನು ಮಹಾ ಬಿಡಿ. ಇದರ ಉಲ್ಟಾ ಸಂಶೋಧನೆ ಅಂದರೆ ವೆನಿಲ್ಲಾದಿಂದ ಸಗಣಿ ತಯಾರಿಸುವ ವಿಧಾನದ ಪೇಟೆಂಟ್ ನಮಗೇ ಸಿಗಬೇಕು. ಎಷ್ಟೋ ಶತಶತಮಾನಗಳ ಹಿಂದೆಯೇ ಈ ಸತ್ಯವನ್ನು ನಾವು ಕಂಡು ಹಿಡಿದಿದ್ದೆವು. ಬೇಕಾದರೆ ನೀವೇ ಪರೀಕ್ಷಿಸಿ. ಭಾರತದ ಯಾವುದೇ ಎಮ್ಮೆಗೆ ವೆನಿಲ್ಲಾ ತಿನ್ನಿಸಿ. ಅದು ತಪ್ಪದೆ ಸಗಣಿಯನ್ನೇ ಹಾಕುತ್ತದೆ. ಇದಕ್ಕೆ ಇಗ್ನೊಬೆಲ್ ಬೇಡವೇ?

ಇನ್ನು ಸಂಪರ್ಕ ಕ್ಷೇತ್ರದಲ್ಲಿ ಮೊಬೈಲ್ ಆವಿಷ್ಕಾರ ಮತ್ತು ಅಭಿವೃದ್ಧಿಯಿಂದ ಮಂಗನ ಕೈಲಿ ಮಾಣಿಕ್ಯ ಕೊಟ್ಟಂತಾಗಿದೆ. ಮೊಬೈಲ್ ಇಲ್ಲದೆ ಬದುಕೇ ಇಲ್ಲ ಎಂಬಂತಾಗಿದೆ. ಮಾತಾಡುವುದಕ್ಕಿಂತ ಹೆಚ್ಚಾಗಿ ಅನೇಕ ಗುಪ್ತ ಚಟ ಮತ್ತು ಪೋಲಿತನಕ್ಕೆ ಮಾಧ್ಯಮವಾಗಿ ಮೊಬೈಲ್ ಒದ್ದಾಡುತ್ತಿದೆ. ಮೊಬೈಲ್‌ನ ಎಲ್ಲಂದರಲ್ಲಿ ಸಿಕ್ಕಿಸಿಕೊಂಡು ಮನುಷ್ಯನ ಬ್ಯಾಟರಿ ವೀಕ್, ಲೀಕ್ ಆಗುತ್ತಿರುವಂತೆಯೇ, ಅತಿಯಾದ ಬಳಕೆಗೆ ಬಲಿಯಾಗಿ ಮೊಬೈಲ್ ಬ್ಯಾಟರಿಗಳು 'ಢಂ' ಎನ್ನುತ್ತಿವೆ. 'ಢಂ' ಎನ್ನುವ ತ್ರಾಣವಿಲ್ಲದ ಬ್ಯಾಟರಿಗಳು ಕರೆಂಟನ್ನೂ ಹೀರದೆ ತೆಪ್ಪಗೆ ಕುಳಿತಿರುತ್ತವೆ. ಎಲ್ಲಾ ಸರಿಯಾಗಿದೆ ಎಂದರೂ ರಸ್ತೆಯಲ್ಲಿ, ಪಾರ್ಕ್‌ನಲ್ಲಿ ಹೋಟೆಲಲ್ಲಿ ಮೊಬೈಲ್ ಛಾರ್ಜ್ ಮಾಡುವ ಸಾಧ್ಯತೆ ನಮ್ಮ ದೇಶದಲ್ಲಿ ತೀರಾ ಕಮ್ಮಿ. ಮೈಬಿಸಿಯಿಂದಲೇ ಮೊಬೈಲ್ ಛಾರ್ಜ್ ಆಗುತ್ತದೆ ಎಂದು ಇತ್ತೀಚೆಗೆ ಸಂಶೋಧನೆ ನಡೆಸಿದ್ದಾರೆ. ಆದರೆ ನಮ್ಮ ಮೈ ಬಿಸಿಯೇ ಆಗುತ್ತದಾ ಅಥವಾ ಪಕ್ಕದವರ ಮೈ ಬಿಸಿಯಿಂದ ಆಗುತ್ತದಾ ಎಂಬ ಜಿಜ್ಞಾಸೆ ಹಾಗೇ ಉಳಿದಿದೆ. ಹಿ[illegible]ಾಗಿ ಪ್ರೇಮಿ, ಹೆಂಡತಿ ಇಬ್ಬರೂ ಇಲ್ಲದೆ ಮೊಬೈಲ್‌ನ ತತ್ ಕ್ಷಣದಲ್ಲಿ ಛಾರ್ಜ್ ಮಾಡಿಕೊಳ್ಳಲು ಈ ಮೈ-ಶಾಖ ಉಪಯೋಗಕ್ಕೆ ಬರುವುದಿಲ್ಲ, ಅಂತಹವರಿಗೆ ಈಗ ಎಲ್ಲಂದರಲ್ಲಿ ಸಿಗುವ ಸಗಣಿಯೇ ವರದಾನವಾಗಿದೆ. ಸಗಣಿಯಿಂದ ಮೊಬೈಲ್‌ನ ಛಾರ್ಜ್ ಮಾ[illegible]ಬಹುದು ಎಂದು ಯಾರೋ ಕಂಡುಹಿಡಿದಿದ್ದಾರಂತೆ. ಸರಿ, ಅದನ್ನೇ [illegible]ಟರಿ ಬದಲು ಮೊಬೈಲ್‌ಗೆ ತುಂಬಿಕೊಂಡರಾಯಿತು. ಆದರೆ ಇದು ಯಾರದ್ದೋ ಸಂಶೋಧನೆ ಎಂದು ಒಪ್ಪಲು ನಾನು ತಯಾರಿಲ್ಲ, ಅದಕ್ಕೆ ಕಾರಣ ಇದೆ. ಈಕಥೆ ಕೇಳಿ: ಯುವತಿಯೊಬ್ಬಳು ಸ್ವಾಮೀಜಿಯೊಬ್ಬರಿಂದ ಆಶೀರ್ವಾದ ಪಡೆಯಲು ಯಾವುದೋ ಮಠಕ್ಕೆ ಹೋಗಿದ್ದಳಂತೆ. ಮಠದ ಉಂಡಾಡಿ ಗುಂಡರ ಜೊತೆ ಆನೆ ಸ್ವಚ್ಛಂದವಾಗಿ ವಿಹರಿಸುವುದನ್ನು ನೋಡಿ ಖುಷಿ ಪಟ್ಟಳಂತೆ! ಆನೆಗೆ ಹಣ್ಣು ತಿನ್ನಿಸಲು ಹೋದಾಗ ಆನೆ ಆಕಸ್ಮಾತ್ ಆಕೆಯ ಕೈಲಿದ್ದ ವ್ಯಾನಿಟಿ ಬ್ಯಾಗನ್ನು ಗುಳುಂ ಮಾಡಿಬಿಟ್ಟಿತಂತೆ. ಯುವತಿ ಕಂಗಾಲಾಗಿ ಹೋದಳು. ಮಠದ ಡಿ.ಪಿ.(ದಂಡಪಿಂಡ)ಗಳು ಹೇಳಿದರಂತೆ: 'ಏನೂ ಮಾಡಕ್ಕಾಗಲ್ಲ, ಗುರೂಜಿ ದಯೆ ಇದ್ರೆ ಆನೆ ನಾಳೆ ಲದ್ದಿ ಹಾಕುತ್ತೆ. ಅಲ್ಲಿ ತನಕ ನೀವು ಕಾಯಬೇಕು.' ವಿಧಿಯಿಲ್ಲದೆ ಆಕೆ ಮಾರನೇ ದಿನ ಆನೆ ಲದ್ದಿ ಹಾಕುವ ತನಕ ಕಾಯ್ದಳಂತೆ. ಗುರೂಜಿಯ ದಯೆಯಿಂದ ಅಂತೂ ಆನೆ ಲದ್ದಿ ಹಾಕಿತು. ಅವಳ ಪೂರ್ವ

ಜನ್ಮದ ಪುಣ್ಯ ಫಲವೋ ಎಂಬಂತೆ ವ್ಯಾನಿಟಿ ಬ್ಯಾಗ್ ಲದ್ದಿಯ ಜೊತೆ ಸ್ಯಾಂಡ್ವಿಚ್ ಆಗಿ ಹಾಗೆ ಈಚೆ ಬಂತು. ಆ ಯುವತಿ ಸರ‍್ರನೆ ವ್ಯಾನಿಟಿ ಬ್ಯಾಗ್ ತೆಗೆದು ಮೊಬೈಲ್‌ಗೆ ಏನಾಗಿದೆ ಎಂದು ನೋಡಿದಳಂತೆ. ಏನಾಶ್ಚರ್ಯ! ದಿನಕ್ಕೆ ಎರಡು ಬಾರಿ ಛಾರ್ಜ್ ಮಾಡಬೇಕಿದ್ದ ಮೊಬೈಲ್ ಬ್ಯಾಟರಿ ಡೌನ್ ಆಗಿರಲೇ ಇಲ್ಲ. ಆಮೇಲೆ ಆಕೆ ಆನೆ ಲದ್ದಿಯನ್ನು ಲಗೇಜ್ ಆಟೋದಲ್ಲಿ ಹಾಕಿಸಿಕೊಂಡು ಹೋದಳೋ, ಇಲ್ಲವೋ ಗೊತ್ತಿಲ್ಲ, ಆದರೆ ಆನೆ ಲದ್ದಿಯಿಂದ ಮೊಬೈಲ್ ಛಾರ್ಜ್ ಆಯಿತು ಎಂಬುದಂತೂ ಸತ್ಯ. ಹಾಗಿದ್ದ ಮೇಲೆ ಇಗ್ನೋಬೆಲ್ಲನ್ನು ಆನೆಗೋ, ಅಥವಾ ಆನೆ ಲದ್ದಿ ಹಾಕುವಂತೆ ಮಾಡಿದ ಸ್ವಾಮೀಜಿಗೋ ಕೊಡಬೇಕು ತಾನೇ?

ಆನೆಯ ಮೇಲ್ಕೈ ಕಂಡು ಹಿಡಿಯಲು ಹೊಸಸೂತ್ರ ರೂಪಿಸಿದವರಿಗೆ ಇಗ್ನೋಬೆಲ್ ಪ್ರಶಸ್ತಿ ಬಂದಿದೆಯಂತೆ. ಇದೇನು ಮಹಾ? ಆನೆಗಳ ಕ್ಷೇತ್ರ+ಫಲ ಎರಡನ್ನೂ ಅನುಭವಿಸಿ ಕಂಡುಹಿಡಿಯಬಲ್ಲ ಹೈಬ್ರಿಡ್ ಮೊಲಗಳನ್ನೇ ನಾವು ಸೃಷ್ಟಿಸಿದ್ದೇವೆ (ಡೀಟೈಲ್ಸ್ ಬೇಕೆಂದರೆ ಮುಂಗಾರು ಮಳೆ ಪಿಚ್ಚರ್ ನೋಡಿ) ಇದಕ್ಕೆ ಇಗ್ನೋ 'ಬೆಲ್ಲ' ಸಿಗಲ್ಲ ಎಂದರೆ ಹೇಗೆ? ಮುಂದುವರಿದು ಹೇಳಬೇಕೆಂದರೆ ರಾಜಕೀಯ ಬಿಳಿಯಾನೆಗಳ ಮೇಲ್-ಮೈಗೂ ಭಾರತದ ಜನಸಂಖ್ಯಾ ಸ್ಫೋಟಕ್ಕೂ ನೇರ ಅನುಪಾತ ಇದೆ ಎಂದು ಕಂಡುಹಿಡಿದಿದ್ದೇವೆ. (ನೆನಪು ಮಾಡಿಕೊಳ್ಳಿ: ಲಲ್ಲೂ ಪ್ರಸಾದ್ ಯಾದವ್‌ಗೆ 9 ಜನ ಮಕ್ಕಳು!). ಆದಕ್ಕೇ ನುರಿತ, ಅನುಭವಿ ರಾಜಕಾರಣಿಗಳ ಮೈಮೇಲೆ ಗೆರೆಯಿರುವುದಿಲ್ಲ, ಎಲ್ಲಾ ಅವರಿವರಿಗೆ ಉಜ್ಜಿ ಕೈ ಕೊಟ್ಟು ಮಾಯವಾಗಿರುತ್ತದೆ. ತಿಂದು ತಿಂದು ಕೊಬ್ಬಿಯೂ ಗೆರೆಗಳು ಅಳಿಸಿಹೋಗಿರುತ್ತವೆ. ಅವರಿವರಿಂದ ಮಸಾಜ್ ಮಾಡಿಸಿಕೊಂಡು ಮತ್ತಷ್ಟು ನಶಿಸಿ ಹೋಗಿರುತ್ತದೆ. ಇದನ್ನು ನೋಡಿಯೇ ನಮ್ಮ ಜ್ಯೋತಿಷಿಗಳು ಅವರ ಭವಿಷ್ಯ ಹೇಳುವುದು. ಕೈ ಕೊಟ್ಟೂ ಕೊಟ್ಟೂ ಎಷ್ಟು ಗೆರೆ ಅಳಿಸಿ ಹೋಗಿದೆ ಎಂಬುದರ ಆಧಾರದ ಮೇಲೆಯೇ ರಾಜಕಾರಣಿಗಳು ಸಿ.ಎಂ. ಆಗುತ್ತಾರಾ, ಪಿ.ಎಂ. ಆಗುತ್ತಾರಾ ಎಂದು ಭವಿಷ್ಯ ಹೇಳುವುದು ಈ ಸಂಶೋಧನೆಗೆ ನ್ಯಾಯವಾಗಿ ನೊಬೆಲ್ ಬಹುಮಾನವನ್ನೇ ಕೊಡಬೇಕು, ಕನಿಷ್ಠ ಇಗ್ನೋಬೆಲ್ ಕೊಡದಿದ್ದರೆ ಹೇಗೆ?

ಇನ್ನೂ ಒಂದು ಮಹತ್ತರ ಸಂಶೋಧನೆಯನ್ನು ನಮ್ಮ ಸ್ನೇಹಿತರು ಮಾಡಿದ್ದಾರೆ. ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಿಶೇಷವಾಗಿ ರೆಡ್ ಲೈಟ್ಗಳಲ್ಲಿ ಗಂಡಸರ ಸಂಕೇತವೇ ಏಕಿರಬೇಕು ಎಂಬುದು ಅವರ ಜಿಜ್ಞಾಸೆ. ಗಂಡಸರೆಂದರೆ 'ಡೇಂಜರ್' ಎಂದು ಲಿಂಗಭೇದ ಮಾಡಿದಂತಾಗಿದೆಯಲ್ಲ ಎಂಬುದು ಅವರ ಅಳಲು. ಹುಡುಗಿಯರ ಬಾಡಿಲೈನನ್ನು ಟ್ರಾಫಿಕ್ ಸಿಗ್ನಲ್ ಒಳಗೆ ಬರುವಂತೆ ಮಾಡಬೇಕು ಎನ್ನುವುದು ಅವರ ಆಗ್ರಹ. ಹೀಗೆ ಮಾಡುವುದರಿಂದ ಅಪಘಾತಗಳು ಕಮ್ಮಿಯಾಗಲಿವೆ ಎಂದು ಅವರು ಕರಾರುವಾಕ್ಕಾಗಿ ಹೇಳುತ್ತಾರೆ. ಅಪಘಾತಕ್ಕೆ ಅವಸರವೇ ಕಾರಣ ತಾನೇ? ರೆಡ್ ಸಿಗ್ನಲ್ ಲೈಟಿನಲ್ಲಿ ಹುಡುಗಿಯರ ಮೋಹಕ ಭಂಗಿಯೋ, ಐಟಂ ಸಾಂಗ್‌ನ ವೀಡಿಯೋ ಕ್ಲಿಪ್ಪಿಂಗೋ, ಏನೋ ಒಂದು ಬರುವಂತಾದರೆ ವಾಹನ ಚಾಲಕರು ಕಣ್ಣು ಬಾಯಿ ಬಿಟ್ಟುಕೊಂಡು ಗ್ರೀನ್ ಸಿಗ್ನಲ್ ಬಿದ್ದರೂ ಹೋಗದೆ ಅಲ್ಲೇ ಮತ್ತೊಂದು ಸಿಗ್ನಲ್ ಬೀಳುವವರೆಗೆ ನಿಂತೇ ಇರುತ್ತಾರೆ. ಇನ್ನು ಅಪಘಾತವಾಗುವುದಾದರೂ ಹೇಗೆ ಹೇಳಿ? ಈ ಕಿಲಾಡಿ ಸಂಶೋಧನೆಗೆ ಇಗ್ನೋಬೆಲ್ ಗೌರವ ಬೇಡವೇ?

ಇನ್ನು ನಿಮ್ಹಾನ್ಸ್‌ನ ತಜ್ಞರೊಬ್ಬರು ಮೂಗಿನ ಕಿಟ್ಟಕ್ಕೂ, ಮಾನಸಿಕ ಕ್ಲೇಶಕ್ಕೂ ಸಂಬಂಧವಿದೆ ಎಂದು ಪತ್ತೆ ಮಾಡಿದ್ದಾರೆ. ಇದು ಹೇಗೆ ಎನ್ನುವುದನ್ನು ನಮ್ಮ 'ಅಮೆಚೂರ್ (ಪ್ರಿ ಮೆಚ್ಯೂರ್?) ಅಡೋಲಸೆಂಟ್ಸ್' ಹೀಗೆ ವಿವರಿಸುತ್ತಾರೆ. ಮೂಗಿನಲ್ಲಿ ಕಿಟ್ಟ ಯಾವ ರೀತಿ ಉಂಟಾಗಿದೆ ಎಂಬುದರ ಆಧಾರದ ಮೇಲೆ ಮಾನಸಿಕ ಕ್ಲೇಶದ ತೀವ್ರತೆ ನಿರ್ಧಾರವಾಗುತ್ತದೆ. ಉದಾಹರಣೆಗೆ ಹೆಣ್ಣು ಮಕ್ಕಳ ಹಿಂದೆ ಹಿಂದೆ ಸುತ್ತಿ ಆ ಪರಿಮಳ ಆಘ್ರಾಣಿಸಿ ಕಿಟ್ಟ ಕಟ್ಟಿದ್ದರೆ ಮಾನಸಿಕ ಕ್ಲೇಶ ಕಡಿಮೆ. ತೊಟ್ಟಿ ತಿಪ್ಪೆಯ ಸುತ್ತಾ ಓಡಾಡಿ ಕಿಟ್ಟ ಕಟ್ಟಿದ್ದರೆ ಕ್ಲೇಶ ಜಾಸ್ತಿಯೇ! ಸಿಗರೇಟ್ ಹೊಗೆಯನ್ನು ಮೂಗಿನಲ್ಲಿ ಬಿಟ್ಟು ಕಟ್ಟಿದ್ದರೆ ಸಾಧಾರಣ ಕ್ಲೇಶ. ನೆಗಡಿಯಿಂದ ಕಟ್ಟಿದ್ದರೆ 'ಘನ ಘೋರ! ಏಕೆಂದರೆ ಮೇಲೆ ಹೇಳಿದ ಮೂರೂ ಚಟ ಬಂದ್ ಆಗುತ್ತದಲ್ಲ! ಈ ಮೂಗಿನ ಕಿಟ್ಟಕ್ಕೆ ಸ್ಪಷ್ಟ ಉದಾಹರಣೆ ರಾಮಾಯಣದಲ್ಲೇ ಇದೆ. ಶೂರ್ಪನಖಿಗೆ ಮಾನಸಿಕ ಕ್ಲೇಶ ಉಂಟಾಗಿದೆ ಎಂದು ತಿಳಿದೇ ಲಕ್ಷ್ಮಣ ಅವಳ ಮೂಗನ್ನು ಕಚ್ಚಿದ್ದು. ಆಮೇಲೆ ಲಕ್ಷ್ಮಣ ಯಾವ ವೈಶಂಪಾಯನ ಕೊಳದಲ್ಲಿ ಬಾಯಿ ತೊಳೆದುಕೊಂಡನೋ ಗೊತ್ತಿಲ್ಲ. ಆದರೂ ಈ ವಿಸ್ತೃತ ವಿವರಣೆಗೆ ಮತ್ತೊಂದು ಇಗ್ನೊಬೆಲ್ ಬೇಡವೇ? ಹೀಗೆ ಮೂಗಲ್ಲಿ ಕಿಟ್ಟ ಕಟ್ಟಿತೆಂದು ಕಿವಿಯಲ್ಲಿ ಸಿಗರೇಟ್ ಸೇದಿ ಮಾನಸಿಕ ಕ್ಲೇಶ ಪರಿಹಾರ ಮಾಡಿಕೊಳ್ಳಲು ಉಪಾಯ ಹುಡುಕಿರುವ ಉತ್ತರ ಪ್ರದೇಶದ ಧೂಮಪ್ರಿಯನಿಗೆ ಇಗ್ನೊಬೆಲ್ ಕೊಡದಿದ್ದರೆ ಹೇಗೆ?

ಈಗ ಉಪಸಂಹಾರಕ್ಕೆ ಬರೋಣ. ನಮ್ಮ ರಾಜಕೀಯದವರು ಕುರ್ಚಿಗಾಗಿ ಏನೆಲ್ಲಾ ಸರ್ಕಸ್ ಮಾಡುತ್ತಾರೆ ಎಂದು ಇತ್ತೀಚೆಗಷ್ಟೇ ನೋಡಿದ್ದೀರಿ! ಕುರ್ಚಿಯ ವ್ಯಾಮೋಹದ ಮುಂದೆ 'ಕೊಟ್ಟ ಮಾತು ಇಟ್ಟ ಆಣೆ ಎಲ್ಲಾ ಗೋವಿಂದ' ಎಂದು ಪುಣ್ಯಕೋಟಿಯ ಭಜನೆ ಮಾಡುತ್ತಿದ್ದ ಪಂಚಕೋಟಿ ಕನ್ನಡಿಗರಿಗೆ ಮನವರಿಕೆಯಾಗಿದೆ. ಮುಂಬೈನ ಡಾ॥ ಅಬ್ದುಲ್ ರಜಾಕ್ ಬೇಗ್ ಎಂಬ ಹೋಮಿಯೋಪತಿ ವೈದ್ಯರು ಗುಳಿಗೆ, ಟಾನಿಕ್ ಕೊಡುವುದನ್ನು ಬಿಟ್ಟು ತಿರುಗು ಕುರ್ಚಿಯಲ್ಲಿ ಜನರನ್ನು ಕೂರಿಸಿ ಗರ್ರನೆ ತಿರುಗಿಸುತ್ತಾರಂತೆ. ಹೀಗೆ ಜನ ಜೋಷ್‌ನಲ್ಲಿದ್ದಾಗ ಜೋಕ್ಸ್ ಹೇಳಿ, ಕವನ ವಾಚನ ಮಾಡಿ ಅವರನ್ನು ನಗಿಸಿ ರೋಗ ವಾಸಿ ಮಾಡುತ್ತಾರಂತೆ. ನಗುವಿನಿಂದ ಎಲ್ಲಾ ರೋಗ ವಾಸಿಯಾಗುತ್ತದೆ ಎಂಬ ನಂಬಿಕೆ ಅವರದ್ದು. ಕುಮಾರಸ್ವಾಮಿ, ಯಡಿಯೂರಪ್ಪ ಇಬ್ಬರನ್ನೂ ಒಮ್ಮೆ ಈ ಕುರ್ಚಿಯಲ್ಲಿ ಕೂರಿಸಿ ಗರ್ರನೆ ಸುತ್ತಿಸಬೇಕು. ಕುಮಾರಸ್ವಾಮಿಗೆ ಕುರ್ಚಿಯ ಅಮಲು ಗೊತ್ತಿದ್ದರೂ 'ಹ್ಯಾಂಗ್ ಓವರ್' ಇನ್ನೂ ಬಿಟ್ಟಿರಲ್ಲ. ಇನ್ನು ಯಡಿಯೂರಪ್ಪನವರಿಗೆ ಈ ಅಮಲೇ ಹೊಸ ಅನುಭವ ಕೊಡಬಹುದು. ಇಬ್ಬರಿಗೂ ಕುರ್ಚಿಯ ರೋಗವಂತೂ ವಾಸಿಯಾಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ 'ತಲೆ ತಿರುಗುವುದು' ಜಾಸ್ತಿಯಾದರೂ ಆಗಬಹುದು. ಆದರೆ ರಜಾಕ್ ಕುರ್ಚಿಯಲ್ಲಿ ಕೂರುವ ಇತರೆ ರೋಗಿಗಳಿಗೆ ಯಡಿಯೂರಪ್ಪನವರು 'ಬಫೂನ್' ಆದ ಜೋಕ್. ಹೇಳಿ ನಗಿಸಿದರೆ ಜನರ ಕಾಯಿಲೆ ಓಡಿಹೋದೀತು! ಈ ನಗೆಯ ಕೈಂಕರ್ಯ ಮಾಡುತ್ತಿರುವ ಅಬ್ದುಲ್ ರಜಾಕ್‌ಗೆ ಒಂದು ಇಗ್ನೊಬೆಲ್, ಬೇಡ ಅಟ್ ಲೀಸ್ಟ್ ಒಂದು 'ನಗ್-ನೊಬೆಲ್' ಕೊಡಲೇಬೇಕಲ್ಲವೇ?


ಆಸ್ಪತ್ರೆಯಲ್ಲಿ!

- ಓಂ ಪ್ರಕಾಶ್

ಅವನಿಗೆ ಎಂಟು ವರ್ಷ ವಯಸ್ಸು. ಪಾಪ, ಶ್ವಾಸಕೋಶದಲ್ಲಿ ತೊಂದರೆಯಿಂದ ಬಳಲುತ್ತಿದ್ದ. ಸರ್ಜನ್ ಎಡಭಾಗದ ಶ್ವಾಸಕೋಶದ ಕೆಳಗಡೆಯ (ಕೀವು ಇದ್ದ) ಭಾಗವನ್ನು ತೆಗೆಯಲು ನಿರ್ಧರಿಸಿದರು. ಆಪರೇಶನ್ ಸುಸೂತ್ರವಾಗಿ ಆಯಿತು. ಎರಡನೆ ದಿನ, ಆ ಹುಡುಗ, ಸರ್ಜನ್ ಬಂದಾಗ, ತನ್ನ ತಾಯಿಗೆ ಹೀಗೆ ಹೇಳಿದ. ''ಅಮ್ಮಾ, ಕೇಳಮ್ಮ ಅವರನ್ನ! ಕೇಳಮ್ಮ!, ಅಂತ. ಅವನ ತಾಯಿ 'ಸುಮ್ಮನಿರೋ!' ಅಂದರು. ಸರ್ಜನ್, 'ಪರವಾಗಿಲ್ಲ ಹೇಳಿ ಯಾವ ಸಂಶಯ ಇದ್ದರೂ ಕೇಳಿ!' ಅಂದರು. ಆ ಹುಡುಗ ಕೇಳಿದ 'ಡಾಕ್ಟರೆ, ನನ್ನ ಎದೆಯಲ್ಲಿ ಎಷ್ಟು ಅಕ್ಷರ ಕಾಣಿಸ್ತು ನಿಮಗೆ?'' ಸರ್ಜನ್ ಆಚ್ಚರಿಗೊಂಡರು. ಆ ಹುಡುಗನ ತಾಯಿ, ''ಡಾಕ್ಟ್ರೆ, ಇವನ ಕನ್ನಡ ಮೇಷ್ಟ್ರು ಯಾವಾಗಲೂ ಇವನ್ನ ಬೈತಾರಂತೆ! ಎದೆ ಸೀಳಿದರೆ ಎರಡು ಅಕ್ಷರಾನೂ ಇರೊಲ್ಲ ಅಂತ! ಅದಕ್ಕೇ ಅವನು ನಿಮ್ಮನ್ನ ಪ್ರಶ್ನಿಸಿದ್ದು'' ಸರ್ಜನ್ ನಗುತ್ತ, ''ನೂರಾರು ಅಕ್ಷರ ಇತ್ತು ಅಂತ ಹೇಳು!'' ಎಂದು ನಡೆದರು!

★★★

ಸುಮಾರು 30 ವಯಸ್ಸಿನ ಮಹಿಳೆ, ತೀವ್ರವಾದ ಬೇಧಿಯಿಂದ ಅಡ್ಮಿಟ್ ಆಗಿದ್ದಳು. ಚಿಕಿತ್ಸೆ ಆಗಿ, ಮನೆಗೆ ಹೋದಳು. ಪದೇ ಪದೇ, ಔಟ್ ಪೇಷಂಟ್ ವಿಭಾಗಕ್ಕೆ ಬರುತ್ತಿದ್ದಳು. 'ಏಕಮ್ಮಾ, ಆರೋಗ್ಯವಾಗಿದೀಯಲ್ಲ?'' ಅಂದೆ ''ಎಲ್ಲಾ ಹೋಯಿತಾ ಡಾಕ್ಟ್ರೆ?'' ಅಂತ ಆತಂಕದಿಂದ ಕೇಳಿದಳು! ನಾನು ಚಕಿತನಾದೆ! ಸ್ವಲ್ಪ ಹೊತ್ತಾದ ಮೇಲೆ ಜ್ಞಾನೋದಯವಾಯಿತು! ಹೌಸ್ ಸರ್ಜನ್, ಅವಳು ಅಡ್ಮಿಟ್ ಆಗಿದ್ದಾಗ, Stool Examination Shows entameba Histolytica' ಅಂತ ಹೇಳಿದ್ದ, ಪಾಪ, ಈ ಮಹಿಳೆ ಎಂಟೂ ಹೋಗಿದೆಯೇ ಅಂತ ಕೇಳಿದ್ದರಲ್ಲಿ ಆಶ್ಚರ್ಯವೇನು?!''



"ಕಿಸನ್ ಭಯ್ಯಾ ಮೊಬೈಲ್ ಫೋನಿನ ಗುಲಾಮನಾಗಿದ್ದು"

- ನಂದಿನಿ ಕಾಪಡಿ

"ಆಮ್‌ಚೀ ಮುಂಬೈ" ಎಂದು ಕರೆಸಿಕೊಳ್ಳುವ ಈ ಮಹಾನಗರ ಮುಂಬೈನಲ್ಲಿ ಬರೀ ಮಹಾರಾಷ್ಟ್ರದ ಪರಿವಾರವಲ್ಲದೇ ಭಾರತದ ಬೇರೆ ಬೇರೆ ಪ್ರಾಂತ್ಯಗಳಿಂದ ಬಂದವರೆಲ್ಲರೂ "ನಮ್ಮವರಾಗಿ" ಬಿಟ್ಟಿದ್ದಾರೆ. ನಮ್ಮ ಮೂಲೆ ಬಿಲ್ಡಿಂಗಿನ ಕೆಳಗೆ ಫುಟ್‌ಪಾತಿನ ಮೇಲೆ ತನ್ನ "ಅಂಗಡಿ" ಹಚ್ಚಿಕೊಂಡಿರುವ ಕಿಸನ್ ಭಯ್ಯಾ, ಅವನೇ ಹೇಳುವಂತೆ "ಬ್ರಿಜವಾಸಿ". ಶ್ರೀ ಕೃಷ್ಣ ರಾಸಕ್ರೀಡೆ ಆಡಿದ ನಾಡಿನ ಮಗ ತಾನೆಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಕಿಸನ್ ಜೊತೆ ಅವನ ನಾಲ್ಕು ತಮ್ಮಂದಿರು ಗೋಪಾಲ್, ಕನ್ನಯ್ಯಾ, ಮುರಲಿ, ಮತ್ತು ಗೋವಿಂದ್ ಅಲ್ಲದೇ ಅವನ ಚಿಕ್ಕಪ್ಪನ ಮಗ ಹರಿ, ಸೋದರತ್ತೆಯ ಮಗ ರಾಧೇಶ್ಯಾಮ್, ಸೋದರಳಿಯ ನಂದ ಕಿಶೋರ್ ಮತ್ತು ಪಕ್ಕದ ಮನೆಯವನಾದ ಗಿರಿಧರ್ ವಾಸಿಸುತ್ತಾರೆ. ಪ್ರತಿ ಶನಿವಾರ ರಾತ್ರಿ ಫುಟ್‌ಪಾತಿನ ಮೇಲೆ ಅವರ ಭಜನೆ ಮಂಡಳಿ ಹಬ್ಬಿಕೊಳ್ಳುತ್ತದೆ. ದಾದರ್, ವಿಲೇಪಾರ್ಲೆಗಳಿಂದ "ಬ್ರಿಜವಾಸಿ"ಗಳಾದ ಇನ್ನೂ ಹಲವರು ಬಂದು ಸೇರುತ್ತಾರೆ. ಬಿಲ್ಡಿಂಗಿನ ಕಾಂಪೌಂಡಿನ ಗೋಡೆಯ ಮೇಲೆ ರಾಧಕೃಷ್ಣರ ಚಿತ್ರ ತೂಗುಹಾಕಿ ಅದಕ್ಕೆ ಹೂವಿನ ಹಾರ ಹಾಕಿ, ಗಂಧದ ಕಡ್ಡಿ, ಧೂಪ ಹಚ್ಚಿ ರಾತ್ರಿಯುದ್ದಕ್ಕೂ ತಾಳ, ಮೇಳ, ಕಂಜರಾ, ಪಕ್ಕವಾದ್ಯಗಳನ್ನಿಟ್ಟುಕೊಂಡು ಜೋರಾಗಿ "ನಂದಲಾಲಾ, ನಂದಲಾಲಾ" ಎಂದು ಭಜನೆ ಹಾಡುತ್ತಾರೆ. ರಾತ್ರಿ ಎಂಟಕ್ಕೆ ಪ್ರಾರಂಭವಾದ ಭಜನೆ ಹನ್ನೊಂದು ಗಂಟೆಯವರೆಗೆ ಮೊದಲು ನಡೆಯುತ್ತಿತ್ತು. ಈಗ ರಾತ್ರಿ ಹತ್ತುಗಂಟೆಯ ಹೊತ್ತಿಗೆ ಹೈಕೋರ್ಟಿನ ಆಜ್ಞೆಯಂತೆ ಪೋಲೀಸರು ಬರುವ ಹೊತ್ತಿಗೆ ಭಜನೆ ಮುಗಿಸಿಬಿಡುತ್ತಾರೆ. ಆರತಿ ಮಾಡಿ ಪ್ರಸಾದ ಹಂಚಿ, ಸುತ್ತಮುತ್ತಲಿನ ಗುಡಿಸಲುಗಳ ಮಕ್ಕಳಿಗೆ ಕಡಲೆಪುರಿ, ಬತ್ತಾಸು ಹಂಚಿ, ನಂತರ ತಮ್ಮ ತಮ್ಮ ಸ್ಥಳಗಳಿಗೆ ತೆರಳುತ್ತಾರೆ. ಶಿವರಾತ್ರಿಯಂದು ಭಂಗು ಕುಡಿಯುತ್ತಾ ಸ್ವಲ್ಪ ಜೋರಾಗಿಯೇ ಗಲಾಟೆಯೂ ಮಾಡುತ್ತಾರೆ.

ಕಿಸನ್ ಭಯ್ಯಾ ನಮ್ಮ ಬಿಲ್ಡಿಂಗಿಗೆ ತರಕಾರಿ, ಹಣ್ಣು ಸಪ್ಲೈಮಾಡುತ್ತಾನೆ. ನಮ್ಮ ಮನೆಗೂ ಅವನದೇ ತರಕಾರಿ. ಸರಿಯಾಗಿ ಹಿಂದಿ ಭಾಷೆ ಮಾತನಾಡಲು ಬರದ ನಮ್ಮ ಅಜ್ಜಿಗೂ ಅವನು ಮೋಡಿ ಮಾಡಿಬಿಡುತ್ತಾನೆ. ಮುಂಬೈನ ವಿಶೇಷ "ಕಾಲು ಕೆಜಿ ಬೆಲೆ" ಯಂತೆ ಬಟಾಣಿ "ದಸ್ ರೂಪಯಾ ಪಾವ್" ಎಂದರೆ "ಕಾಲು ಕೆಜಿಗೆ ಹತ್ತು ರೂಪಾಯ ದರವನ್ನು ಬೇಗನೇ ನಾಲ್ಕರಿಂದ ಗುಣಾಕಾರ ಮಾಡಿ ಕೆಜಿಗೆ ನಲ್ವತ್ತು ರೂಪಾಯಿ .... ಅಯ್ಯೋ.... ಅದೆಷ್ಟು ದುಬಾರಿ ಎಂದು ಅರಿವಾಗುವ ವೇಳೆಗೆ ಕಿಸನ್ ಭಯ್ಯಾ ಅಜ್ಜಿಗೆ ಅರ್ಧ ಕೆಜಿ ಬಟಾಣಿ ಮಾರಿ, ತನ್ನ ಚಿಕ್ಕ ಪುಸ್ತಕದಲ್ಲಿ ಇಪ್ಪತ್ತು ರೂಪಾಯಿ ಮೊತ್ತ ಎಂದು ಗುರುತೂ ಹಾಕಿಕೊಂಡಿರುತ್ತಾನೆ.

ಅಜ್ಜಿ ಮುಂಬೈನ ಭಾಷೆಯಂತೆ ಈರುಳ್ಳಿಗೆ "ಕಾಂದಾ" ಎಂದು ಕರೆದರೆ ಕಿಸನ್ ಭಯ್ಯಾ "ಮಾಜೀ ಪ್ಯಾಜ್" ಎಂದು ಅಜ್ಜಿಯ ಭಾಷೆಯನ್ನು ಸರಿ ಮಾಡುತ್ತಾನೆ. ಆದರೆ ನಮ್ಮ

ಅಜ್ಜಿಯೂ ಘಾಟಿಯೇ, ಅವರೇನೂ ಈ ಕಿಸನ್‌ನ ಮೋಡಿಗೆ ಒಳಗಾಗದೇ ತಮ್ಮದೇ ರೀತಿ ದಬಾಯಿಸುತ್ತಾ ನಲ್ವತ್ತು ರೂಪಾಯಿ ದರವನ್ನು ಮೂವತ್ತು ರೂಪಾಯಿತನಕವಾದರೂ ಕಡಿಮೆ ಮಾಡಿ, ಅವನು ತೂಗುವುದಲ್ಲದೇ ಇನ್ನೂ ಕೊಸರಿಗೆ ಎಂಟು ಬಟಾಣಿಕಾಯಿಗಳನ್ನಾದರೂ ಹಾಕಿಸಿಕೊಳ್ಳುತ್ತಾರೆ.

ಕಿಸನ್ ಭಯ್ಯಾಗೆ ನಮ್ಮ ಬಿಲ್ಡಿಂಗೇ ಅಲ್ಲದೆ ಅಕ್ಕಪಕ್ಕದ ಇನ್ನೆಂಟು ಬಿಲ್ಡಿಂಗುಗಳೂ ಅವನ ವಶದಲ್ಲಿವೆ. ಕಾರಣ ತುಂಬಾ ಸುಲಭ. ಪ್ರತಿ ಬಿಲ್ಡಿಂಗಿನ ವಾಚ್‌ಮನ್ನರು ನೇಪಾಳಿಗಳೋ ಅಥವಾ ಇವರಂತೆಯೇ ಬ್ರಿಜವಾಸಿಗಳೋ ಆಗಿರುವುದರಿಂದ ಎಲ್ಲರನ್ನೂ ಕಿಸನ್ ಭಯ್ಯಾ ಬುಟ್ಟಿಗೆ ಹಾಕಿಕೊಂಡು ಬಿಡುತ್ತಾನೆ. ಬಿಲ್ಡಿಂಗಿನೊಳಗೆ ಇವನನ್ನು ಬಿಟ್ಟಿರುವುದಕ್ಕಾಗಿ ಅವರಿಗೆ ಒಂದಷ್ಟು ನಗದೇ ಅಲ್ಲದೆ, ಮಸಾಲಾ ಚಾಯ್, ಸಮೋಸಾ, ಕಚೋರಿಗಳನ್ನೂ ಆಗಾಗ್ಗೆ ಕೊಡಿಸುತ್ತಾನೆ. ಒಟ್ಟಿನಲ್ಲಿ ಎಲ್ಲರಿಗೂ ಲಾಭದಾಯಕವಾದ ಈ ವ್ಯವಹಾರ ಈಗ ಹತ್ತಾರು ವರ್ಷಗಳಿಂದ ನಡೆಯುತ್ತಾ ಬಂದಿದೆ. ಸುಗ್ಗಿಯ ಸಮಯದಲ್ಲಿ ಕಿಸನ್ ಭಯ್ಯಾ ಊರಿಗೆ ಹೋದರೆ, ಅವನ ತಮ್ಮಂದಿರು ವ್ಯಾಪಾರಕ್ಕೆ ಬರುತ್ತಾರೆ.

ಹೀಗೆ ನಂದಗೋಕುಲದಂತೆ ನಡೆಯುತ್ತಿದ್ದ ಕಿಸನ್ ಪರಿವಾರಕ್ಕೆ ಒಂದು ದಿನ ಗಂಡಾಂತರ ಬಂದೊದಗಿತು. ಮುಂದಿನ ರಸ್ತೆಯಲ್ಲಿದ್ದ "ಸಿಟಾಡೆಲ್" ಬಿಲ್ಡಿಂಗಿನಲ್ಲಿರುವ ನಾಲ್ವರು ತರುಣ ತರುಣಿಯರು ಎಂ.ಬಿ.ಎ. ಮಾರ್ಕೆಟಿಂಗ್ ಡಿಗ್ರಿ ತೆಗೆದುಕೊಂಡು, ನಿರುದ್ಯೋಗಿಗಳಾಗಿ ವರ್ಷ ಕಳೆದ ನಂತರ ಒಟ್ಟಿಗೆ ಸೇರಿ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡು "ಗಾರ್ಡನ್ ಫ್ರೆಷ್" ಎಂದು ಹೆಸರಿಟ್ಟುಕೊಂಡು ತಮ್ಮದೇ ಕಂಪೆನಿ ಆರಂಭಿಸಿದರು. ದೊಡ್ಡದೊಂದು ವ್ಯಾನನ್ನು ಖರೀದಿಸಿ, ರೈತರಿಂದ ತಾಜಾ ತರಕಾರಿ ಹಣ್ಣು ತೆಗೆದುಕೊಂಡು ಬಂದು ರಸ್ತೆಯ ಮೂಲೆಯಲ್ಲಿ ವ್ಯಾನನ್ನು ನಿಲ್ಲಿಸಿ ಜನಗಳಿಗೆ ಮಾರತೊಡಗಿದರು. ಮೊದಲೇ ಚುರುಕು ಬುದ್ಧಿಯವರು. ಅವರಿಗೇನು ವಿಚಾರಗಳ ಬರವೆ? ಪೋಸ್ಟರುಗಳು ಹ್ಯಾಂಡ್ ಬಿಲ್‌ಗಳನ್ನ ಮಾಡಿ ತಮ್ಮ ಜಾಹೀರಾತನ್ನು ಮನೆಮನೆಯ ಮೂಲೆಯ ತನಕ ಮುಟ್ಟಿಸಿ ಗೃಹಿಣಿಯರನ್ನು ಆಕರ್ಷಿಸುತ್ತಾ ಹೋದರು. ಕಿಸನ್ ಭಯ್ಯಾನ ಬೆಂಡೆಕಾಯಿ ಇಪ್ಪತ್ತೆಂಟು ರೂಪಾಯಿ ಕೆಜಿ ಆದರೆ 'ಗಾರ್ಡನ್ ಫ್ರೆಷ್'ನ ಬೆಂಡೆಕಾಯಿಗೆ ಇಪ್ಪತ್ತೇ ರೂಪಾಯಿ ಅಲ್ಲದೇ ನೂರು ರೂಪಾಯಿಗಳ ತನಕ ಖರೀದಿಸಿದರೆ, ಒಂದು ಚಿಕ್ಕ ಪರ್ಲ್ ಪೆಟ್ ಜಾರ್ ಪುಕ್ಕಟೆ ಬೇರೆ!

ಕಿಸನ್ ಭಯ್ಯಾ ಊರಿಗೆ ಹೋಗಿ ಬಂದ. ತನ್ನ ಕೆಂಪು ನೂಲಿನ ಅಂಗವಸ್ತ್ರವನ್ನು ತಲೆಯಿಂದ ಬಿಚ್ಚಿ ಹೆಗಲಿಗೆ ಹಾಕಿಕೊಂಡು, ತಲೆ ಮೇಲೆ ಕೈ ಹೊತ್ತು ಕುಳಿತ. ನೋಡ ನೋಡುತ್ತಾ ಗಿರಾಕಿಗಳು ಕೈ ಬಿಟ್ಟು ಹೋದರು. ಗಾರ್ಡನ್ ಫ್ರೆಷನ ತರುಣಿಯರು ಜೀನ್ಸ್ ಟೀ ಶರ್ಟ್ ಧಾರಿಗಳು ಇವನತ್ತ ಕಣ್ಣು ಹೊಡೆದು ನಗಾಡತೊಡಿಗದರು. ಕಿಸನ್ ಭಯ್ಯಾ ಕೃಶನಾಗುತ್ತಾ ಹೋದ.... ಈಗ ಅವನ ಭಜನಾ ಮಂಡಳಿಯೂ ಕಮ್ಮಿಯಾಗತೊಡಿಗತು. ಬಿಲ್ಡಿಂಗುಗಳ ವಾಚ್‌ಮನ್ನರು ಈಗ ಅವನಿಗೆ ಕೊಂಚವೂ ಸಲಿಗೆ ತೋರಿಸುತ್ತಿರಲಿಲ್ಲ, ನಮ್ಮ ಅಜ್ಜಿಯೂ ಕಿಸನ್‌ನ ವಿರುದ್ಧವಾದರು. ಪಾಪ ಸಿಟಾಡೆಲ್‌ನ ಮಕ್ಕಳು ಎಷ್ಟು ಒಳ್ಳೆಯವರು ಎಂದು ಹೇಳತೊಡಗಿದರು.

ಕಿಸನ್ ಭಯ್ಯಾ "ನಂದಲಾಲಾ, ನಂದಲಾಲಾ" ಎನ್ನುತ್ತಾ ಒಂದೇ ಕಡೆ

ಮಲಗಿಕೊಂಡಿರುತ್ತಿದ್ದ. ಅವನ ತಮ್ಮಂದಿರು ಈಗ ಮೂಲೆಯಲ್ಲಿ ಕಡಲೆಪುರಿ ಮಾರುತ್ತಾ ನಿಲ್ಲುತ್ತಿದ್ದರು. ಒಂದಿಬ್ಬರಂತೂ ಊರಿಗೇ ಹೋಗಿಬಿಟ್ಟರು.

ಒಂದಾರು ತಿಂಗಳುಗಳ ನಂತರ ಕಿಸನ್ ಭಯ್ಯಾ ತನ್ನ "ಅಂಗಡಿ" ಎತ್ತಿ ಹೋದ. ಇನ್ನೊಂದೆರಡು ತಿಂಗಳುಗಳು ಹೋದವು. ಇಷ್ಟರಲ್ಲಿ "ಗಾರ್ಡನ್‌ಫ್ರೆಷ್" ಕಂಪನಿ ಮುಂದೆ ಬರುತ್ತಾ ಹೋಯಿತು. ಈಗ ಅವರ ಬಟಾಣಿಯೂ ನಲ್ವತ್ತು ರೂಪಾಯಿ ಕೆಜಿಯಾದರೆ ಬೆಂಡೆಕಾಯಿ ಇಪ್ಪತ್ತೆಂಟರಿಂದ ಮೂವತ್ತು ರೂಪಾಯಿಗೆ ಹೋಯಿತು. ಪರ್ಲ್‌ಪೆಟ್ ಜಾರು ಇಲ್ಲವೇ ಇಲ್ಲ. "ಪ್ಲಾಸ್ಟಿಕ್ ಕೊಡದು..... ನಿಮ್ಮದೇ ಬಟ್ಟೆಯ ಚೀಲ ತನ್ನಿ... ಪರಿಸರ ಕಾಪಾಡಿ" ಎಂದು ಪೋಸ್ಟರ್ ಹಾಕಿದರು. ಸರಿ ಈ ಕಡೆ ಕಿಸನ್ ಕೂಡಾ ಇಲ್ಲ. ನಿರುಪಾಯರಾಗಿ ಜನರೆಲ್ಲಾ ಬಯ್ದುಕೊಳ್ಳುತ್ತಾ "ಗಾರ್ಡನ್ ಫ್ರೆಷ್"ಗೇ ಕೈ ಮುಗಿದರು.

ಹೀಗಿರಲು- ಒಂದು ದಿನ ನಮ್ಮ ಮನೆ ಟೆಲಿಫೋನ್ ಬಾರಿಸಿತು. ಆಕಡೆಯಿಂದ "ಪ್ರಣಾಮ್ ದೀದೀ ಕಿಸನ್ ಬೋಲತೆ ಹೈ" ಎಂಬ ದನಿ ಕೇಳಿಸಿತು. "ಓಹೋ, ಕಿಸನ್‌ಭಯ್ಯಾ ಹೇಗಿದ್ದೀಯಾ? ಬೇರೆ ಕಡೆ ಹೋದೆಯಾ ಹೇಗೆ" ಎಂದೆ. "ನಾಳೆ ಬೆಳಿಗ್ಗೆ ನಿಮ್ಮನ್ನು ನೋಡಲು ಬರುತ್ತೇನೆ. ಅಜ್ಜಿಗೆ ರಾಂ ರಾಂ ಹೇಳಿ" ಎಂದ. ನನಗೆ ಕಿಸನ್ ಭಯ್ಯಾನ ಧ್ವನಿ ಕೇಳಿ ಸಂತಸವಾಯಿತು. ಆದರೆ ಅಜ್ಜಿಗೆ ಇನ್ನೂ ಅವನ ಮೇಲೆ ಸ್ವಲ್ಪ ಕೋಪವೇ. "ಬರಲಿ ಬಿಡು, ಚೆನ್ನಾಗಿ ದಬಾಯಿಸಿ ಕಳಿಸುತ್ತೇನೆ" ಎಂದು ಕೂಗಾಡಿದರು.

ಮಾರನೆಯ ದಿನ ಬೆಳಿಗ್ಗೆಯೇ ಕಿಸನ್ ಭಯ್ಯಾ ನಮ್ಮ ಮನೆಗೆ ಬಂದ, ಕಚ್ಚೆ ಪಂಚೆ-ಕುರ್ತಾ ಹೋಗಿ ಈಗ ಪ್ಯಾಂಟು ಶರ್ಟು ಬಂದಿತ್ತು. ತಲೆಯ ಜುಟ್ಟೂ ಹೋಗಿ ಕ್ರಾಪು ಬಂದಿತ್ತು. ಆದರೆ ಹಣೆಯ ಮೇಲೆ ಮೊದಲಿನಂತೆಯೇ ತಿಲಕ. ಕೊರಳಿನಲ್ಲಿ ಮೊದಲಿನಂತೆಯೇ ತಾಯತವಿತ್ತು. "ರಾಂ ರಾಂ ಮಾಜಿ, ರಾಂ ರಾಂ ಬೆಹನ್ ಜೀ, ರಾಂ ರಾಂ" ಎನ್ನುತ್ತಾ ನಮ್ಮೆಲ್ಲರಿಗೂ ನಮಸ್ಕರಿಸಿದ. "ಏಕೆ ಬಂದಿದ್ದು" ಎಂದು ಅಜ್ಜಿ ಪ್ರಸ್ತಾವನೆ ಮಾಡಿಯೇ ಬಿಟ್ಟರು.

"ಮಾಜಿ, ನಿಮ್ಮೆಲ್ಲರ ದರ್ಶನ ಭಾಗ್ಯ ಲಭಿಸಿದ್ದು ಎಷ್ಟೋ ದಿನಗಳ ನಂತರ. ನಿಮ್ಮ ಆಶೀರ್ವಾದ ಇಲ್ಲದಿದ್ದರೆ ಮುಂಬೈನಲ್ಲಿ ನಾನು ಬದುಕುವುದಾದರೂ ಹೇಗೆ ಎಂದೆಲ್ಲಾ ಬೆಣ್ಣೆ ಹಚ್ಚುತ್ತಲೇ ಹೋದ" ಎರಡು ನಿಮಿಷಗಳಲ್ಲಿ "ಮೈಂ ಕ್ಯಾ ಕರೂ ರಾಂ ಮುಝೆ ಬುಡ್ಢಾ ಮಿಲ್‌ಗಯಾ" ಎಂಬ ಹಿಂದಿ ಹಾಡಿನ ಸ್ವರದಲ್ಲಿ ಕಿಸನ್ ಭಯ್ಯಾನ ಶರ್ಟಿನ ಕಿಸೆ ಕೂಗತೊಡಗಿತು. ಕಿಸನ್ ಭಯ್ಯಾ ಚಕ್ಕನೇ ಕಿಸೆಗೆ ಕೈ ಹಾಕಿ ತನ್ನ ಮೊಬೈಲ್ ಫೋನು ತೆಗೆದು "ಹಲೂ ಕಿಸನ್ ಇಸ್ಪೀಕಿಂಗ್" ಎಂದ. "ಟಿಂಡಾ, ತೂರಿ, ಭಿಂಡಿ, ಗಾಜರ್ ಸಬ್ ಹೈ... ಕ್ಯಾಲಾವೂ" ಎಂದ.

"ಓಹೋ ಸರಿ ಈತನಿನ್ನೂ ರಂಗಬಿಟ್ಟಿಲ್ಲ, ತರಕಾರಿ ವ್ಯಾಪಾರದಲ್ಲೇ ತೊಡಗಿದ್ದಾನೆ" ಎಂದು ಎಲ್ಲರಿಗೂ ವ್ಯಕ್ತವಾಯಿತು. ಮಾತು ಮುಗಿಸಿ ಹೆ ಹೆ ಎಂದು ನಗುತ್ತಾ "ಮಾಜಿ, ನಿಮ್ಮ ಬಾಲಕನನ್ನು ಬಿಡಬೇಡಿ... ಈಗ ನಿಮ್ಮ ಬಡಾವಣೆಯಲ್ಲಿ ನನ್ನ ಅಂಗಡಿಯೇನೋ ಇಲ್ಲ ಬಿಡಿ. ಆದರೆ ಎಂಟೇ ರಸ್ತೆಗಳ ನಂತರ ಬೆಸ್ಟ್ ಬಸ್ ಸ್ಟಾಪಿನ ಹತ್ತಿರ ನನ್ನ ಹೊಸ ವ್ಯಾಪಾರ ಪ್ರಾರಂಭಿಸಿದ್ದೇನೆ." ಎಂದು ಪೀಠಿಕೆ ಹಾಕಿದ.

"ಅಲ್ಲ ಕಿಸನ್. ಗಾರ್ಡನ್ ಫ್ರೆಷ್‌ನವರು ನಿನ್ನ ವ್ಯಾಪಾರವನ್ನೇ ಕಬಳಿಸಿಬಿಟ್ಟರಲ್ಲ. ನಿನ್ನ ಬೆಲೆಗಿಂತ ಎಷ್ಟೋ ವಾಸಿ ಅವರ ಬೆಲೆ' ಎಂದು ದಬಾಯಿಸಿದರು ಅಜ್ಜಿ.

"ಮಾಜಿ ನನ್ನ ಮಾತು ಸರಿಯಾಗಿ ಕೇಳಿ. ಹೌದು ಒಮ್ಮೆ ಅವರ ಬೆಲೆ ನನ್ನ ಬೆಲೆಗಿಂತ ಕಡಿಮೆ ಇದ್ದದ್ದೇನೋ ನಿಜ. ಆದರೆ ಈಗ.. ನಾನು ಬೆಂಡೆಕಾಯಿ ಈಗ ಹದಿನಾರಕ್ಕೆ ಮಾರಿದರೆ ಅವರದು ಇಪ್ಪತ್ತು.... ಇಂಗ್ಲೀಷ್ ಮಾತನಾಡುತ್ತಾ ಮೋಡಿ ಮಾಡಿದ ಆ ಮಕ್ಕಳಿಗೆ ವ್ಯವಹಾರ ತಿಳಿಯಬೇಡವೆ? ಅವರ ಬ್ಯಾಂಕಿನ ಸಾಲ ಈಗಲೇ ತೀರಸಬೇಕೆಂದು ಮ್ಯಾನೇಜರ್ ಹೇಳಿಬಿಟ್ಟರೆ ಏನು ಮಾಡುತ್ತಾರಂತೆ?" ಎಂದ ಕಣ್ಣು ಕೆಂಪು ಮಾಡಿಕೊಂಡು..

ಮುಂದುವರೆಸುತ್ತಾ "ಈಗ ನನ್ನ ಹತ್ತಿರವೂ ಮೊಬೈಲ್ ಫೋನಿದೆ. ಯಾವಾಗ ಬೇಕಾದರೂ ನೀವು ತರಕಾರಿ ಆರ್ಡರ್ ಮಾಡಬಹುದು. ಉತ್ತಮ ದರದಲ್ಲಿ ಮನೆಗೆ ತಂದು ಮುಟ್ಟಿಸುತ್ತೇನೆ.... ಬರೆದುಕೊಳ್ಳಿ ನನ್ನ ನಂಬರನ್ನು... 98210... ಎನ್ನುತ್ತಾ ತನ್ನ ಹತ್ತು ಅಂಕೆಯ ನಂಬರನ್ನು ಅಪ್ಪಟ ಗಂಗಾತೀರದ ಭಾಷೆಯಲ್ಲಿ ಉಲಿದು ಹೇಳಿದ.

ಅಷ್ಟರಲ್ಲಿ ಅವನ ಫೋನು ಮತ್ತೆ ಬುಡ್ಢಾಮಿಲ್‌ಗಯಾ ಎಂದು ಹಾಡಿತು. "ಹಲೋ.... ಜೀ.... ಮೇಮ್ ಸಾಬ್, ತುರಂತ್ ಲಾತಾ ಹೂಂ" ಎಂದವನೇ ಇನ್ನೊಂದು ಕೈಯಿಂದ ಪಾಕೆಟ್ ಬುಕ್ ತೆಗೆದುಕೊಂಡು ಏನನ್ನೋ ಬರೆದುಕೊಂಡ. ಮತ್ತೆ ಯಾರಿಗೋ ಫೋನ್ ಮಾಡುತ್ತಾ "ಶಿವ ಚರಣ್, ಬದಿಯ ಕಾಸ್ಮೊಪಾಲಿಟನ್ ಬಿಲ್ಡಿಂಗಿನ ಹದಿನೇಳನೇ ಅಂತಸ್ತಿನಲ್ಲಿರುವ M-21 ಮನೆಯ ಮೇಮ್ ಸಾಹೇಬರಿಗೆ ಈಗಲೇ ಎರಡು ಕಿಲೋ ಆಲೂ, ನಾಲ್ಕು ಕಿಲೋ ಈರುಳ್ಳಿ, ಒಂದು ಕಿಲೋ ಕಾಲಿಫ್ಲಾವರ್ ತಲುಪಿಸು... ಹೋದ ಸಲ ಅವರಿಂದ ಹದಿನೇಳು ರೂಪಾಯಿ ಬಾಕಿ ಇತ್ತು. ಅದನ್ನೂ ಸೇರಿ ಹಣ ತೆಗೆದುಕೋ" ಎಂದ.

ನನ್ನತ್ತ ನೋಡುತ್ತಾ "ದೀದೀ ಈಗಂತೂ ಪುರಸತ್ತೇ ಇಲ್ಲ. ಈ ಮೊಬೈಲ್ ಫೋನು ಬಂದಾಗಿನಿಂದ ಯಾವುದೇ ತೊಂದರೆ ಇಲ್ಲ."

ನಾನೂ ಎಂ.ಬಿ.ಎ.ಗೆ ಈಗ ತಾನೇ ಸೇರಿಕೊಂಡಿದ್ದೆ. ಬ್ರಿಟನ್ನಿನ ರಾಜ್‌ಕುಮಾರ ಚಾರ್ಲ್ಸ್ ನಮ್ಮ ಡಬ್ಬಾವಾಲಾರನ್ನು ಮೆಚ್ಚಿ ಹೋದ ಮೇಲೆ ಈಗ ನನಗೂ ಈ ಮುಂಬೈ ವ್ಯಾಪಾರಿಗಳ ಮೇಲೆ ಕೊಂಚ ಆಸಕ್ತಿ ಬೆಳೆದಿತ್ತು.

"ಕಿಸನ್ ಭಯ್ಯಾ. ನಿನ್ನ ವ್ಯವಹಾರ ಲಾಭದಾಯಕವಾಗಿ ಮುಂದುವರೆದಿದೆ ತಾನೆ?" ಎಂದೆ.

ಕಿಸನ್ ಮುಗುಳ್ನಗೆ ಬೀರಿದ. "ಎಲ್ಲಾ ಮೊಬೈಲ್ ಫೋನಿನ ಕೃಪೆ, ನೋಡಿ.. ದಾದರಿನ ತರಕಾರಿ ಹೋಲ್‌ಸೇಲ್ ಮಾರ್ಕೆಟ್ಟಿನಲ್ಲಿ ಈಗ ನನ್ನ ತಮ್ಮ ರಾಧೇಶ್ಯಾಮ್ ಕೆಲಸ ಮಾಡುತ್ತಾನೆ. ಬೆಳಿಗ್ಗೆ ಅವನು ನನಗೆ ತರಕಾರಿಯ ದರ ಮೊಬೈಲಿನಲ್ಲಿ ಹೇಳುತ್ತಾನೆ. ನಾನು ಅದನ್ನು ಗುರುತು ಹಾಕಿಕೊಂಡು. ಶಿವ ಚರಣ್ ನನ್ನ ಚಿಕ್ಕಮ್ಮನ ಮಗನಿಗೆ ಮೊಬೈಲಿನಲ್ಲಿ ಹೇಳಿ ಇಷ್ಟಿಷ್ಟು ತಾ ಎಂದು ಹೇಳುತ್ತೇನೆ. ಶಿವ ಚರಣ್ ಟ್ಯಾಕ್ಸಿಯಲ್ಲಿ ತರಕಾರಿ ತಂದುಬಿಡುತ್ತಾನೆ. ಆಮೇಲೆ ಗ್ರಾಹಕರಿಗೆ ಫೋನು ಮಾಡಿಕೇಳುತ್ತೇನೆ. ಅವರ ಆರ್ಡರುಗಳ ಪ್ರಕಾರ ತರಕಾರಿ ಸಪ್ಲೈ ಮಾಡುತ್ತೇನೆ. ಎಲ್ಲ ಕೆಲಸ ಮೊಬೈಲಿನಲ್ಲಿ. ಏನಾದರೂ ತರಕಾರಿ ಮಿಕ್ಕರೆ ನನ್ನ

ಹಳ್ಳಿಯವನೇ ಆದ ಚಂದೂ ಭಯ್ಯಾನ ಕ್ಯಾಂಟೀನಿನ ಫ್ರಿಜ್ಜಿನಲ್ಲಿಟ್ಟು ಬಿಡುತ್ತೇನೆ. ಅವನಿಗೂ ದಿನಕ್ಕೆ ಬೇಕಾದ ತರಕಾರಿ ಕಮ್ಮಿದರದಲ್ಲಿ ಕೊಟ್ಟು ಬಿಡುತ್ತೇನೆ.

ಒಂದು ದಿನ ಏನಾಯ್ತು ಗೊತ್ತೆ! ನಿಮ್ಮ ಗಾರ್ಡನ್ ಫ್ರೆಷ್ ನವರ ಲಾರಿ ಬರದೆ ಪಜೀತಿಯಾಗಿ ಹೋಗಿತ್ತು. ಅವರ ಬಿಲ್ಡಿಂಗಿನ ವಾಚ್‌ಮೆನ್ನನ ಮೂಲಕ ಮೊಬೈಲಿನಲ್ಲಿ ಸುದ್ದಿ ತಿಳಿದ ತಕ್ಷಣ. ನಾನೇ ದಾದರಿನ ಮಾರ್ಕೆಟ್ಟಿನಿಂದ ತರಕಾರಿ ತಂದು ಅವರ ವ್ಯಾನಿಗೆ ತಲುಪಿಸಿದೆ. ಈಗ ನನ್ನ ಹತ್ತಿರ ತರಕಾರಿ ಕಡಿಮೆ ಆಗುವುದಿಲ್ಲ... ಆದರೆ ಅವರ ಹತ್ತಿರ ಕಡಿಮೆಯಾದರೆ, ನನಗೇ ಮೊಬೈಲಿನಲ್ಲಿ ಹೇಳುತ್ತಾರೆ.. ಎಷ್ಟೇ ಆಗಲಿ ಹೆಣ್ಣುಮಕ್ಕಳು.... ನನಗೆ ತಂಗಿಯರಂತೆ. ತರಕಾರಿ ತಂದು ಹಾಕುತ್ತೇನೆ'' ಎಂದ!

''ಆದರೆ ನಮ್ಮ ಮನೆಗಳಿಗೆ ನೀನು ಮತ್ತೆ ಬರುವುದಿಲ್ಲವೆ? ಎಂದು ಅಮ್ಮ ಕೇಳಿದರು''.

''ಮೊಬೈಲಿನಲ್ಲಿ ನೀವು ತಿಳಿಸಿದರೆ ಸಾಕು. ಐದೇ ನಿಮಿಷಗಳಲ್ಲಿ ಈ ಪಾಮರ ಹಾಜರಾಗಿಬಿಡುತ್ತಾನೆ'' ಎಂದ ನಾಟಕೀಯವಾಗಿ .

''ಎಸ್ ಎಮ್ ಎಸ್ ಮೆಸೇಜ್ ಕಳಿಸಿದರೆ'' ಎಂದೆ ನಾನು ತಲೆ ಹರಟೆಯಿಂದ ''ದೀದೀ ಇಂಗ್ಲೀಷ್ ಬರದ ಹುಂಬ ಎಂದು ಕೊಂಡಿದ್ದೀರಾ? ನನ್ನ ಅಕ್ಕನ ಮಗ ನಂದೂ ಈಗ ನನ್ನ ಜತೆಯೇ ಇದ್ದಾನೆ. ಅವನು ಓದಿ ಹೇಳುತ್ತಾನೆ. ನಿಮ್ಮ ತರಕಾರಿ ಐದು ನಿಮಿಷಗಳೊಳಗೆ ಬಂದು ಸೇರುತ್ತದೆ'' ಎಂದ.

ಅಜ್ಜಿಗೆ ಯಾಕೋ ಇನ್ನೂ ಸಂಶಯ ನಿವಾರಣೆ ಆಗಿರಲಿಲ್ಲ. ''ಕಿಸನ್.. ನೀನು ಏನಾದರೂ ಹೇಳು.. ನಿನ್ನ ಬೆಲೆ ತುಂಬಾ ದುಬಾರಿ ಅಲ್ಲದೇ ತೂಕದಲ್ಲೂ ನಿನ್ನದು ಕೊಂಚ ಮೋಸ. ಅದೇ ಗಾರ್ಡನ್ ಫ್ರೆಷನ್ ಮಕ್ಕಳು ಸರಿಯಾಗಿ ತೂಕ ಕೊಟ್ಟು ಬಿಡುತ್ತಾರೆ'' ಎಂದು ಬಾಣ ಬಿಟ್ಟರು.

''ಸರಿ ಬಿಡಿ ಮಾಜಿ... ನಿಮಗೆ ನನ್ನ ಮೇಲಿನ ಕೋಪ ಯಾವಾಗಲೂ ಇದ್ದದ್ದೆ... ಬಿಲ್ಡಿಂಗಿನ ಕೆಳಗಿಳಿದು ಬಂದು ಗಾರ್ಡನ್ ಫ್ರೆಷ್‌ನ ವ್ಯಾನಿನತ್ತ ತಿರುಗಿ ತರಕಾರಿ ಭಾರ ಹಿಡಿದು ಕೊಂಡು ಬರುವುದು ಹೇಗೆ? ಒಂದು ಮೊಬೈಲಿಗೆ ಫೋನಾಯಿಸಿ ನಿಮ್ಮ ಹುಕುಂ ಹೇಳುವುದು ಹೇಗೆ? ಮನೆಯ ಮುಂದೆ ಐದು ನಿಮಿಷಗಳಲ್ಲಿ ನಾನು ಹಾಜರಾಗುತ್ತೇನೆ. ನಿಮಗೂ ಅನುಕೂಲ ನಿಮ್ಮಂತಹ ಹಿರಿಯರಿಗೆ ಸಹಾಯ ಮಾಡಿ ನಿಮ್ಮ ಆಶೀರ್ವಾದ ಪಡೆಯುವುದು ನನಗೂ ಯೋಗವೇ ಸರಿ. ಒಬ್ಬರಿಗೊಬ್ಬರು ಸಹಕಾರ ಕೊಟ್ಟರಷ್ಟೇ ಈ ಜೀವನ ತಾನೆ. ಸರಿ ಬರುತ್ತೇನೆ. ರಾಂ ರಾಂ ಮಾಜಿ, ರಾಂ ರಾಂ ಬೆಹನ್ ಜೀ ರಾಂ ರಾಂ ದೀದೀ'' ಎನ್ನುತ್ತಾ ಹೊರಡಲುನುವಾದ.

ಅಷ್ಟರಲ್ಲಿ ಮತ್ತೆ ಬುಡ್ಢಾಮಿಲ್‌ಗಯಾ ಹಾಡು... ಕಿಸನ್ ಸೆಲ್ ಫೋನು ನೋಡುತ್ತಾ ''ಹಲೂ.. ಹೇಳಿ ರಮ್ಯಾದೀದಿ.. ಓ.... ಗೀತಾ ದೀದಿ ತಾನೆ? ಏನೇನು ಬೇಕಿತ್ತು? ಎಂದ

ಆಗಲೇ ನನಗೆ ನೆನಪಾಗಿದ್ದು... ಗಾರ್ಡನ್ ಫ್ರೆಷನ್ ನಾಲ್ವರು ಮಾಲೀಕರಲ್ಲಿ, ಇಬ್ಬರ ಹೆಸರು. ರಮ್ಯಾ ಮತ್ತು ಗೀತಾ..

''ವಾಹ್! ಮೊಬೈಲ್ ಫೋನೇ... ಎಲ್ಲ ನಿನ್ನ ಚಮತ್ಕಾರ'' ಎಂದುಕೊಂಡೆ. ಎಲ್ಲವೂ ಆ ನಂದಲಾಲಾನ ಮಹಿಮೆಯೇ!

ಪ್ಲೀಸ್ ನಂಗೊಂದು ಹೆಸರು ಬೇಕು

- ಎಸ್. ಜಯಸೂರ್ಯ ನಾರಾಯಣಪ್ಪ

ಮನೆ ಕಟ್ಟಾಯ್ತು. ಹೊಸದಾಗಿ ಸುಣ್ಣ ಬಣ್ಣಗಳಿಂದ ನವ ವಧುವಿನಂತೆ ಅಲಂಕರಿಸಿಕೊಂಡು ಎದ್ದು ನಿಂತಿದೆ. ಅದರ ಅಂದ ಚಂದಕ್ಕೆ ಹಾದೀಲಿ ಹೋಗಿ ಬರೋರೆಲ್ಲ ಒಮ್ಮೆ ಕತ್ತೆತ್ತಿ, ಒಂದ್ನಿಮಿಷಾನಾದ್ರೂ ನಿಂತು ನೋಡೇ ಮುಂದೆ ಹೋಗೋದು ಕಂಡು ನನಗಂತೂ ಬಲು ಹೆಮ್ಮೆ. ನನ್ನ ಮನೆ ಅನ್ನೋ ಬಿಂಕ ಬೇರೆ. ಇನ್ನು ಮನೆ ಮಂದೀಗೋ ದಿನಾ ಎಲ್ಲಾ ಅದರದ್ದೇ ಮಾತು. ಅಪ್ಪ ಅಮ್ಮ ನನ್ನವಳು ಮಕ್ಳು ಎಲ್ರೂ ಒಂದಲ್ಲ ಹತ್ತು ಬಾರಿ ಅದರತ್ತಲೇ ತಿರುಗಿ ನೋಡೋದೇನು ಬಂತು, ಅದೆಷ್ಟೊತ್ಗೆ ಅಲ್ಲೀಗೋಗಿ ಠಿಕಾಣಿ ಹೂಡೋದೂ ಅಂತ ಲೆಕ್ಕ ಹಾಕಿದ್ದೇ ಹಾಕಿದ್ದು. ನಂ ಪುಟಾಣಿ ಅದೇ ನಂ ಕಡೇ ಕೂಸು ನಾಲ್ಕರ ಹೆಣ್ಣು..... "ಅಪ್ಪಾ ಹೊಸಾ ಮನೇಗೆ ಯಾವಾಗ ಹೋಗೋದು" ತನ್ನ ಮುದ್ದು ಮುದ್ದಾದ ಬಾಯಿಂದ ಕೇಳಿದ ಕೂಡ್ಲೆ ಅವಳನ್ನೆತ್ತಿ ಮುದ್ದಾಡಿ "ಹೋಗೋಣಾ ಕಂದ ಹೋಗೋಣಾ" ಅಂತ ಊರಗಲ ಮುಖಮಾಡಿ ನಿಲ್ತೀನಿ - ಆಗ ಅವಳಮ್ಮ ಒಳಗಿನಿಂದ ಓಡ್ಬರ್‍ತಾಳೆ.

"ಅಲ್ಲಾ ಇದ್ಯಾಕೆ ನೀವು ಮೀನಾ ಮೇಷ ಎಣಿಸ್ತಿದೀರ. ಇಷ್ಟು ದಿನ ಅದಾಗಿಲ್ಲ ಇದಾಗಿಲ್ಲ ಅಂತ ರಾಗ ತೆಗೀತಿದ್ರಿ, ಈಗ ನೋಡಿದ್ರೇ ಆಗ ಈಗ ಅಂತ ಕಾಲದೂಡ್ತಿದೀರಲ್ಲಾ" ಸ್ವಲ್ಪ ಗಟ್ಟೀಗೇ ಅಂದಾಗ್ಲಂತೂ ನನಗೂ ಹೌದಲ್ಲಾ ಅನ್ಸುತ್ತೆ.

"ಅದ್ಕೆ ದಿನಾ ಕೂಡಿ ಬರ್‍ಬೇಡ್ವೇನೇ. ಒಳ್ಳೇ ಗಳಿಗೆ ಬರಬೇಕು. ನಂ ಹೆಸರಿನ ಬಲಕ್ಕೆ ಹೊಂದಾಣಿಕೆಯಾಗ್ಬೇಕು...."

"ಅಂದ್ರೇ ಮೂಢನಂಬಿಕೆ ಮೇಲೆ ಮಾರುದ್ದ ಲೇಖನ ಬರ್‍ದು ಬರ್‍ದು ಕಳಿಸ್ತೀರ...." ಮಧ್ಯೆ ಅವಳದ್ದೊಂದು ಕೊಂಕು ನುಡಿ. "ಹೇಳೋದೊಂದು, ಮಾಡೋದೊಂದು ನೋಡಿದ್ರೇ....".

"ಅಲ್ಲೇ ನಂಗೇನು ಎಲ್ಲಾ ವಾರ ದಿನ ಒಂದೇ ಆದ್ರೆ ನಂ ಮಕ್ಳು ಮುಂದೆ ಬಾಳಿ ಬದುಕ್ಬೇಕಲ್ವೇ. ನಂ ಪೀಳಿಗೆ ಅಭಿವೃದ್ಧಿ ಪಥದಲ್ಲಿ ವೃದ್ಧಿಯಾಗ್ಬೇಕಾದ್ರೆ ಒಳ್ಳೇ ದಿನ ಕೂಡ್ಬರ್‍ಬೇಕು. ಎಂತೆಂತ ವಿಜ್ಞಾನಿಗಳೇ ಹೇಳೋದು ಒಂದಾದ್ರೂ ರಾಕೆಟ್ ಹಾರ್‍ಸೋವಾಗ ದೀಪ ಹಚ್ಚಿ ಆರತಿ ಬೆಳಗಿ ರಾಹುಕಾಲ ಗುಳಿಕಕಾಲ ನೋಡೀನೇ ಮುಂದುವರೆಯೋದು."

"ಅಯ್ಯೋ ಸುಮ್ನಿರಿ ಸಾಕು ನಿಂ ಬಡಿವಾರ, ಹೋಗ್ಲಿ ಶಾಸ್ತ್ರಿಗಳನ್ನಾದ್ರೂ ಕೇಳಿ ಮುಂದಿನ ಏರ್ಪಾಡು ಮಾಡಿದ್ರಾ...."

"ಕೇಳ್ದೇ ಇರ್ತೇನ್ಯೇ... ತಾಳು, ತಾಳು, ಸ್ವಲ್ಪ ನಿಧಾನ ಅದೂ ಅಲ್ದೇ...." ಏನು ಅಂತ ನನ್ಮುಖಾನೇ ದುರುದುರು ನೋಡಹತ್ತಿದ್ಳು.

"ನೀವೆಲ್ಲ ಅಲ್ಲೀಗೋಗ್ಬಿಟ್ರೆ ಮನೆಗೆ ಹಚ್ಚಿರೋ ಸುಣ್ಣ ಬಣ್ಣ ಅದರ ಆಕಾರ ಎಲ್ಲಾ ಸಿಕ್ಕಾಪಟ್ಟೆ ಉಲ್ಟ ಆಗೋಗುತ್ತೆ."

"ಅಂದ್ರೆ?"

"ಅಂದ್ರೇನು ಇದಾರಲ್ಲ ನಿನ್ನಕಪಿ ಸೈನ್ಯ. ಅವು ಸುಮ್ನೆ ಇದ್ದಾವ. ಗೋಡೆ ಮೇಲೆಲ್ಲಾ ತಮ್ಮ

ತಮ್ಮ ಹೆಸರು ಕುಲ ಗೋತ್ರ ಎಲ್ಲ ಮುದ್ರಿಸ್ತಾರೆ. ಸಿಕ್ಕಿದ ಕಡೆ ಲೆಕ್ಕ ಗೀಚೋದು, ಈ ಪುಟಾಣಿ ಇದಾಳಲ್ಲ ಅವಳ್ದೇ ಮನೆ, ಗೋಡೇನೇ ಸ್ಲೇಟು... ಅದರ ಮೇಲೆಲ್ಲಾ ಅ ಆ ಇ ಈ ಬರೀತಾಳೆ..."

"ಏನಂದ್ರೀ?"

"ಹೂನೇ ನೋಡು ಇಲ್ಲಿ ಯಾವ ಗೋಡೆ ತಾನೇ ಚೊಕ್ಕಟವಾಗಿದೆ."

ಅವಳು ತಿರುಗಿದ್ಲು ನಿಜವಾಗಿ ಅವಳೇ ಪೆಚ್ಚಾದ್ಲು.

"ಅಲ್ಲಾ ಇದು ಬಾಡಿಗೆ ಮನೆ. ಆದ್ರೆ ಅದು ನಂ ಸ್ವಂತ ಮನೆ ಅಲ್ವಾ."

"ಇಲ್ಲಿ ರೂಢಿಯಾದ್ಮೇಲೆ ಕೈ ಸುಮ್ನಿರುತ್ತೇ?"

"ಅದಕ್ಕೆ?"

"ಅದಕ್ಕೇ ಇಲ್ಲೇ ಇದ್ದು ಯಾರ್ಗಾದ್ರೂ ಒಳ್ಳೆ ಗೃಹಸ್ಥರಿಗೆ ಬಾಡಿಗೆಗೆ ಕೊಟ್ಟಿರೋಣಾ ಅನ್ಸಿದೆ."

"ಹಾ....!!!" ಅವಳು ತೆರೆದ ಬಾಯಿ ಮುಚ್ಚೇ ಇರ್ಲಿಲ್ಲ. ವರಾಂಡದಲ್ಲಿದ್ದ ನನ್ನಮ್ಮನ ಕಿವಿಗೆ ಈ ಮಾತು ಬಿದ್ದಿರಬೇಕು. ಸೊಂಟ ಎತ್ತಿ ಏದುಸಿರು ಬಿಡ್ತಾ ಒಳಗೆ ಬಂದವರೇ "ಅಯ್ಯೋ ವಾಸು ನಾವಿನ್ನೆಷ್ಟು ದಿನ ಇದ್ದೇವೋ ಏನೋ ನಾಲ್ಕು ದಿನಾನಾದ್ರೂ ಆ ನಿನ್ನ ಮನೇಲಿ ಕೂತು ಉಂಡು ನಕ್ಕು ನಲೀಬೇಡ್ವೇನೋ. ಅಷ್ಟು ಚೆನ್ನಾಗಿ ಮನೆ ಕಟ್ಸಿ ಬಾಡಿಗೆ ಕೊಡ್ತೀನಿ ಅಂತೀಯಲ್ಲೋ" ನೊಂದು ನುಡಿದ್ರು.

"ಇಲ್ಲಮ್ಮಾ ತಮಾಷೆಗೆ ಅಂದೆ ಅಷ್ಟೆ ಛೆ ಛೆ ಅಪಶಬ್ದದ ಮಾತೆಲ್ಲ ಆಡ್ಬೇಡ. ಶುಭಕಾರ್ಯ ಶುಭಸ್ಯ ಶೀಘ್ರಂ ಅಂತ ಪೂರೈಸ್ಬಿಡ್ಬೇಕು. ಈಗ ಹೇಳು ಅದಕ್ಕೊಂದು ಹೆಸರಿಡ್ಬೇಕು ಅಂತಿದೀನಿ ಏನಿಡೋಣ?"

ಅಮ್ಮನಿಗೆ ಖುಷಿಯೋ ಖುಷಿ ಮಗ ನನ್ಮಾತು ಕೇಳ್ತಿದ್ದಾನಲ್ಲಾ ಅಂತ ಇರ್ಬೇಕು.

"ತಾಳು ನಿನ್ನಪ್ಪನ ಕೇಳ್ತೀನಿ"

"ಬೇಡಮ್ಮಾ ನಿನ್ನಭಿಪ್ರಾಯ ಹೇಳು ಆಮೇಲೆ ನಾನೇ ಅಪ್ಪನ್ನ ಕೇಳ್ತೀನಿ."

"ಹಾಗಾದ್ರೇ ನಿನ್ಹೆಸ್ರು ವಾಸು.... ವಾಸುದೇವ ನಿನ್ನಪ್ಪನ ಹೆಸ್ರು ಭಾಸ್ಕರ..."

"ಅಲ್ಲೇ ಗಂಡನ ಹೆಸ್ರು ಹೇಳೇ ಅಂತ ಇನ್ನಿಲ್ಲದ ಒತ್ತಾಯ ಮಾಡ್ತಾ ಕೇಳ್ದಾಗ ನೀನು ಆಗ ಏನ್ಮಾಡ್ದೆ ನೆನಪಿದ್ಯೇ...." ಅಪ್ಪಂಗೆ ತಮ್ಮ ಮದುವೆ ದಿನದ ನೆನಪು.

"ಅಯ್ ಸುಮ್ನಿರಿ. ಯಾವಾಗಿನ ಕಾಲದ್ದೋ ನಿಮ್ದು ಪುರಾಣ ಬೇಡ. ಈಗ ಎಲ್ರೂ ಹೆಸರಿಡ್ದೇ ಕೂಗೋದೇನು... ಮಾತಾಡೋದು ಹೆಸರಿಡ್ದೇ.."

ಅಮ್ಮನ ಮಾತ್ಗೆ ಎಲ್ರೂ ನಕ್ರು.

ಪುಟಾಣಿ ಹೇಳಿದ್ಲು "ನನ್ಹೆಸ್ರು ಇಟ್ಬಿಡಪ್ಪಾ" ಅವಳ ಹೆಸರು ಇಂದಿರ ಅದಕ್ಕೆ ಹಿರಿಯವ ಸರ್ ಅಂತ ಬಂದ. "ಅದ್ಹೇಗೆ ಇಡ್ತೀರೋ ನಾನೂ ನೋಡೇ ಬಿಡ್ತೀನಿ, ನಾನು ಹಿರಿಯವ. ನನ್ಹೆಸ್ರು ಯಾಕಿಡ್ಬಾರ್ದು?"

"ಅದೆಲ್ಲಾ ಬೇಡಪ್ಪಾ ಪ್ರತಿಯೊಬ್ರ ಹೆಸರಿನ ಒಂದೊಂದು ಮೊದಲ ಇಂಗ್ಲೀಷ್ ಅಕ್ಷರ ಸೇರ್ಸಿ ಇಟ್ಬಿಡೋಣಾ" ಇನ್ನೊಬ್ಬನ ಸಲಹೆ.

"ಯಾಕೋ..."

"ಯಾಕೇ ಅಂದ್ರೇ ದೊಡ್ಡವರಾದ್ಮೇಲೆ ನಂದು ನಂದು ಅಂತ ಮಾರಾಮಾರಿ ಆಗ್ಬಾರ್ದಲ್ಲಾ." ಅವಂದು ಪ್ರಚಂಡ ಬುದ್ಧಿ ಅನ್ನಿಸ್ತು.


"ಅಂದ್ರೇ ಎಲ್ಲಾರ್ದೂ ಒಂದೊಂದು ಅಕ್ಷರ. ಮೊದಲಿಂದ ಭಾಸ್ಕರ(ಅಪ್ಪ), ಈಶ್ವರಿ(ಅಮ್ಮ), ವಾಸು(ನಾನು), ಅಂಬುಜ(ನನ್ನವಳು), ರಮೇಶ(ಹಿರಿಯವ), ಶ್ರೀನಿವಾಸ(ಕಿರಿಯವ), ಇಂದಿರ(ಮಗಳು).

ಎಲ್ರೂ ಅಕ್ಷರಗಳ್ನ ಜೋಡಿಸಿದ್ರು. "BEVARSI"

ಸರಿಕೂಡಿಸಿ ಓದಿ, "ಥೂ ಪೆದ್ ಮುಂಡೇವ, ಶುಭದಾಯಕವಾದ ಹೆಸರಿಟ್ರೂ ಕೇಳಲಿಕ್ಕೂ ಹಿತವಾಗಿರ್ಬೇಕು. ಅಂತ ಹೆಸರಿಡೋದ್ಬಿಟ್ಟು 'ಬೇವರ್ಸಿ' ಅಂದ್ರೆ ನಗೆ ಪಾಟಲು ಆಗೋದಲ್ದೆ ಜನ ಏನಂದಾರೋ' ತಲೆ ಚಚ್ಚಿಕೊಂಡೆ. ಎಲ್ರ ಮುಖ ಜೋಲು ಮೋರೆ ಆಯ್ತು.

'ಸರಿ, ನಾಳೆ ನೋಡೋಣ. ಹೆಸರಿಂದೇ ಪುಸ್ತಕ ಸಿಕ್ತಾವೆ ಕೊಂಡ್ ತರ್ತೀನಿ' ಅಂತ ಅಂದಿನ ಸಭೆಗೆ ಮುಕ್ತಾಯ ಹಾಡ್ದೆ, ಆದ್ರೆ ಮಲಗಿದ್ಮೇಲೂ... "BEVARSI" ನೆನಪಿಗೆ ಬಂದು ಜನ್ಮ ಜಾಲಾಡ್ತು.

ಅದಕ್ಕೊಂದುಪಾಯ ಹೋಳೀತು ಯಾರಾದ್ರೂ ಒಂದು ಹೆಸ್ರು ಸೂಚಿಸಿದ್ರೆ ಒಳ್ಳೇದೊಂದು ಬಹುಮಾನ ಕೊಡೋಣಾ ಅಂತ... ಏನಂತೀರ... ಸರಿತಾನೆ. ಬೇಗ ... ಬೇಗ ಬರೀರಿ ಆ ಬಹುಮಾನ ನಿಮಗೇ ಯಾಕ್ಸಿಕ್ಬಾರ್ದು?



ಕುದುರೆ ಗರಾಜಿಗೆ ಹೋಗಿದೆ, ಬದಲಿಗೆ ಇದನ್ನ....

ಉಕ್ತಿ ಚಾಟೂಕ್ತಿ

- ಎನ್. ರಾಮನಾಥ್

ಕಾಂಗ್ರೆಸ್ ವರಿಷ್ಠರ ಬುಲಾವ್; ಎಂ.ಪಿ.ಪ್ರಕಾಶ್ ದಿಲ್ಲಿಗೆ - ಸುದ್ದಿ

ಮನೆಯಲ್ಲಿ ಮರೆಯಾದ ಮನ್ನಣೆಗೆ ಹಾತೊರೆದು ಮಾನವನೆ ಬದಿಗಿಟ್ಟು ಅನ್ಯರಾ ಕದ ಬಡಿದು
ಜನತೆಯಲಿ ಜತನದಲಿ ಇದ್ದ ಗೌರವ ತೊರೆದು ತನ್ನತನ ತೊರೆದಿರುವ ಯಾಚಕರು ಅವರಿಂದು

★★★

ಷೇರುಪೇಟೆ ದಿಢೀರ್ ಕುಸಿತ - ಸುದ್ದಿ

ಜಾರುಬಂಡೆಯ ಆಟದಂತೆಯೆ ಷೇರುಪೇಟೆಯ ರೀತಿಯು
ಏರೆ ಮೆಟ್ಟಲು ಹಂತಹಂತದಿ ಜಾರು ರಭಸದವನತಿಯು

★★★

ಜನವರಿ 30ರಂದು ಪ್ರಾಣಿವಧೆ ನಿಷೇಧ - ಸುದ್ದಿ

ಗಾಂಧಿಯ ಗುಂಡಿಗೆ ಗೋಡ್ಸೆಯ ಗುಂಡಿಗೆ ಸಿಲುಕಿದ ದಿನವೇ ಭೂತದಯೆ!
ಅಂದಿನ ಮುನ್ನವು, ಅಂದಿನ ನಂತರ ವಧೆ ನಡೆಯುವುದ್ಯೆ ನಿಲ್ಲದೆಯೆ.

★★★

ಹೌದು, ದೇವೇಗೌಡರು ಕರ್ನಾಟಕದಲ್ಲಿ ಹುಟ್ಟಬಾರದಿತ್ತು - ವಿ.ಕ. ತಲೆಬರಹ

ದಿನಪತ್ರಿಕೆಯಲಿ ಮುದ್ರಿತ ಸುದ್ದಿಗೆ ವಿರೋಧಪಕ್ಷದ ತಿದ್ದುಪಡಿ
ಕರ್ನಾಟಕದಲಿ ಎಂದಿಹ ಪದವನು ಮುದ್ರಿಸಬೇಡಿರಿ ತೆಗೆದುಬಿಡಿ!

★★★

ತೆಂಗಿನ ಮರಕ್ಕೆ ಮನುಷ್ಯನ ಬುದ್ಧಿ ಇದ್ದಿದ್ದರೆ ಅದು ಎತ್ತರ ಬೆಳೆಯುತ್ತಿರಲಿಲ್ಲ ಹಣಮಂತರಾವ್ - ವಿ.ಕ.

ನರನ ನಡತೆ ಮರಕೆ ಬಡಿಯೆ ತರುವು ಸ್ವಾರ್ಥಿಯಾಗುವುದು
ಭರಿತ ಫಲವ ಪರಗೆ ಕೊಡದೆ ಸಾರ ಅಡಗಿಸಿಡುವುದು

★★★

ಕ್ಷೌರಿಕರಿಗೆ ಪ್ರಾವಿಡಂಟ್ ಫಂಡ್ ಒದಗಿಸಲು ಚಿಂತನೆ - ಆಸ್ಕರ್

ನೋ ಆಸ್ಕರ್ ನೋ ಟೆಲ್ಲರ್ ಆಗಿದ್ದ ಜನಗಳಿಗೆ ಈ ಆಸ್ಕರ್ ಥಾಟುಗಳು ರಿಫ್ರೆಶಿಂಗ್ ಸವಿಗುಳಿಗೆ
ಈ ಆಫರ್ ಅಲ್ಲದೆಯ ಇನ್ಶೂರೆನ್ಸ್ ಫಂಡ್‌ಗಳಿಗೆ ಇರಬೇಕ್ಕೆ ಇಲ್ಲಿ ಬಹ ಬಡಪಾಯಿ ಉಳಿಯಲ್ಕೆ

★★★

ಬೇನಜೀರ್ ಗುಂಡಿಗೆ ಆಹುತಿ - ಸುದ್ದಿ

ಚೇಳಿನ ರೀತಿಯೆ ಉಗ್ರರ ರೀತಿಯು ತನ್ನ ತನಯರನೆ ತಿಂಬುವರು
ಬಾಳಿಗೆ ಬೆಲೆಯೇ ಇಲ್ಲವು ಪಾಕ್‌ನಲಿ ಉಗ್ರರು ತವರನೆ ತರಿದಿಹರು

★★★

ಮನನೊಂದು ಮಹಿಳೆ ಆತ್ಮಹತ್ಯೆ - ಸುದ್ದಿ

ಮಾನವೆ ಹೋದರು ಮಾನವ ಹೋಗನು ತೃಷ್ಣೆಯೆ ಬದುಕಿನ ಜೀವನದಿ
ಮನನೋಯದೆಯೂ ತನುವ ತ್ಯಜಿಸುವ ಮನುಜರು ಇಹರೇಂ ಈ ಜಗದಿ?

★★★

Mailing Date
5th of every month
Mailed at: Rajajinagar - PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR